ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ನವೆಂಬರ್, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೧೦

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಕಳೆದ ಒಂದೆರಡು ತಿಂಗಳ ರಾಷ್ಟ್ರ ಮತ್ತು ರಾಜ್ಯ ರಾಜಕಾರಣವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವವರಿಗೆ ಅವುಗಳಲ್ಲಿ ಸುಯೋಜಿತ ಮಾದರಿಯೊಂದು ಎದ್ದು ಕಾಣುತ್ತದೆ. ಇದು ನಮ್ಮ ಪ್ರಧಾನಿಗಳು ಪಾಕಿಸ್ತಾನದ ಸ್ವಾತಂತ್ರ್ಯದಿನವನ್ನು ರಾಷ್ಟ್ರವಿಭಜನೆಯ ಹಿಂಸಾಚಾರದ ನೆನಪಿನಲ್ಲಿ 'ಕರಾಳ ದಿನ'ವನ್ನಾಗಿ ಆಚರಿಸಬೇಕೆಂದು ಜನರಿಗೆ ಕರೆಕೊಟ್ಟಿದ್ದರಿಂದ ಆರಂಭವಾಗಿ ಆರೆಸ್ಸೆಸ್‌ನ ಸರಸಂಘಚಾಲಕ ಮೋಹನ ಭಾಗವತರು ತಮ್ಮ ವಿಜಯದಶಮಿ ಭಾಷಣದಲ್ಲಿ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ ಹೆಚ್ಚುತ್ತಿದೆ ಎನ್ನುತ್ತಾ ಆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದರವರೆಗೆ ವಿವಿಧ ರೂಪಗಳಲ್ಲಿ ಕಾಣಿಸಿಕೊಂಡಿದೆ. ಇದು ರಾಷ್ಟ್ರಮಟ್ಟದಲ್ಲಾದರೆ, ನಮ್ಮ ರಾಜ್ಯದ ಮಟ್ಟದಲ್ಲಿ ನೈತಿಕ ಪೋಲೀಸ್‌ಗಿರಿಯ ಘಟನೆಗಳು ಹೆಚ್ಚುತ್ತಾ, ಪೋಲೀಸ್ ಠಾಣೆಗಳಲ್ಲಿ ಕೇಸರಿ ವಸ್ತ್ರಧಾರಿಗಳಾಗಿ ಪೋಲೀಸ್ ಸಿಬ್ಬಂದಿ ಆಯುಧಪೂಜೆ ನಡೆಸಿದ್ದರವರೆಗೆ ಹಬ್ಬಿದೆ. ಇದನ್ನೆಲ್ಲ ನಮ್ಮ ಮುಖ್ಯಮಂತ್ರಿಗಳು ಅಮಾಯಕವಾಗಿ, 'ಕ್ರಿಯೆಗೆ ಪ್ರತಿಕ್ರಿಯೆ ಸಹಜ' ಎಂಬ ಮಾತಿನಿಂದ ಗುಡಿಸಿಹಾಕುವ ಪ್ರಯತ್ನ ಮಾಡಿರುವುದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡುವಂತೆ ಮಾಡಿದೆ. ಇತ್ತೀಚೆಗೆ ಕೆಲ ಹಿಂದೂವಾದಿ ಸಂಘಟನೆಗಳು ಪ್ರತೀಕಾರಾರ್ಥವಾಗಿ ಹಿಂಸೆಯ ಮಾತುಗಳನ್ನಾಡುತ್ತಾ ತ್ರಿಶೂಲ ದೀಕ್ಷೆಗಳ ಆಚರಣೆಗೆ ಇಳಿದಿರುವುದು ಇದರ ಪರಿಣಾಮವೇ ಎನ್ನಬಹುದು. ಜನರೇ ಕ್ರಿಯೆಗೆ ಪ್ರತಿಕ್ರಿಯೆಯಾಗಿ ಕಾನೂನನ್ನು ಕೈಗೆತ್ತಿಕೊಳ್ಳುವುದನ್ನು ಮುಖ್ಯಮಂತ್ರಿಗಳೇ ಸಮರ್ಥಿಸುವುದಾದರೆ ಅವರು ಮುಖ್ಯಸ್ಥರಾಗಿರುವ ಸರ್ಕಾರದ ಅಗತ್ಯವೇನಿದೆ?

ಇದೆಲ್ಲವೂ ಯಾರಿಗಾದರೂ ದೇಶಾದ್ಯಂತ ಕೋಮು ಧೃವೀಕರಣದ ಒಂದು ಸುಯೋಜಿತ ಕಾರ್ಯಕ್ರಮದಂತೆ ಕಂಡರೆ ಆಶ್ಚರ್ಯವೇನು? ಈ ಸುಯೋಜಿತ ಕಾರ್ಯಕ್ರಮದ ಹಿಂದೆ ಇರಬಹುದಾದ ಒಂದು ಪ್ರಮುಖ ಕಾರಣ, ಇತ್ತೀಚಿಗೆ ಹಲವು ಕಾರಣಗಳಿಂದಾಗಿ ಮೋದಿಯವರ ಜನಪ್ರಿಯತೆ ನಿರ್ಣಾಯಕವಾಗಿ ಕುಗ್ಗಲಾರಂಭಿಸಿದ್ದು, ಮುಂದಿನ ಲೋಕಸಭಾ ಚುನಾವಣೆಗಳಲ್ಲಿ ಬಿಜೆಪಿ ಅಧಿಕಾರ ಕಳೆದುಕೊಳ್ಳುವ ಸಾಧ್ಯತೆಗಳ ಸೂಚನೆ ಸಿಕ್ಕಿ ಮೋದಿ ನೇತೃತ್ವದಲ್ಲಿ ಆರಂಭವಾಗಿರುವ ಮಹತ್ವಾಕಾಂಕ್ಷೆಯ ಹಿಂದೂ ರಾಷ್ಟ್ರದ ಮಹಾಯೋಜನೆ ಎಲ್ಲಿ ಸ್ಥಗಿತಗೊಳ್ಳುವುದೋ ಎಂಬ ಆತಂಕ ಸಂಘಪರಿವಾರದಲ್ಲಿ ಆರಂಭವಾಗಿರುವುದು. ಈ ಎರಡೂ ಆತಂಕಗಳನ್ನು ನಿವಾರಿಸಿಕೊಳ್ಳಲು ಅದು ಕಂಡುಕೊಂಡಿರುವ ಪರಿಹಾರ ಸೂತ್ರವೆಂದರೆ ಕೋಮು ಧೃವೀಕರಣ. ಇದನ್ನು ಸಾಧಿಸಲು ಬೇಕಾದ ಸಿದ್ಧ ಸಿದ್ಧಾಂತವೂ, ಇದನ್ನು ವಿವಿಧ ನೆಲೆಗಳಲ್ಲಿ ಮತ್ತು ರೂಪಗಳಲ್ಲಿ ಕಾರ್ಯಗತಗೊಳಿಸಬಲ್ಲ ನಿಷ್ಠಾವಂತ ಸಂಘಟನೆಗಳೂ ಇವೆ. ಹಾಗೆ ನೋಡಿದರೆ ಮೋದಿ ಸರ್ಕಾರ ಏಳು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದೇ ಇವೆರೆಡರ ಬಹು ಜಾಣ್ಮೆಯ ಬಳಕೆಯಿಂದ. ಇದರ ಜೊತೆಯಾದದ್ದು ತಥಾಕಥಿತ 'ಸೆಕ್ಯುಲರ್' ಪಕ್ಷಗಳ ಭ್ರಷ್ಟ ರಾಜಕಾರಣ. ಮುಖ್ಯವಾಗಿ ಸಂಘ ಪರಿವಾರವು ತನ್ನ ಹುಟ್ಟಿನಿಂದಲೂ ಗುರಿಯಾಗಿರಿಸಿಕೊಂಡಿರುವ ಕಾಂಗ್ರೆಸ್ ಪಕ್ಷ ಓರ್ವ ಜನನಾಯಕನ ನಾಯಕತ್ವದಿಂದ ವಂಚಿತವಾಗುವಷ್ಟು ರಾಜಕೀಯವಾಗಿ ಬರಡಾದದ್ದು. ದೇಶವನ್ನು ವಸಾಹತುಶಾಹಿಯಿಂದ ವಿಮೋಚನೆಗೊಳಿಸಿ ಆರು ದಶಕಗಳ ಕಾಲ ರಾಷ್ಟ್ರನಿರ್ಮಾಣದಲ್ಲಿ ತೊಡಗಿಕೊಂಡದ್ದೆಂದು ಹೇಳಲಾಗುವ ಈ ಪಕ್ಷ, ಮನಮೋಹನ ಸಿಂಗ್ ಎಂಬ ಒಂದೂ ನೇರ ಚುನಾವಣೆಯನ್ನು ಗೆಲ್ಲಲಾರದ-ನಿಂತ ಎರಡೂ ಚುನಾವಣೆಗಳಲ್ಲಿ ಸೋತ-ವಿಶ್ವಬ್ಯಾಂಕ್‌ನ ಮಾಜಿ ಅಧಿಕಾರಿಯ ನಾಯಕತ್ವಕ್ಕೆ ಮೊರೆ ಹೋಗಬೇಕಾದ ಸ್ಥಿತಿ ತಲುಪಿತೆಂದರೆ ಏನು ಹೇಳುವುದು? ಆದರೆ ಕಾಂಗ್ರೆಸ್‌ನೊಳಗಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನಿಸಿದರೆ ಅದಕ್ಕೆ ಇದು ಇನ್ನೂ ಅರ್ಥವಾದಂತಿಲ್ಲ.

ವಿರೋಧ ಪಕ್ಷಗಳ ಈ ದೌರ್ಬಲ್ಯವೇನೇ ಇದ್ದರೂ, ಜನರಿಂದ ಆಳುವ ಸಾಂವಿಧಾನಿಕ ಆದೇಶ ಪಡೆದಿರುವ ಪಕ್ಷ ದೇಶದ ಎಲ್ಲ ಪ್ರಜೆಗಳ ಹಿತಕಾಯದೆ, ರಕ್ಷಣೆ ಕೊಡದೆ ತನ್ನದೇ ಕಾರ್ಯಕ್ರಮಸೂಚಿಯಂತೆ ಆಡಳಿತ ನಡೆಸಹೊರಡುವುದು ಆ ಆದೇಶವನ್ನು ಉಲ್ಲಂಘಿಸಿದಂತೆ. ಏಕೆಂದರೆ ಇಂತಹ ಕಾರ್ಯಕ್ರಮಸೂಚಿ ಸಂವಿಧಾನಕ್ಕೆ ವಿರುದ್ಧವಾದುದು. ದೇಶದ ಇಂದಿನ ದುರಾದೃಷ್ಟವೆಂದರೆ ಇಂತಹ ಉಲ್ಲಂಘನೆಗಳ ಬಗ್ಗೆ ಎಚ್ಚರಿಕೆ ನೀಡಬೇಕಾದ ನಮ್ಮ ಉನ್ನತ ನ್ಯಾಯಾಂಗವೂ ನಿರೀಕ್ಷಿತ ಕ್ರಿಯಾಶೀಲತೆಯನ್ನು ಪ್ರದರ್ಶಿಸದಾಗದಿರುವುದು. ಈ ಒಂದೆರಡು ತಿಂಗಳುಗಳಲ್ಲಿ ಅದು 'ವ್ಯವಸ್ಥೆ'ಯ ವಿರುದ್ಧ ಕೆಲ ದಿಟ್ಟ ಮಾತುಗಳ ಮೂಲಕ ಉತ್ಸಾಹ ಹುಟ್ಟಿಸಿರುವುದಾದರೂ, ವರ್ಷಕ್ಕೂ ಹೆಚ್ಚು ಕಾಲದಿಂದ ವಿಚಾರಣೆಗೆ ಎತ್ತಿಕೊಳ್ಳಲಾಗದಿರುವ ಕಾಶ್ಮೀರಕ್ಕೆ ಸಂಬಂಧಿಸಿದಂತೆ ಸಂವಿಧಾನ ತಿದ್ದುಪಡಿಗಳು, ಚುನಾವಣಾ ಬಾಂಡ್‌ಗಳ ಯೋಜನೆ ಅಥವಾ ಆರ್ಥಿಕ ಮಾನದಂಡಗಳ ಆಧಾರದ ಮೀಸಲಾತಿಯಂತಹ ರಾಜಕೀಯವಾಗಿ ನಿರ್ಣಾಯಕವೆನ್ನಿಸುವ ಪ್ರಕರಣಗಳ ಪರಿಹಾರದ ಕಡೆ ಗಮನ ಹರಿಸದಿದ್ದರೆ ಆ ಉತ್ಸಾಹ ಬಹುಕಾಲ ಉಳಿಯದಂಥದ್ದು. ಇಂತಹ ಪರಿಸ್ಥಿತಿಯೇ ಮೋಹನ ಭಾಗವತ್‌ರಂತಹವರಿಗೆ, ಮುಸ್ಲಿಮರ ಜನಸಂಖ್ಯೆಯ ಏರಿಕೆಯ ಆತಂಕ ಹುಟ್ಟಿಸುವಂತಹ ಆಧಾರರಹಿತ ಹೇಳಿಕೆಗಳನ್ನು ನೀಡಲು ಧೈರ್ಯ ಒದಗಿಸಿರುವುದು. ಏಕೆಂದರೆ ಪ್ರಸಕ್ತ ಸರ್ಕಾರವೇ ತನ್ನ ಜನಸಂಖ್ಯಾ ನಿರ್ವಹಣೆಯ ನೀತಿ ಹೇಗೆ ನಿರಾತಂಕಿತವೂ, ಸಮರ್ಪಕವೂ ಆಗಿದೆ ಎಂದು ಈ ಸಂಬಂಧದ ವಿವಾದವೊಂದರ ಸಂದರ್ಭದಲ್ಲಿ ಆಧಾರಸಹಿತವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಅಧಿಕೃತ ದಾಖಲೆ ಸಲ್ಲಿಸಿದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರವೇ ಹಿಂದೂ ಮತ್ತು ಮುಸ್ಲಿಂ ಸಮುದಾಯಗಳ ಸಂತಾನ ವೃದ್ಧಿ ಮಟ್ಟಗಳ ನಡುವೆ ಅಂತಹ ಹೆಚ್ಚಿನ ವ್ಯತ್ಯಾಸವೇನೂ ಇಲ್ಲದಿದ್ದು, ಸಮುದಾಯಗಳ ಮಟ್ಟದ ಬಡತನ ಕಡಿಮೆಯಾದಂತೆ ಈ ವ್ಯತ್ಯಾಸವೂ ಮಾಯವಾಗಲಿದೆ.

ಆದರೆ ಒಂದು ತಿಂಗಳ ಹಿಂದಷ್ಟೆ ಈ ದೇಶದ ಹಿಂದೂಗಳು ಮತ್ತು ಮುಸ್ಲಿಮರ ವಂಶವಾಹಿ ಮೂಲತಃ ಒಂದೇ ಜನಾಂಗದವರು ಎಂದು ಹೇಳಿದ್ದ ಸರಸಂಘಚಾಲಕರು ಈಗ ಇಂತಹ ಹೇಳಿಕೆಗಳನ್ನು ಏಕೆ ನೀಡತೊಡಗಿದ್ದಾರೆ ಎಂಬುದನ್ನು ಅರಿಯಲು ವಿಶೇಷ ಬುದ್ಧಿಮತ್ತೆಯೇನೂ ಬೇಕಿಲ್ಲ. ಭಾಗವತ್ ಅವರು ಇದಕ್ಕೆ ಬದಲಾಗಿ ತಮ್ಮ ಮೋದಿ ಸರ್ಕಾರದ ಆಡಳಿತದಲ್ಲಿ ದೇಶದ ಆರ್ಥಿಕತೆ ಏಕೆ ಒಂದೇ ಸಮನೆ ಸೊರಗುತ್ತಿದೆ? ಜನಸಾಮಾನ್ಯರ ಆದಾಯ ಕುಗ್ಗುತ್ತಿದ್ದಂತೆ ಅಂಬಾನಿ-ಅದಾನಿಗಳ ಆದಾಯ ಎರಡು ಪಟ್ಟು, ಮೂರು ಪಟ್ಟು ಹೆಚ್ಚುತ್ತಿರುವುದು ಹೇಗೆ?. ಜಾಗತಿಕ ಸಮೀಕ್ಷಾ ಸಂಸ್ಥೆಗಳು ಈಚೆಗೆ ಭಾರತದಲ್ಲಿನ ಪ್ರಜಾಸತ್ತೆಯ ಗುಣಮಟ್ಟ ಅವನತಿಯತ್ತ ಸಾಗುತ್ತಿದೆ ಎಂದು ಸೂಚಿಸುತ್ತಾ ಈಗ ನಮ್ಮ ದೇಶವನ್ನು 'ಭಾಗಶಃ ಪ್ರಜಾಸತ್ತೆ'ಯ ಗುಂಪಿಗೆ ಸೇರಿಸಿದೆ ಏಕೆ? ಜಾಗತಿಕ ಹಸಿವು ಸೂಚ್ಯಂಕದ ಇತ್ತೀಚಿನ ಸಮೀಕ್ಷಾ ವರದಿಯ ಪ್ರಕಾರ ೧೧೬ ದೇಶಗಳ ಪಟ್ಟಿಯಲ್ಲಿ ಭಾರತದ ಸ್ಥಾನ ಹೀನಾಯವಾಗುತ್ತಾ ಈಗ ನೆರೆಯ ಪಾಕಿಸ್ತಾನ, ಬಂಗ್ಲಾದೇಶ, ನೇಪಾಳಗಳಿಗಿಂತ ಕಡೆಯಾಗಿ ೧೦೧ನೇ ಸ್ಥಾನಕ್ಕೆ ಕುಸಿದಿದೆ ಏಕೆ? ಎಂದು ಯೋಚಿಸತೊಡಗಿದರೆ ಆಗ ಅದು 'ರಾಷ್ಟ್ರಹಿತ'ದ, ದೇಶಪ್ರೇಮ'ದ ಕೆಲಸವೆನ್ನಿಸಿಕೊಂಡೀತು.

ಕಳೆದ ಸಂಚಿಕೆಯ ಸಂಪಾದಕೀಯದಲ್ಲಿ ಸೂಚಿಸಿದ್ದಂತೆ ೨೦೨೪ರ ಮಹಾಚುನಾವಣೆಗಾಗಿ ಸಂಘ ಪರಿವಾರವು ಒಟ್ಟಿಗೆ, ಬಹು ಮುನ್ನೆಚ್ಚರಿಕೆಯ ಮತ್ತು ಬಹು ಸಮನ್ವಿತವಾದ ಕಾರ್ಯಚರಣೆಯನ್ನು ರೂಪಿಸಿ ಜಾರಿಗೆ ತರಲು ಹೊರಟಿದೆ. ಇದರ ಭಾಗವಾಗಿ ಅದು ಮುಂದಿನ ವರ್ಷ ನಡೆಯಲಿರುವ ಉ.ಪ್ರ. ವಿಧಾನಸಭಾ ಚುನಾವಣೆಗಳನ್ನು ಗೆದ್ದು ಮಹಾ ತಯಾರಿಯ ಅಡಿಪಾಯ ಹಾಕಬೇಕಿದೆ. ಅದಕ್ಕಾಗಿ ಅದು ಈ ಹಿಂದೆ ಇತರರು ಮಾಡಿದಾಗ ಖಂಡಿಸುತ್ತಿದ್ದ ಜಾತಿ ಲೆಕ್ಕಾಚಾರದ ರಾಜಕಾರಣವನ್ನು ಯಾವುದೇ ಎಗ್ಗಿಲ್ಲದೆ ಈಗ ಬಹು ನಿಖರವಾಗಿ ನಡೆಸಿದೆ. ಇದರ ಫಲವೇ ಕೆಲ ದಿನಗಳ ಹಿಂದೆ ಈ ರಾಜ್ಯದ ಲಖೀಂಪುರ-ಖೇರಿಯಲ್ಲಿ ರೈತರ ಗುಂಪಿನ ಮೇಲೆ ವಾಹನ ಹರಿಸಿ ನಡೆದ ರೈತರ ಹತ್ಯೆ ಮತ್ತು ಆನಂತರದ ಹಿಂಸಾಚಾರದಲ್ಲಿನ ಮತ್ತಷ್ಟು ಹತ್ಯೆಗಳು. ರಾಜ್ಯದಲ್ಲಿ ಬ್ರಾಹ್ಮಣರ ಓಲೈಕೆಗಾಗಿ, ಕಾಂಗ್ರೆಸ್‌ನಿಂದ ಯುವ ನಾಯಕ ಜಿತೇನ್ ಪ್ರಸಾದರನ್ನು ಸೆಳೆದು ಮಂತ್ರಿ ಮಾಡಿದ್ದು ಸಾಲದೆಂಬಂತೆ ಈ ಹತ್ಯೆಗಳ ಪ್ರಮುಖ ಆರೋಪಿ ಆಶೀಶ್ ಮಿಶ್ರಾನ ತಂದೆ, ಸ್ಥಳೀಯ 'ದಾದಾ' ಎಂದೆ ಕುಪ್ರಸಿದ್ಧನಾದ ಅಜಯ ಮಿಶ್ರ ತೇನಿಯನ್ನು ಕೇಂದ್ರದಲ್ಲಿ ಗೃಹ ರಾಜ್ಯಮಂತ್ರಿಯನ್ನಾಗಿ ನೇಮಕ ಮಾಡಿದ್ದೂ ಈ ಮಹಾಕಾರ್ಯಾಚರಣೆಯ ಭಾಗವಾಗಿಯೇ. ಹಾಗಾಗಿಯೇ ನಮ್ಮ ಘನತೆವೆತ್ತ ಪ್ರಧಾನಿಯವರಿಗೆ ಈ ಹತ್ಯೆಗಳ ಬಗ್ಗೆ ಖಂಡನೆ ಇರಲಿ, ವಿಷಾದದ ಒಂದು ಮಾತನ್ನೂ ಆಡಲಾಗಿಲ್ಲ ಮತ್ತು ಅಜಯ ಮಿಶ್ರಾನಿಂದ ರಾಜೀನಾಮೆ ಪಡೆಯಲೂ

(೪ನೇ ಪುಟಕ್ಕೆ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಪ್ರತಿ ತಿಂಗಳು ಸರಿಯಾದ ಸಮಯಕ್ಕೆ 'ಹೊಸ ಮನುಷ್ಯ' ಬರದಿದ್ದರೆ ಸಂಪಾದಕರ ಆರೋಗ್ಯದ ಬಗ್ಗೆ ಅವರಿವರಲ್ಲಿ ವಿಚಾರಿಸುವ ಸ್ವಭಾವ ನನ್ನದು. ಅಕ್ಟೋಬರ್ ಸಂಚಿಕೆಯಲ್ಲಿನ ಸಂಪಾದಕರ ಟಿಪ್ಪಣಿಗಳನ್ನು ಓದುತ್ತಿದ್ದರೆ ದೇಶ ಕುರಿತ ಚಿಂತೆ ತೀವ್ರಗೊಳ್ಳುತ್ತಾ ಹೋಗುವುದು. 'ಪ್ರಚಲಿತ'ದಲ್ಲಿನ ತಾಲಿಬಾನಿಗಳ ಆಫ್ಘಾನಿಸ್ತಾನದ ಬಗ್ಗೆ ನಿಮ್ಮ ಐತಿಹಾಸಿಕ ನೋಟ, ಆ ದೇಶದ ಬಗ್ಗೆ ಹಲವಾರು ವಿಚಾರಗಳು ತಿಳಿಸುವ ಒಂದು ಪ್ರಬುದ್ಧ ಲೇಖನ. ಹಾಗೇ 'ಕನ್ನಡಕ್ಕೆ ಇಲ್ಲದ ಕಿಕ್ಕು', 'ಹಿಂದುತ್ವವೂ ಸಂಸ್ಕೃತೀಕರಣವೂ' ಟಿಪ್ಪಣಿಗಳೂ ಕೂಡ. ಈ ಕಿಕ್ಕಿನ ಅನುಭವ ನನಗೇ, ನನ್ನ ಮನೆಯಲ್ಲಿಯೇ ಆಗುತ್ತಿರುವುದರಿಂದ, ಈ ಕಾಗದ ಬರೆಯಲೇಬೇಕೆಂಬ ಉತ್ಕಟಾಕಾಂಕ್ಷೆಯಾಯ್ತು. ಜನವರಿ ೨೦೨೦ರ ನಂತರದ ಎಲ್ಲ ಸಂಚಿಕೆಗಳಲ್ಲಿ, ಹೊಸತನ, ಸರಳತೆ, ಜೊತೆಗೆ ಓದುಗರು ಸುಮ್ಮನೆ ಓದಿ ಮರೆಯುವುದಲ್ಲ, ಓದಿ ಯೋಚಿಸುತ್ತಿರಬೇಕಾದಂತಹ ಲೇಖನಗಳು ಬರುತ್ತಿವೆ.

–ಕೆ.ಟಿ.ಮೋಹನ, ಬೆಂಗಳೂರು

ಅಕ್ಟೋಬರ್ 'ಹೊಸ ಮನುಷ್ಯ' ಒಂದು ಅರ್ಥದಲ್ಲಿ 'ಗಾಂಧೀಜಿ' ವಿಶೇಷ ಸಂಚಿಕೆಯೇ ಆಗಿದೆ. ವರ್ತಮಾನದ ಈ ಸಂದರ್ಭದಲ್ಲಿ ಗಾಂಧಿ ತತ್ತ್ವಗಳನ್ನು ಒರೆಗೆ ಹಚ್ಚಿ ನೋಡುವ ಪ್ರಯತ್ನ 'ಮಹಾತ್ಮ ಗಾಂಧಿ: ಒಂದು ನೆನಪು' ದಲ್ಲಿದ್ದರೆ ಗಾಂಧಿ ಅವರ ಕಾರ್ಯದರ್ಶಿ ಮಹದೇವ ದೇಸಾಯಿ ಅವರ ಕುರಿತ ರಾಮಚಂದ್ರ ಗುಹಾ ಬರೆದ ಲೇಖನ ಆ ಇಬ್ಬರನ್ನು ಇನ್ನಷ್ಟು ತಿಳಿಸಿಕೊಟ್ಟಿತು. ಹಾಗೆಯೇ, ಜಿ.ವಿ.ಆನಂದಮೂರ್ತಿ ಅವರ 'ನಮ್ಮೂರ ಕಾಮನಹಳ್ಳಿ', ಮರೆಯಾಗುತ್ತಿರುವ ನಮ್ಮ ಗ್ರಾಮ ಸಂಸ್ಕೃತಿಯ ಬಗ್ಗೆ ಎಚ್ಚರಿಸಿತು. ನಗರವಾಸಿ ಸುಶಿಕ್ಷಿತರಿಂದಾಗಿ, ತನ್ನ ಹಿರಿಮೆ ಕಳೆದುಕೊಳ್ಳುತ್ತಿರುವ ಜನಪದೀಯ ಆಚರಣೆಗಳ ಬಗ್ಗೆ ಲೇಖಕರು ವಿಷಾದಭಾವದಿಂದ ಬರೆದಿದ್ದಾರೆ. ನಮ್ಮವರ ಅವಜ್ಞೆಯೇ ಇದಕ್ಕೆ ಕಾರಣವಾಗಿರುವುದು ಖೇದಕರ.

–ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ನಿಮ್ಮ ಸಂಪಾದಕರ ಟಿಪ್ಪಣಿಯು ಎರಡೂ ಕಡೆಯ ಆತ್ಮವಂಚಕತೆಯನ್ನು ಸರಿಯಾಗಿ ಗುರುತಿಸಿ ತೋರಿಸಿದೆ. ದೇಶದ ಸಮಗ್ರ ಬೆಳವಣಿಗೆಯನ್ನು ಬಯಸುವ ಮನಸ್ಸು ಮಾತ್ರ ಇಂತಹ ನಿಷ್ಠುರ, ನಿಷ್ಪಕ್ಷಪಾತ ಮಾತುಗಳನ್ನು ಆಡಬಲ್ಲದು.

–ಜ.ನಾ. ತೇಜಶ್ರೀ, ಹಾಸನ

ತಾಲಿಬಾನ್ ಕುರಿತ ತಮ್ಮ ಬರಹ ಸಮಚಿತ್ತದ, ಸಂಯಮದ ವಿಶ್ಲೇಷಣೆ. ನೀವು ಹೇಳಿದಂತೆ ಪಶ್ಚಿಮದ ಪ್ರಜಾಪ್ರಭುತ್ವದ ಸೂತ್ರಗಳು ಸಾರಾಸಗಟಾಗಿ ಇಸ್ಲಾಮಿಕ್ ದೇಶಗಳಿಗೆ ಹೊಂದಲಾರದು. ಪಶ್ಚಿಮದ ಫಾರ್ಮುಲಾಗಳು, ಪಶ್ಚಿಮದ ಕಾಲನಿ ದೇಶಗಳಿಗಷ್ಟೆ ಸುಮಾರಾಗಿ ಹೊಂದಬಹುದು. ಪಶ್ಚಿಮ ಮಾಧ್ಯಮಗಳ ಅತಿರೇಕವೂ ತಾಲಿಬಾನಿಗಳನ್ನು ಸರಳೀಕರಣಗೊಳಿಸುತ್ತಿವೆ. ೭೦ರ ದಶಕದಲ್ಲಿ ಇದಿ ಅಮೀನ್, ೮೦ರ ದಶಕದಲ್ಲಿ ಸದ್ದಾಂ, ಗಡಾಫಿಗಳ ರಾಕ್ಷಸೀಕರಣ ಸಹ ನಡೆಸಿದ್ದು ಇದೇ ಮಾಧ್ಯಮಗಳು.

ಪೆಟ್ರೋಲ್ ಸಂಪತ್ತನ್ನು ಆರಾಧಿಸುವ ನಾವು ತಾಲಿಬಾನನ ದಾಯಾದಿಯಾದ ವಹಾಬನನ್ನು ಅಪ್ಪಿಕೊಳ್ಳುತ್ತೇವೆ. ತಾಲಿಬಾನನ ಪ್ರತಿರೂಪವಾದ ವಹಾಬಿ ನಡೆಸುತ್ತಿರುವ ದಬ್ಬಾಳಿಕೆಯನ್ನು ನಮ್ಮ ಮಾಧ್ಯಮಗಳು ಖಂಡಿಸಲಾರದ್ದು ಅವುಗಳ ವಿಕೃತಿ. ಸೌದಿಗಳು, ಅರಬ್ ಶೇಖರು ನಮಗೆ ದೈವಾಂಶರಾಗಿರುವುದು ನಮ್ಮ ಹಿಪೊಕ್ರಸಿ.

–ಎನ್.ಕೆ. ಮೋಹನರಾಮ್, ಬೆಂಗಳೂರು

ಎಂದಿನಂತೆ ಸಂಪಾದಕೀಯ, ಟಿಪ್ಪಣಿ, ಪುಸ್ತಕ ವಿಮರ್ಶೆ ಇಷ್ಟವಾದವು. ತಾಲಿಬಾನ್ ಕುರಿತ ಪ್ರಚಲಿತ–೨ರಲ್ಲಿ ಬೇರೇನನ್ನು ಹೇಳಲಿಲ್ಲ (ಪತ್ರಿಕೆ, ದೃಶ್ಯ ಮಾಧ್ಯಮಗಳಲ್ಲಿ ಕೇಳಿದೆ ಎನ್ನುವ ಅರ್ಥದಲ್ಲಿ)ಎನಿಸಿದೆ. ರಾಮಚಂದ್ರ ಗುಹಾ, ಮಹಾತ್ಮ ಗಾಂಧಿ ಒಂದು ನೆನಪು ಲೇಖನಗಳು ಇಷ್ಟವಾದವು.

–ಎಚ್.ಎಸ್. ರಾಮನಗೌಡ, ಕೊಂಡಿಕೊಪ್ಪ(ನವಲುಗುಂದ)

ಅಕ್ಟೋಬರ್ ಸಂಚಿಕೆಯು ಎಂದಿನಂತೆ ಹರಿತವಾದ ಸಂಪಾದಕೀಯ, ಸಾಹಿತ್ಯ ಸಂಸ್ಕೃತಿ ಇತ್ಯಾದಿ ಟಿಪ್ಪಣಿಗಳು ಗಮನ ಸೆಳೆಯುವಂತಿವೆ. ಅಫ್ಘಾನಿಸ್ತಾನದ ಐತಿಹಾಸಿಕ ವಿಶ್ಲೇಷಣೆಯ ಬರಹ, ಮಹಾದೇವ ದೇಸಾಯಿಯವರ ಕುರಿತ ರಾಮಚಂದ್ರ ಗುಹಾ ಅವರ ಲೇಖನ ಈ ಎರಡೂ ನಮ್ಮ ಅರಿವನ್ನು ವಿಸ್ತರಿಸುವಂತಿವೆ. ಪುಟಗಳ ಮಿತಿಯಲ್ಲಿಯೂ ಹಲವು ಕೃತಿಗಳನ್ನು ಕುರಿತ ವಿಮರ್ಶೆಗಳು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿವೆ. ನಮ್ಮ ದಿನಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಯ ಸ್ಥಾನ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಹೊಸ ಮನುಷ್ಯ ಹಲವು ಕೃತಿಗಳ ಪರಿಶೀಲನೆಗೆ ಅವಕಾಶ ಕಲ್ಪಿಸಿರುವುದು ಮಹತ್ವದ್ದಾಗಿದೆ. ಪತ್ರಿಕೆಯ ಈ ಗುಣಮಟ್ಟವೇ ಪ್ರತಿ ತಿಂಗಳು ಕುತೂಹಲದಿಂದ ಕಾಯುವಂತೆ ಮಾಡಿದೆ.

–ಸುಧಾಕರ ದೇವಾಡಿಗ, ಕೋಟೇಶ್ವರ (ಕುಂದಾಪುರ)

ಜಿಕೆಜಿ ಅವರಿಗೆ ವಿದಾಯ



ಚಿತ್ರ: ಹಜ಼ರತ್ ಅಲಿ

ವಿಚಾರವಾದಿ ಚಿಂತಕ, ನಿವೃತ್ತ ಇಂಗ್ಲಿಷ್ ಅಧ್ಯಾಪಕ ಹಾಗೂ ಹಿರಿಯ ನಟ ಪ್ರೊ. ಜಿ.ಕೆ. ಗೋವಿಂದರಾವ್ ನಮ್ಮನ್ನು ಅಗಲಿ ಹೋಗಿದ್ದಾರೆ. ಇವರ ನಿಧನಕ್ಕಾಗಿ 'ಹೊಸ ಮನುಷ್ಯ' ಬಳಗ ತನ್ನ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.

ಜಿಕೆಜಿ ೮೪ ವರ್ಷಗಳ ತುಂಬು ಮತ್ತು ಸಾರ್ಥಕ ಬದುಕು ನಡೆಸಿ ಈ ಲೋಕದಿಂದ ನಿರ್ಗಮಿಸಿದ್ದಾರೆ. ತಮ್ಮ ಬದುಕಿನ ಕೊನೆಯ ದಿನಗಳವರೆಗೂ ಸಮಕಾಲೀನ ಸಾರ್ವಜನಿಕ ಜೀವನದ ಭಾಗೀದಾರಿಕೆಯ ಸಜೀವ ಪ್ರತೀಕದಂತಿದ್ದ ಗೋವಿಂದರಾವ್, ಸದಾ ವ್ಯವಸ್ಥೆಯ ವಿರೋಧಿ ದನಿಯಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ತಮ್ಮ ವಿಚಾರವಾದಕ್ಕೆ ಆಧಾರವಾಗಿದ್ದ ನಾಸ್ತಿಕತೆಯನ್ನು ಕೊಂಚ ಸಡಿಲಿಕೊಂಡು ಮಾನವನ ಬದುಕಿನಲ್ಲಿ ದೇವರು–ಧರ್ಮಗಳಿಗೂ ಒಂದು ಜಾಗವಿರಬಹುದು ಎಂದು ನಂಬತೊಡಗಿದ್ದರು. ಆದರೆ ಜಾತಿಪದ್ಧತಿ ಮತ್ತು ಮತಾಂಧತೆಗಳ ಪ್ರಬಲ ವಿರೋಧಿಯಾಗಿದ್ದ ಅವರು ಇತ್ತೀಚಿನ ವರ್ಷಗಳಲ್ಲಿ ಈ ಸಂಬಂಧದ ಸಾಹಿತ್ಯ ರಚನೆಯಲ್ಲೂ ತೊಡಗಿಕೊಂಡಿದ್ದರು.

ಇಂಗ್ಲಿಷ್ ಸಾಹಿತ್ಯದ ಅಧ್ಯಾಪಕರಾಗಿದ್ದ ಜಿಕೆಜಿ, ಶೇಕ್ಸ್‌ಪಿಯರ್‌ನ ಮಹಾ ಅಭಿಮಾನಿಯಾಗಿದ್ದರು. ಈ ನಾಟಕಕಾರನ ಹಲವು ನಾಟಕಗಳ ಪ್ರಧಾನ ಪಾತ್ರಧಾರಿಯಾಗಿ ರಂಗದ ಮೇಲೆ ಹಲವು ಬಾರಿ ಮಿಂಚಿದ್ದ ಸುಪುಷ್ಟ ಕಂಠದ ಅವರು, ಸಿನಿಮಾ ಮತ್ತು ಕಿರುತೆರೆಗಳ ಹಿರಿಯ ನಟರಾಗಿ ಜನಸಾಮಾನ್ಯರ ಮೆಚ್ಚುಗೆಯ ನಟರೂ ಆಗಿದ್ದರು. ಸಾಹಿತ್ಯದಷ್ಟೇ, ರಾಜಕೀಯ ವಿಷಯಗಳಲ್ಲೂ ತೀವ್ರ ಆಸಕ್ತಿ ಹೊಂದಿದ್ದ ಜಿಕೆಜಿ ದೊಡ್ಡ ಪ್ರಮಾಣದ ಪುಸ್ತಕಪ್ರಿಯರೂ ಆಗಿದ್ದರು. ತಾವು ಓದಿದ ಪುಸ್ತಕಗಳಲ್ಲಿ ತಮಗೆ ವಿಶೇಷವೆನಿಸುವುಗಳ ಬಗ್ಗೆ ತಮ್ಮ ಆಪ್ತರ ಜೊತೆ ಲಿಖಿತ ಚರ್ಚೆ ನಡೆಸುತ್ತಿದ್ದುದು ಅವರ ಇತ್ತೀಚಿನ ವಾಡಿಕೆಯಾಗಿತ್ತು. ಹಲವು ಬಾರಿ ಅವರು ತಮ್ಮ ಇಂತಹ ಆಪ್ತರಿಗೆ ಆ ಪುಸ್ತಗಳನ್ನು ಕೊಂಡು ಕೊಡುಗೆಯಾಗಿ ನೀಡುತ್ತಿದ್ದುದೂ ಉಂಟು. ಅವರ ಈ ಗುಣದ ಫಲಾನುಭವಿಗಳಲ್ಲಿ ಒಬ್ಬ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯೆನಿಸುತ್ತದೆ.

ಗೋವಿಂದರಾವ್ 'ಹೊಸಮನುಷ್ಯ' ಪತ್ರಿಕೆಯ ಮಹಾ ಅಭಿಮಾನಿ ಓದುಗರಾಗಿದ್ದರು. ತಿಂಗಳ ಮೊದಲ ವಾರದಲ್ಲಿ ಅಂಚೆ ವ್ಯತ್ಯಯದಿಂದಾಗಿ ಪತ್ರಿಕೆ ತಲುಪದಿದ್ದರೆ ಕರೆ ಮಾಡಿ ವಿಚಾರಿಸುತ್ತಿದ್ದರು. ಪತ್ರಿಕೆಯಲ್ಲಿನ ತಮಗೆ ಇಷ್ಟವಾದ ಬರಹ–ವಿಚಾರಗಳ ಬಗ್ಗೆ ತಿಂಗಳಿಗೊಮ್ಮೆಯಾದರೂ ನನ್ನೊಡನೆ ಮಾತಾಡುವ ಅಭ್ಯಾಸ ಅವರಿಗಿತ್ತು. ಅವರು ಪ್ರತಿ ವರ್ಷ ಪತ್ರಿಕೆಗೆ ಚಂದಾದೊಡನೆ ಒಂದಿಷ್ಟು ದೇಣಿಗೆಯನ್ನೂ ನೀಡಿ ಪ್ರೋತ್ಸಾಹಿಸುತ್ತಿದ್ದರು. ಅವರು ನನ್ನೊಂದಿಗೆ ವ್ಯಕ್ತಪಡಿಸಿದ್ದ ಎರಡು ವೈಯಕ್ತಿಕ ನೆಲೆಯ ಆಸೆಗಳಲ್ಲಿ ಒಂದನ್ನು ಈಡೇರಿಸಿದ ತೃಪ್ತಿ ಇರುವಂತೆಯೇ ಇನ್ನೊಂದನ್ನು ಈಡೇರಿಸಲಾಗದ ಬೇಸರವೂ ನನ್ನದಾಗಿದೆ. ಈಡೇರಿದ ಅವರ ಆಸೆ ದುರದೃಷ್ಟಕರವಾಗಿ ಈಡೇರಿದೆ: ಪತ್ರಿಕೆಯನ್ನು ನಿಲ್ಲಿಸುವ ಆಲೋಚನೆ ಇದೆ ಎಂಬ ಸುದ್ದಿಯನ್ನು ಯಾರಿಂದಲೋ ಕೇಳಿದ್ದ ಅವರು, ಒಂದು ತಿಂಗಳ ಹಿಂದಷ್ಟೇ ಕರೆ ಮಾಡಿ ತಾವು ಬದುಕಿರುವವರೆಗಾದರೂ ಹಾಗೆ ಮಾಡಬಾರದೆಂದು ಹೇಳಿದ್ದರು. ಈಡೇರಿಸಲಾಗದಿದ್ದ ಅವರ ಆಸೆ ಎಂದರೆ ನಾನು ಮತ್ತು ನನ್ನ ಪತ್ನಿ ಸವಿತಾ ಅವರೊಡನೆ ಒಂದು ಸಂಜೆಯನ್ನು ಕಳೆಯಬೇಕೆಂಬುದು. ಕರೋನಾ ಮತ್ತು ನನ್ನ ಇತ್ತೀಚಿನ ಅಸ್ವಸ್ಥತೆ ಇದಕ್ಕೆ ಅಡ್ಡಿಯಾದವು. ಸದಾ ಅಶಾಂತ ಮಗುವಿನಂತಿರುತ್ತಿದ್ದ ಗೋವಿಂದರಾವ್ ಅವರ ಆತ್ಮಕ್ಕೆ ಪತ್ರಿಕೆ ಶಾಂತಿ ಕೋರುತ್ತದೆ.

–.ಡಿ.ಎಸ್. ನಾಗಭೂಷಣ

ಕಳೆದ ಸಂಚಿಕೆ ಅದ್ಭುತವಾಗಿದೆ. ಅದರಲ್ಲಿ ವಿಶೇಷವಾಗಿ ನನಗೆ ನಾಗೇಶ್ ಹೆಗಡೆ ಅವರು ಗ್ರೇಟಾ ಥನ್ ಬರ್ಗ್ ಬಗ್ಗೆ ಬರೆದ ಅಂಕಣ ನಿಜಕ್ಕೂ ಸ್ಫೂರ್ತಿದಾಯಕ.

–ಬಿ.ಸಿ. ವೀರೇಶ್, ಮುಂಡಗೋಡ

ಕಳೆದ ೨೬ ಸಂಚಿಕೆಗಳಿಂದ ನಾನು 'ಹೊಸ ಮನುಷ್ಯ' ಪತ್ರಿಕೆಯನ್ನು ಓದುತ್ತಿದ್ದು, ಪತ್ರಿಕೆ ನನ್ನ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದರೆ ಪ್ರತಿ ತಿಂಗಳ ಆರಂಭದಲ್ಲಿ ಪತ್ರಿಕೆಗಾಗಿ ಕಾತರದಿಂದ ಕಾಯುವಂತಾಗಿದೆ. ನಿಮ್ಮ ಸಂಪಾದಕೀಯ ಯಾವುದೇ ಪಕ್ಷಪಾತವಿಲ್ಲದೆ ದೇಶದ ಪರಿಸ್ಥಿತಿಯನ್ನು ವಾಸ್ತವಾಂಶಗಳ ಮತ್ತು ನಮಗೆ ಗೊತ್ತಿಲ್ಲದ ಹಲವು ಸತ್ಯಗಳ ಆಧಾರದ ಮೇಲೆ ವಿಮರ್ಶಿಸುವ ಪರಿ ನನಗೆ ಇಷ್ಟವಾಯಿತು. ಅಲ್ಲದೆ ವಿವಿಧ ಕ್ಷೇತ್ರಗಳ ಪರಿಣತರು ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿರುವುದರಿಂದ ಪತ್ರಿಕೆಯ ಓದು ನನ್ನ ಸಾಮಾನ್ಯ ಜ್ಞಾನವನ್ನು ಹೆಚ್ಚಿಸಿದೆ.

–ಕೃಷ್ಣಮೂರ್ತಿ ಎನ್.ಎಸ್. ನೆರಳೂರು

ದಾಖಲೆ

ಕಾರ್ಮಿಕ ಸಂಘಗಳ ಜಂಟಿ ಪತ್ರಿಕಾ ಹೇಳಿಕೆ

ಕೇಂದ್ರ ಸರ್ಕಾರ ದೇಶವನ್ನು ಹರಾಜಿಗೆ ಹಾಕಿದೆ:

ಭಾರತವನ್ನು ಉಳಿಸುವುದು ಕಾರ್ಮಿಕ ವರ್ಗದ ಕರ್ತವ್ಯ

ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟಿರುವ ನೀರು, ವಿದ್ಯುತ್, ರೈಲು, ರಸ್ತೆ ಸಂಚಾರ ಮುಂತಾದ ಜನೋಪಯೋಗಿ ಮೂಲಭೂತ ಸೌಕರ್ಯಗಳ ಸೇವಾದರಗಳು ಏರುತ್ತವೆ ಎನ್ನುವುದು ಸ್ಪಷ್ಟ. ಇದು ತಕ್ಷಣದಲ್ಲೇ ಆಗುತ್ತದೆ ಎನ್ನುವುದು ಎಲ್ಲರಿಗೂ ಅರ್ಥವಾಗುವ ಅಂಶ. ಏಕೆಂದರೆ ನಗದೀಕರಣ ಪ್ರಕ್ರಿಯೆಯ ದಾಖಲೆಗಳ ಪ್ರಕಾರ ಖಾಸಗಿಯವರಿಗೆ ಎಲ್ಲಾ ಮೂಲಭೂತ ಸೌಕರ್ಯಗಳ ಸೇವಾಶುಲ್ಕವನ್ನು ಹೆಚ್ಚಿಸುವುದಕ್ಕೆ ಅಧಿಕಾರ ನೀಡಲಾಗಿದೆ. ಹಾಗಾಗಿ ಖಾಸಗಿಯವರು ಜನ ಸಾಮಾನ್ಯರಿಗೆ ಹೊರೆಮಾಡಿ ಅಪಾರ ಲಾಭ ಮಾಡಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

'ರಾಷ್ಟ್ರೀಯ ನಗದೀಕರಣ ಯೋಜನೆ'ಯನ್ನು ಕೇಂದ್ರ ಹಣಕಾಸು ಮಂತ್ರಿ ಶ್ರೀಮತಿ ನಿರ್ಮಲಾ ಸೀತಾರಾಮನ್ ಅವರು ೨೩ ಆಗಸ್ಟ್ ೨೦೨೧ರಂದು ಘೋಷಿಸಿದರು. ಮುಂದಿನ ಆರು ವರ್ಷಗಳಲ್ಲಿ ೬ ಲಕ್ಷ ಕೋಟಿ ಹಣ ಸಂಗ್ರಹಿಸುವುದು ಅದರ ಉದ್ದೇಶ. ಇದಕ್ಕಾಗಿ ಹಲವು ಸರ್ಕಾರದ ಆಸ್ತಿಯನ್ನು ಗುತ್ತಿಗೆ ಕೊಡಲು ಯೋಜಿಸಲಾಗಿದೆ. ೧.೬ ಲಕ್ಷ ಕೋಟಿ ಮೌಲ್ಯದ ೨೬,೭೦೦ ಕಿ.ಮಿ ಉದ್ದದ ಹೆದ್ದಾರಿ, ೧.೫ ಲಕ್ಷ ಕೋಟಿ ಮೌಲ್ಯದ ೪೦೦ ರೈಲ್ವೆ ನಿಲ್ದಾಣಗಳು ಹಾಗೂ ೧೫೦ ರೈಲುಗಳು, ೦.೬೭ ಲಕ್ಷ ಕೋಟಿ ಮೌಲ್ಯದ ೪೨,೩೦೦ ಕಿಲೋಮೀಟರ್ ಉದ್ದದ ವಿದ್ಯುತ್ ವಾಹಕ ಲೈನುಗಳು, ಇತ್ಯಾದಿ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಇವನ್ನು ನಿರ್ವಹಣೆಗಾಗಿ ವಿವಿಧ ಅವಧಿಗಳಿಗೆ ಗುತ್ತಿಗೆಗೆ ಕೊಡಲಾಗಿದೆ. ಹೀಗೆ ಕ್ರೋಢೀಕರಿಸಿದ ಹಣವನ್ನು ದೇಶದ ಮೂಲಸೌಕರ್ಯ ವ್ಯವಸ್ಥೆಯನ್ನು ಬೆಳೆಸುವುದಕ್ಕೆ ಬಳಸಲಾಗುತ್ತದೆ ಎಂದು ಹೇಳಲಾಗಿದೆ. ಅಂತಿಮವಾಗಿ ಇದು ಮೂಲಭೂತ ವ್ಯವಸ್ಥೆಗೆ ಸಂಬಂಧಿಸಿದ ಆಸ್ತಿಯನ್ನು ಖಾಸಗಿಯವರಿಗೆ ಪುಕ್ಕಟೆಯಾಗಿ ಕೊಟ್ಟುಬಿಡುವ ಕೆಟ್ಟ ಯೋಜನೆಯಷ್ಟೆ. ಹಾಗೆ ಸಿಕ್ಕ ಸೊತ್ತಿನಿಂದ ಅವರು ಎಷ್ಟು ಬೇಕಾದರೂ ದುಡಿದುಕೊಳ್ಳಬಹುದು. ಅವರಿಗೆ ಬಂಡವಾಳದ ಚಿಂತೆಯಿಲ್ಲ. ಹೀಗೆ ಹೇರಳವಾಗಿ ಗೋರಿಕೊಂಡ ದುಡ್ಡಿನಿಂದ ಒಂದು ಸಣ್ಣ ಪಾಲನ್ನು ಸರ್ಕಾರಕ್ಕೆ ಕೊಟ್ಟರೆ ಸಾಕು.

ಹಾಗಾಗಿಯೇ ಈ ಯೋಜನೆಯನ್ನು ರಾಷ್ಟ್ರೀಯ ಸ್ವತ್ತಿನ ಪುಕ್ಕಟೆ–ಖಾಸಗೀಕರಣ ಎಂದು ಟೀಕಿಸುತ್ತಿರುವುದು. ಇವೆಲ್ಲಾ ತೆರಿಗೆದಾರರ ಖರ್ಚಿನಲ್ಲಿ ನಡೆಯುತ್ತಿದೆ. ಆಸ್ತಿಯ ಒಡೆತನ ಸರ್ಕಾರದ ಬಳಿಯೇ ಇರುತ್ತದೆ ಹಾಗಾಗಿ ಇದು ಸಾರಾಸಗಟಾಗಿ ಖಾಸಗೀಕರಣ ಅಲ್ಲ ಎಂದು ನಮ್ಮ ನಿರ್ಮಲಾ ಸೀತಾರಾಮನ್ ಸಮರ್ಥಿಸಿಕೊಳ್ಳುತ್ತಿದ್ದಾರೆ. ಸ್ವಾಭಾವಿಕವಾಗಿಯೇ ಯಾರೂ ಇದನ್ನು ನಂಬಿಲ್ಲ.

ಈ ಚರ್ಚೆ ಇನ್ನೂ ಮುಂದುವರಿದಿರುವಾಗಲೇ ಎಲ್ಲಾ ಗ್ರಾಮ ಪಂಚಾಯಿತಿಗಳಿಗೂ ಗ್ರಾಮದಲ್ಲಿನ ಸಾಮುದಾಯಿಕ ಭೂಮಿ, ಕೆರೆ, ಕುಂಟೆ ಇತ್ಯಾದಿ ನೀರಿನ ಮೂಲಗಳು, ಸಾಮೂಹಿಕ ಕಟ್ಟಡಗಳನ್ನು ನಗದೀಕರಿಸಿಕೊಂಡು ತಮ್ಮ ಹಣಕಾಸನ್ನು ಕ್ರೋಢೀಕರಿಸಲು ಸೂಚಿಸಿದ್ದಾರೆ. ಇದರಿಂದ ಹಳ್ಳಿಗಳ ಆಡಳಿತ–ನಿರ್ವಹಣೆ ಮೇಲೆ ಆಗುವ ಪರಿಣಾಮವನ್ನು ಊಹಿಸುವುದೂ ಕಷ್ಟ.

ಖಾಸಗಿಯವರಿಗೆ ಗುತ್ತಿಗೆಗೆ ಕೊಟ್ಟಿರುವ ನೀರು, ವಿದ್ಯುತ್, ರೈಲು, ರಸ್ತೆ ಸಂಚಾರ ಮುಂತಾದ ಜನೋಪಯೋಗಿ ಮೂಲಭೂತ ಸೌಕರ್ಯಗಳ ಸೇವಾದರಗಳು ಏರುತ್ತವೆ ಎನ್ನುವುದು ಸ್ಪಷ್ಟ. ಇದು ತಕ್ಷಣದಲ್ಲೇ ಆಗುತ್ತದೆ ಎನ್ನುವುದು ಎಲ್ಲರಿಗೂ ಅರ್ಥವಾಗುವ ಅಂಶ. ಏಕೆಂದರೆ ನಗದೀಕರಣ ಪ್ರಕ್ರಿಯೆಯ ದಾಖಲೆಗಳ ಪ್ರಕಾರ ಖಾಸಗಿಯವರಿಗೆ ಎಲ್ಲಾ ಮೂಲಭೂತ ಸೌಕರ್ಯಗಳ ಸೇವಾಶುಲ್ಕವನ್ನು ಹೆಚ್ಚಿಸುವುದಕ್ಕೆ ಅಧಿಕಾರ ನೀಡಲಾಗಿದೆ. ಹಾಗಾಗಿ ಖಾಸಗಿಯವರು ಜನ ಸಾಮಾನ್ಯರಿಗೆ ಹೊರೆಮಾಡಿ ಅಪಾರ ಲಾಭ ಮಾಡಿಕೊಳ್ಳುವುದರಲ್ಲಿ ಅನುಮಾನವೇ ಇಲ್ಲ.

ಇದರಿಂದ ಉದ್ಯೋಗ ಸೃಷ್ಟಿಯಾಗುತ್ತದೆ ಅನ್ನುವ ಸರ್ಕಾರದ ವಾದಕ್ಕೆ ಯಾವ ಅರ್ಥವೂ ಇಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಇದರಿಂದ ಸಾವಿರಾರು ಕೆಲಸಗಾರರು ಕೆಲಸ ಕಳೆದುಕೊಳ್ಳುತ್ತಾರೆ. ಈಗಾಗಲೇ ಇರುವ ನಿರುದ್ಯೋಗ ಸಮಸ್ಯೆ ಇನ್ನಷ್ಟು ಬಿಗಡಾಯಿಸುತ್ತದೆ. ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಇಲ್ಲದ ಕಾರಣ ಪರಿಶಿಷ್ಟ ಜಾತಿ ವರ್ಗದವರು ಇದರಿಂದ ಹೆಚ್ಚು ಸಂಕಟಕ್ಕೆ ಒಳಗಾಗುತ್ತಾರೆ.

ಇದರ ಜೊತೆಗೆ ಸರ್ಕಾರ ೧೦೦ ಲಾಭದಾಯಕ ಸಾರ್ವಜನಿಕ ಕ್ಷೇತ್ರದ ಘಟಕಗಳನ್ನು ಮಾರುವುದಾಗಿ ಘೋಷಿಸಿದೆ. ಅಂದರೆ ಇದರಿಂದ ಸರ್ಕಾರದ ಬೊಕ್ಕಸಕ್ಕೆ ಹರಿದು ಬರುತ್ತಿದ್ದ ಲಾಭ ನಿಂತುಹೋಗುತ್ತದೆ. ಅದು ಖಾಸಗಿಯವರ ಬೊಕ್ಕಸ ಸೇರುತ್ತದೆ. ಇದರಿಂದ ಜನರ ಸಾಮಾಜಿಕ ಭದ್ರತೆಗೆ ಹಣ ವಿನಿಯೋಗಿಸುವ ಸರ್ಕಾರದ ಸಾಮರ್ಥ್ಯ ಕುಗ್ಗುತ್ತದೆ. ಸರ್ಕಾರ ಶ್ರೀಮಂತರು ಹಾಗೂ ಅತಿ ಶ್ರೀಮಂತರ ಮೇಲೆ ತೆರಿಗೆ ಹಾಕುವುದರ ಮೂಲಕ ತನ್ನ ಬೊಕ್ಕಸವನ್ನು ತುಂಬಿಕೊಳ್ಳಬಹುದು ಅನ್ನುವುದು ನಿಜ. ಆದರೆ ಸರ್ಕಾರಕ್ಕೆ ತನ್ನ ಗೆಳೆಯರಿಗೆ ತೆರಿಗೆ ವಿಧಿಸುವುದಕ್ಕೆ ಮನಸ್ಸಿಲ್ಲ.

ಸಾಮಾನ್ಯ ಮನುಷ್ಯನ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಇಂತಹ ನೀತಿಗಳನ್ನು ಸರ್ಕಾರ ಏಕೆ ರೂಪಿಸುತ್ತಿದೆ? ಉತ್ತರ ಸರಳ. ಇಂತಹ ನೀತಿಗಳಿಂದ ಕಾರ್ಪೋರೇಟ್‌ಶಾಹಿಗಳಿಗೆ ಅನುಕೂಲವಾಗುತ್ತದೆ. ಇವು ಅವರ ಹಿತಾಸಕ್ತಿಗೆ ಪೂರಕವಾಗಿದೆ. ಈ ಸರ್ಕಾರ ಅಧಿಕಾರದಲ್ಲಿ ಉಳಿಯಲು ಬೇಕಾದ ಆರ್ಥಿಕ ನೆರವನ್ನು ನೀಡುತ್ತಿರುವುದೇ ಅವರು.

ಹಾಗಾದರೆ ಸಾಮಾನ್ಯ ಮನುಷ್ಯ ಏನು ಮಾಡಬೇಕು?

ಕೇಂದ್ರ ನೌಕರರ ಸಂಘಗಳ ಜಂಟಿವೇದಿಕೆ ಇದಕ್ಕೆ ಒಂದು ಮಾರ್ಗವನ್ನು ಸೂಚಿಸುತ್ತಿದೆ. ರಾಷ್ಟ್ರೀಯ ಆರ್ಥಿಕತೆ ಹಾಗೂ ದುಡಿಯುವ ಜನರ ಮೇಲೆ ಘೋರ ಅಪರಾಧ ಎಸಗುತ್ತಿರುವ ಸರ್ಕಾರವನ್ನು ಕಿತ್ತೊಗೆಯಬೇಕು. ಅದಕ್ಕಾಗಿ ಸಿಗುವ ಎಲ್ಲಾ ಅವಕಾಶಗಳನ್ನು ಬಳಸಿಕೊಳ್ಳಬೇಕು. ಅದರ ಜೊತೆಗೆ ದೇಶಾದ್ಯಂತ ಒಟ್ಟಾಗಿ ಈ ಸರ್ಕಾರಕ್ಕೆ ಪ್ರತಿರೋಧವನ್ನು ಸಂಘಟಿಸುತ್ತಾ ಹೋಗಬೇಕಾಗಿದೆ. ನಮ್ಮ ದೇಶದ ಆಸ್ತಿಯನ್ನು ರಕ್ಷಿಸುವುದಕ್ಕಾಗಿ 'ಭಾರತ ಆಂದೋಲನ'ವನ್ನು ಪ್ರಾರಂಭಿಸೋಣ.

ಸರ್ಕಾರದ ವಿನಾಶಕಾರಿ ನೀತಿಯಿಂದ ಎಲ್ಲದರ ಬೆಲೆ ಗಗನಕ್ಕೇರುತ್ತದೆ, ಉದ್ಯೋಗ ಹಾಗೂ ಜೀವನಕ್ಕೆ ಇದರಿಂದ ನಿರಂತರವಾಗಿ ಹಾನಿಯಾಗುತ್ತದೆ, ನಿರುದ್ಯೋಗ, ಹಸಿವು, ಬಡತನ ಹೆಚ್ಚುತ್ತದೆ, ದುಡಿಯುವರ ಹಕ್ಕುಗಳ ಮೇಲೆ ದಾಳಿ ನಡೆಯುತ್ತದೆ, ಬೆರಳೆಣಿಕೆಯ ಅತಿ ಶ್ರೀಮಂತರ ಸಂಪತ್ತು ಹೆಚ್ಚುತ್ತಾ ಹೋಗುವುದರಿಂದ ಅಸಮಾನತೆ, ಅಶಾಂತಿಗಳು ಹೆಚ್ಚುತ್ತವೆ. ಒಟ್ಟಾರೆಯಾಗಿ ದುಡಿಯವ ಜನ ಇದರ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಹಾಗಾಗಿ ದುಡಿಯುವ ಜನತೆ ಇದರ ವಿರುದ್ಧ ಹೋರಾಟವನ್ನು ಸಂಘಟಿಸಬೇಕು.

ಸಾಮಾನ್ಯ ಜನರಲ್ಲಿ ಈ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಅದಕ್ಕಾಗಿ ವ್ಯಾಪಕವಾದ ಮತ್ತು ತೀವ್ರವಾದ ಆಂದೋಲನವನ್ನು ನಡೆಸಬೇಕಾಗಿದೆ. ಸರ್ಕಾರ ತಮ್ಮ ಹಿಡಿತದಲ್ಲಿರುವ ಮಾಧ್ಯಮಗಳ ಮೂಲಕ ಪ್ರಚಾರ ಮಾಡುತ್ತಾ, ಈ ಯೋಜನೆಗಳ ಜನವಿರೋಧಿ ಹಾಗೂ ರಾಷ್ಟ್ರವಿರೋಧಿ ಮುಖವನ್ನು ಮರೆಮಾಚುತ್ತಿದೆ. ವಾಸ್ತವ ಸಂಗತಿಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದರ ಮೂಲಕ ಇದನ್ನು ವಿರೋಧಿಸಬೇಕಾಗಿದೆ. ಹಾಗಾಗಿ ಸಹಿ ಆಂದೋಲನದಲ್ಲಿ ಭಾಗವಹಿಸಿ, ನಿಮ್ಮ ಅಕ್ಕಪಕ್ಕದವರಿಗೂ ತಿಳಿಸಿ, ಹೆಚ್ಚು ಜನರಿಗೆ ತಲುಪಲಿ. ಇದು "ಭಾರತ ಆಂದೋಲನ"ವಾಗಲಿ.

ಇದಕ್ಕಾಗಿ ಸಿಟಿಯುನ ಜಂಟಿ ವೇದಿಕೆ ಒಂದು ಮಾರ್ಗಸೂಚಿಯನ್ನು ತಯಾರಿಸಿದೆ.

೧. ದುಡಿಯುವ ವರ್ಗದ ಸಾಮಾನ್ಯ ಎಲ್ಲಾ ಜನರ ಜೀವ ಹಾಗೂ ಜೀವನದ ಮೇಲೆ ಈ ವಿನಾಶಕಾರಿ ನೀತಿ ಮಾರಕ ಪರಿಣಾಮ ಬೀರುತ್ತಿದೆ. ಜನರನ್ನು ಇದರ ವಿರುದ್ಧ ಸಂಘಟಿಸಲು ವ್ಯಾಪಕವಾದ ಸಾಮೂಹಿಕ ಆಂದೋಲನವನ್ನು ಹಮ್ಮಿಕೊಳ್ಳಬೇಕು.

೨. ಬೃಹತ್ತಾದ, ಎಲ್ಲರನ್ನೂ ಒಳಗೊಂಡಂತೆ ದೇಶದಾದ್ಯಂತ ಆಂದೋಲನವನ್ನು ಹಮ್ಮಿಕೊಳ್ಳಬೇಕು. ಇದಕ್ಕಾಗಿ ಕನಿಷ್ಠ ಜಿಲ್ಲಾ ಮಟ್ಟದವರೆಗಾದರೂ ಹೋರಾಟಗಳನ್ನು ರೂಪಿಸಬೇಕು. ಈ ಮೂಲಕ ದೇಶಾದ್ಯಂತ ೭ ಅಕ್ಟೋಬರ್ ೨೦೨೧ರಂದು ರಾಷ್ಟ್ರೀಯ ವಿರೋಧಿ ದಿನವನ್ನು ಆಚರಿಸುವುದು.

೩. ದೆಹಲಿಯಲ್ಲಿ ಈ ರಾಷ್ಟ್ರ–ವಿರೋಧಿ, ಜನ–ವಿರೋಧಿ ನೀತಿಯ ವಿರುದ್ಧ, ವಿಶೇಷವಾಗಿ ಇತ್ತೀಚಿನ ನಗದೀಕರಣ ನೀತಿಯ ವಿರುದ್ಧ ಕಾರ್ಮಿಕರ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸುವುದು. ಇದನ್ನು ದಸರಾ ನಂತರ ಹಾಗೂ ದೀಪಾವಳಿಯ ಮೊದಲು ಒಂದು ದಿನ ಸಂಘಟಿಸುವುದು. ಅದರಲ್ಲಿ ಮುಂದಿನ ಕ್ರಿಯೆ/ಹೋರಾಟದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದು.

೪. ರಾಷ್ಟ್ರೀಯ ನಗದೀಕರಣ ನೀತಿಯಿಂದ ನೇರವಾಗಿ ತೊಂದರೆಗೆ ಒಳಗಾಗಿರುವ ಕ್ಷೇತ್ರಗಳಲ್ಲಿ ಮುಷ್ಕರಗಳು ಸೇರಿದಂತೆ ಕ್ಷೇತ್ರ ಮಟ್ಟದಲ್ಲಿ ನಡೆಯುತ್ತಿರುವ ಎಲ್ಲಾ ಚಟುವಟಿಕೆಗಳನ್ನು ಬೆಂಬಲಿಸುವುದು.

ಹೊಸ ದೆಹಲಿ ೩, ಅಕ್ಟೋಬರ್, ೨೦೨೧

-INTUC, AITUC, HMS, CITU, AIUTUC, TUCC, SEWA, AICCTU, LPF, UTUC and Independent Sectoral Federations/Associations)

(ಕನ್ನಡಕ್ಕೆ: ಟಿ.ಎಸ್. ವೇಣುಗೋಪಾಲ್)

ಪ್ರಚಲಿತ

ಹಿಂದೂರಾಷ್ಟ್ರವೊಂದರಲ್ಲಿ ಹಿಂದೂವಾಗಿರುವುದು ಎಂದರೆ...

-ಪ್ರೊ. ಪುರುಷೋತ್ತಮ ಅಗರವಾಲ್



ಹಿಂದೂವಾಗಿರುವುದು ಹಿತ ಎಂದು ಹಿಂದೂ ಮನಸ್ಸಿಗೆ ಮೇಲುನೋಟಕ್ಕೆ ಅನ್ನಿಸಬಹುದು. ನಿಮ್ಮ ಧರ್ಮ, ಜೀವನ ವಿಧಾನ, ಮೌಲ್ಯಗಳಿಗೆ ಹೊಂದಿಕೆಯಾಗುವ ಒಂದು ರಾಷ್ಟ್ರದಲ್ಲಿ(ದೇಶದಲ್ಲಿ) ನೀವು ಇದ್ದೀರಿ ಎಂದು ಯೋಚಿಸಬಹುದು. ಇದನ್ನು ತುಸು ವಿವರವಾಗಿ ಪರಿಶೀಲಿಸಿದಾಗ, ಹತ್ತಾರು ಕೋಟಿ ಜನರು ಜೀವಿಸುತ್ತಿರುವ ರೀತಿಯನ್ನು ಗಮನಿಸಿದಾಗ ಬೇರೆಯದೇ ಒಂದು ಚಿತ್ರ ಮೂಡಿಬರುತ್ತದೆ. ಸ್ಥೂಲವಾಗಿ ಹೇಳುವುದಾದರೆ ಒಬ್ಬ ಸಹಜ ಹಿಂದೂವಿಗೆ ಈ ಹಿಂದೂ ರಾಷ್ಟ್ರದಲ್ಲಿ ಬದುಕುವುದು ಒಂದು ದುಃಸ್ವಪ್ನವಾಗುವ ಸಾಧ್ಯತೆಗಳೇ ಹೆಚ್ಚು. ವ್ಯುತ್ಪತ್ತಿ ಶಾಸ್ತ್ರದ ಪ್ರಕಾರ 'ಸಹ-ಜ' ಎಂದರೆ ಒಬ್ಬ ವ್ಯಕ್ತಿ 'ಯಾವುದರ ಜೊತೆ ಹುಟ್ಟಿದ್ದಾನೋ ಅದು,' ಬಳಕೆಯಲ್ಲಿ ಈ ಪದವು ಸುಲಭವಾಗಿ ಮಾಡಬಹುದಾದದ್ದು; ಅಂದರೆ, ಹಿಂಜರಿಕೆ, ಸುಳ್ಳು- ಪ್ರತಿಷ್ಠೆ, ದುರಹಂಕಾರ ಅಥವಾ ಕೀಳರಿಮೆ ಮುಂತಾದುವುಗಳ ಮಾನಸಿಕ ಭಾರಗಳಿಗೆ ಸಿಲುಕದೆ ಸರಳವಾಗಿ ಮಾಡಬಹುದಾದದ್ದು ಎನ್ನುವ ಅರ್ಥವನ್ನು ನೀಡುತ್ತದೆ.

ಶತಮಾನಗಳಿಂದ ಸಾವಯವವಾಗಿ ಬೆಳೆದುಬಂದಿರುವ ಹಿಂದೂ ಧರ್ಮವು ಒಂದು ಒಣಸಿದ್ಧಾಂತ ವ್ಯವಸ್ಥೆಯಲ್ಲ. ಒಬ್ಬ 'ಸಹಜ ಹಿಂದೂ'ವಿಗೆ ಆತನ ನಂಬಿಕೆ ಮತ್ತು ಲೋಕದೃಷ್ಟಿಗಳು ಅಸಂಖ್ಯಾತ ಆವೃತ್ತಿಗಳಲ್ಲಿ ಲಭ್ಯವಿರುವ ರಾಮಾಯಣ ಮತ್ತು ಮಹಾಭಾರತಗಳಂತಹ ಮಹಾಕಾವ್ಯಗಳಿಂದ ಮತ್ತು ಪೌರಾಣಿಕ ನಿರೂಪಣೆಗಳಿಂದ ಮೂಡಿಬರುತ್ತವೆ. ಈ ವಿವಿಧ ಆವೃತ್ತಿಗಳಲ್ಲಿ ಯಾವುವೂ ಸಂಸ್ಕೃತದ ಶಾಸ್ತ್ರೀಯ ಆವೃತ್ತಿಯ ಸರಳ ಅನುವಾದಗಳಲ್ಲ. ಲಕ್ಷಾಂತರ ಸ್ಥಳೀಯ ಕಥೆಗಳಿಂದ ಇವುಗಳಲ್ಲಿಯ ವ್ಯತ್ಯಾಸಗಳು, ಇವುಗಳ ವಿನ್ಯಾಸ ಮತ್ತು ಬಣ್ಣಗಳು ರೂಪುಗೊಂಡಿರುತ್ತವೆ. ಇವುಗಳ ನಿರೂಪಣೆಗಳಲ್ಲಿರುವ ಮಾನವ ಸಂಕಟ, ನೈತಿಕ ದ್ವಂದ್ವಗಳು, ನೋವಿನ ಪ್ರಶ್ನೆಗಳು ಅವು ಪರಿಹಾರವಾದಾಗ ಮೂಡುವ ವಿವೇಕ ಇವುಗಳು ಹಿಂದೂ ಮನಸ್ಸನ್ನು ಆಳವಾಗಿ ಪ್ರಭಾವಿಸುತ್ತವೆ. ಒಬ್ಬ ಸಹಜ ಹಿಂದೂ ಇಂತಹ ಜೀವಂತ ನಿರೂಪಣೆಗಳಿಂದ ಕಲಿಯುತ್ತಾನೆಯೇ ಹೊರತು ಅಮೂರ್ತ ವಿಶ್ಲೇಷಣೆ, ವ್ಯಾಖ್ಯಾನಗಳಿಂದಲ್ಲ. ಈ ನಿರೂಪಣೆಗಳಲ್ಲಿ ಕಾಲದ (ಸಮಯ ಮತ್ತು ಸಾವು ಎಂಬ ಎರಡೂ ಅರ್ಥದಲ್ಲಿ) ತರ್ಕ ಮತ್ತು ಕರ್ಮಗಳಿಂದ (ಕ್ರಿಯೆ ಮತ್ತು ಅವುಗಳ ಪರಿಣಾಮ) ದೇವರುಗಳೂ ಕೂಡ ತಪ್ಪಿಸಿಕೊಳ್ಳಲಾರರು. ಮಹಾಭಾರತದಲ್ಲಿ ಒಡಹುಟ್ಟಿದವರ ಹತ್ಯೆಯ ಯುದ್ಧ ಅಂತ್ಯವಾದಾಗ ಆ ವಿಪತ್ತನ್ನು ತಪ್ಪಿಸಲು ಸಾಕಷ್ಟು ಪ್ರಯತ್ನ ಮಾಡಲಿಲ್ಲ ಎಂದು ಶೋಕತಪ್ತಳಾದ ಗಾಂಧಾರಿಯು ಕೃಷ್ಣನನ್ನು ಬಹಳ ಕಠಿಣ ಮಾತುಗಳಿಂದ ನಿಂದಿಸುತ್ತಾಳೆ. ಗಾಂಧಾರಿಯು ದುರ್ಯೋಧನನ ಪರವಾಗಿದ್ದುದನ್ನು ಕೃಷ್ಣ ಆಕೆಗೆ ನೆನಪಿಸುತ್ತಾನೆ. ಆದರೂ ಆಕೆಯ ಶಾಪವನ್ನು ಕೃಷ್ಣ ಅನುಭವಿಸಲೇಬೇಕಾಯಿತು. ಯಾದವಕುಲದ ತನ್ನ ಸಹೋದರರು ಪರಸ್ಪರ ಬಡಿದಾಡಿಕೊಂಡು ಸಾಯುವುದನ್ನು ಅವನು ಕಾಣಲೇಬೇಕಾಯಿತು. ಸೀತೆಗಾದ ಅನ್ಯಾಯಕ್ಕಾಗಿ ಜನಪದವು ರಾಮನನ್ನೂ ಬಿಟ್ಟಿಲ್ಲ. ದೇವರುಗಳಿಗೂ ವಿನಾಯಿತಿ ನೀಡದ, ದೇವರುಗಳೂ ಕೂಡ ಪ್ರಶ್ನಾರ್ಹರಾಗುವ ಇಂತಹ ದೃಢವಾದ ವಿಮರ್ಶಾ ಸಂಪ್ರದಾಯವನ್ನು, ಭಿನ್ನ ದೃಷ್ಟಿಕೋನವುಳ್ಳವರಿಗೆಲ್ಲಾ ದೇಶದ್ರೋಹಿ ಪಾಷಂಡಿಗಳೆಂದು ಹಣೆಪಟ್ಟಿ ಹಚ್ಚುವ ಹಿಂದೂರಾಷ್ಟ್ರದ ಪ್ರವೃತ್ತಿಯೊಂದಿಗೆ ಹೋಲಿಸಿ ನೋಡಿ.

ಹಿಂದೂ ಸಂಪ್ರದಾಯವು ತನ್ನ ಮೂಲಸ್ವರೂಪದಲ್ಲಿ ಒಳಗೊಳ್ಳುವ ಗುಣವುಳ್ಳದ್ದು. ಎಷ್ಟರಮಟ್ಟಿಗೆ ಎಂದರೆ, ಅದು ಭಿನ್ನಮತೀಯರ ಅಥವಾ ಬೇರ್ಪಟ್ಟ ಗುಂಪಿನ ಸಂಪ್ರದಾಯವನ್ನೂ ತನ್ನದಾಗಿಸಿಕೊಂಡುಬಿಡುತ್ತದೆ ಎಂದು ಅದರ ಟೀಕಾಕಾರರೇ ಹೇಳುವಷ್ಟು! ಟೀಕೆಗಳಿಂದ ಕಲಿಯುವ ಗುಣವುಳ್ಳ ಹಿಂದೂ ಧರ್ಮವು ಟೀಕೆಗಳನ್ನು ಮತ್ತು ವಿಮರ್ಶಾತ್ಮಕ ವಿಚಾರಗಳನ್ನು ತನ್ನ ಮುಖ್ಯಪ್ರವಾಹದೊಡನೆ ಒಂದಾಗಿಸಿಕೊಳ್ಳಲೂ ಬಲ್ಲದು. ಹಿಂದು ಧರ್ಮದ ಇಂತಹ ಸಾಮರ್ಥ್ಯವನ್ನು ಗೌರವಿಸುವ ಶಕ್ತಿಯಿಲ್ಲದವರಿಂದ ಆರೋಪಗಳು ಮೂಡಿಬರುತ್ತಿವೆ. ಇಂತಹ ಒಳಗೊಳ್ಳುವ ಸಾಮರ್ಥ್ಯವು ಒಂದು ಸಂಪ್ರದಾಯದ ದೀರ್ಘಬಾಳಿಕೆಗೆ ಬಹುಮುಖ್ಯವಾದ ಅಂಶ. ತನ್ನನ್ನು ತಾನು ಸತತವಾಗಿ ಪರಿಷ್ಕರಿಸಿಕೊಳ್ಳುವ ನಾಗರೀಕತೆಯ ಈ ಪ್ರತಿಭೆಯು "ಕುಚ್ ಬಾತ್ ಹೈ ಕಿ ಹಸ್ತಿ ಮಿಟಾತೀ ನಹೀ ಹವಾರೀ" (ನಮ್ಮಲ್ಲಿರುವ ಯಾವುದೋ ನಮ್ಮನ್ನು ಅವಿನಾಶಿಯಾಗಿಸಿದೆ)ಎಂಬ ಕಾವ್ಯವೊಂದರ ಈ ಪ್ರಖ್ಯಾತ ಸಾಲುಗಳನ್ನು ರಚಿಸಲು ಒಬ್ಬ ಕವಿಗೆ ಪ್ರೇರೇಪಣೆ ನೀಡಿದೆ. ಹೋಗಿ ಅವನನ್ನು ಅರಸಿರಿ – ಭಾರತದ ಹಿರಿಮೆಯನ್ನು ಕೊಂಡಾಡುವ ಪ್ರಖ್ಯಾತ ಕವಿತೆಯನ್ನು ಅವನು ಬರೆದಿದ್ದಾನೆ.

ಹಿಂದೂಧರ್ಮ ಕುರಿತ ಮತ್ತೊಂದು ರೀತಿಯ ಪೂರ್ವಾಗ್ರಹಕ್ಕೂ, ತಥಾಕಥಿತ ಬ್ರಾಹ್ಮಣವಾದ ಮತ್ತು ಸಹಜ ಹಿಂದೂಧರ್ಮಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸಲು ಸೋತಿದ್ದಕ್ಕೂ ಸಂಬಂಧವಿದೆ. (ಇಲ್ಲಿ ಸಹಜ ಹಿಂದೂಧರ್ಮ ಎಂದರೆ ಹಿಂದೂಗಳ ಆ ಕ್ಷಣದ ಅನುಭವ ವಾಸ್ತವಗಳು). ಇಂತಹ ಪೂರ್ವಾಗ್ರಹಗಳನ್ನು ಹೊಂದಿರುವವರು ತಳಸಮುದಾಯಗಳ ದೈವಗಳಿಗೆ ಹಿಂದೂ ಸರ್ವದೇವ ಮಂದಿರದಲ್ಲಿ ಸ್ಥಾನವಿಲ್ಲ ಎಂದು ನಂಬುತ್ತಾರೆ. ಅದು ನಿಜವಲ್ಲ: ಒಂದು ಉದಾಹರಣೆಯನ್ನು ಉಲ್ಲೇಖಿಸುವುದಾದರೆ, ಉತ್ತರ ಮಧ್ಯಪ್ರದೇಶದ ಚಂಬಲ್ ಕಣಿವೆಯಲ್ಲಿ ಗುಜ್ಜರ್ ಜಾತಿಗೆ ಸೇರಿದ ಹೀರಾ ಭುಮಿಯಾ ಎಂಬ 16 ನೇ ಶತಮಾನದ ಜನಪದ ಹೀರೋನ ಅಸಂಖ್ಯಾತ ಗುಡಿಗಳು ಮತ್ತು ದೇವಾಲಯಗಳು ಇವೆ.

ಈ ಹೀರಾಗೆ ಸಂಬಂಧಿಸಿದ ಕಥೆಯ ಪ್ರಕಾರ, ಹಸುವೊಂದನ್ನು ಹುಲಿಯಿಂದ ರಕ್ಷಿಸುವ ಪ್ರಯತ್ನದಲ್ಲಿ ತನ್ನ ಜೀವ ತೆತ್ತು ದೈವತ್ವಕ್ಕೇರಿದವನು ಅವನು. ಭಾದ್ರಪದದ ಮಳೆಗಾಲದಲ್ಲಿ (ಆಗಸ್ಟ್/ಸೆಪ್ಟೆಂಬರ್) ಹೀರಾನ ಆತ್ಮವು ಒಬ್ಬ ಭಕ್ತನ ಮೈಮೇಲೆ (ಬಹಳಷ್ಟು ಸಲ ಒಬ್ಬ ದಲಿತ ಅಥವಾ ಹಿಂದುಳಿದ ವ್ಯಕ್ತಿ) ಬರುವಂತೆ ವಿಧ್ಯುಕ್ತವಾಗಿ ಆವಾಹನೆ ಮಾಡಲಾಗುತ್ತದೆ. ಹೀಗೆ ಹೀರಾನ ಆತ್ಮವನ್ನು ಧರಿಸುವ ವ್ಯಕ್ತಿಯನ್ನು, ಧರಿಸಿರುವಷ್ಟು ಕಾಲ ಘುಲ್ಲಾ ಎಂದು ಕರೆಯುತ್ತಾರೆ. ಈ ಘುಲ್ಲಾನ ಮೂಲಕ ಹೀರಾ ಎಲ್ಲ ರೀತಿಯ ರೋಗರುಜಿನಗಳನ್ನೂ ವಾಸಿ ಮಾಡುತ್ತಾನೆ(ಹಾವು ಕಚ್ಚಿದ ಪ್ರಸಂಗಗಳು ಸಾಮಾನ್ಯ) ಮತ್ತು ಗೃಹಸ್ಥರ ಬಹಳಷ್ಟು ಸಮಸ್ಯೆಗಳನ್ನು ಪರಿಹರಿಸುತ್ತಾನೆ ಎಂದು ಅಲ್ಲಿನ ಜನ ನಂಬುತ್ತಾರೆ.

ಹೀರಾನ ಆತ್ಮವು ಹಿಂದೂ ಮತ್ತು ಮುಸ್ಲಿಮರ ನಡುವೆ ಅಥವಾ ದಲಿತ ಮತ್ತು ಬ್ರಾಹ್ಮಣರ ನಡುವೆ ಯಾವ ಭೇದವನ್ನೂ ಮಾಡುವುದಿಲ್ಲ. ಕನಿಷ್ಠರಾದವರಿಗೆ ಹಿಂದೂ ಧರ್ಮದ ಒಳಗೆ ಯಾವುದೇ ಆಧ್ಯಾತ್ಮಿಕ ಮತ್ತು ವಿಧಿ ಕರ್ಮ ಸಂಬಂಧವಾದ ಅವಕಾಶಗಳಿಲ್ಲ ಎಂದು ಭಾವಿಸುವವರದ್ದು ತಪ್ಪು ತಿಳುವಳಿಕೆ. ಆಧುನಿಕ ಯುಗದಲ್ಲಿ ಹಿಂದೂಧರ್ಮವನ್ನು ತಪ್ಪಾಗಿ ಅರ್ಥಮಾಡಿಕೊಳ್ಳಲಾಗಿದೆ. ಬ್ರಿಟಿಷರು, ಅವರ ಜನಗಣತಿ ಕಮೀಷನರುಗಳು ಮತ್ತು ಅವರ ಸಹಾಯಕರು ಹಿಂದೂಧರ್ಮವನ್ನು ಕಲ್ಪಿಸಿಕೊಂಡ ರೀತಿಯಿಂದ ಪ್ರಭಾವಿಸಲ್ಪಟ್ಟ ವಿದ್ವಾಂಸರು ಹಿಂದೂಧರ್ಮವನ್ನು ಬ್ರಿಟಿಷರ ಕಲ್ಪನೆಯ ಮಟ್ಟಕ್ಕೆ ಇಳಿಸಿದ್ದಾರೆ. ಹಿಂದೂಧರ್ಮದ ಈ ಬ್ರಿಟಿಷ್ ಪ್ರೇರೇಪಿತ ಪರಿಕಲ್ಪನೆಯು ದೇಶೀಯ ಮೂಲಗಳ ಬಗೆಗೆ ಅವರಲ್ಲಿದ್ದ ಮೌಢ್ಯವನ್ನೂ, ಅಜ್ಞಾನವನ್ನೂ ತೋರಿಸಿಕೊಡುತ್ತದೆ.

ಬ್ರಿಟಿಷರು ಭಾರತಕ್ಕೆ ಬರುವ ಹಲವು ಶತಮಾನಗಳಿಗೂ ಮೊದಲೇ ಹಿಂದೂಧರ್ಮ ಒಂದು ಸುಪರಿಚಿತವಾಗಿದ್ದ ಧರ್ಮ/ಆಚರಣೆಯಾಗಿತ್ತು ಮತ್ತು ಹಿಂದೂ ಎಂಬುದು ಭೌಗೋಳಿಕವಾದ ಅಸ್ಮಿತೆಗಿಂತ ಭಿನ್ನವಾದ ಒಂದು ಅಸ್ಮಿತೆ ಎಂಬುದು ತಿಳಿದಿತ್ತು. ವಿದ್ಯಾಪತಿ (1352–1448) ಮತ್ತು ಕಬೀರ, ಅನಂತದಾಸ್ ಮತ್ತು ಏಕನಾಥ್ (15– 16 ನೆಯ ಶತಮಾನ) ಮುಂತಾದ ಪ್ರಾರಂಭಕಾಲದ ಆಧುನಿಕ ಕವಿಗಳು ಇದನ್ನು ಚೆನ್ನಾಗಿ ತಿಳಿದಿದ್ದರು. ಹಾಗೆಯೇ ಯೂರೋಪಿನ ಕ್ರಿಶ್ಚಿಯನ್ ಮಿಷನರಿಯಾದ ಗೆಸಪ್ಪೇ ಮರಿಯಾ ಗರ್‍ನೋ (18 ನೇ ಶತಮಾನ) ಇದನ್ನು ತಿಳಿದಿದ್ದ. ಒಬ್ಬ ಕ್ರಿಶ್ಚಿಯನ್ ಮಿಷನರಿ ಮತ್ತು ಹಿಂದೂವಿನ ನಡುವೆ ನಡೆಯುವ ಒಂದು ಕಾಲ್ಪನಿಕ ಸಂಭಾಷಣೆಯ ಮೂಲಕ ಈತ ಇದನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

ದುರದೃಷ್ಟವಶಾತ್ ಹಲವಾರು ಸಮಕಾಲೀನ ವಿದ್ವಾಂಸರು ಬ್ರಿಟಿಷ್ ಆಳ್ವಿಕೆಗಿಂತ ಹಿಂದಿನ ಐತಿಹಾಸಿಕ ದಾಖಲೆಗಳಲ್ಲಿರುವ ದೇಶಭಾಷೆಯ ಮೂಲಗಳನ್ನು ಲೆಕ್ಕಿಸದೆ ಹಿಂದೂಧರ್ಮದ ಬಗ್ಗೆ ವಸಾಹತುಶಾಹಿ ಕಾಲದ ತಪ್ಪು ಗ್ರಹಿಕೆಗಳನ್ನೇ ಮುಂದುವರಿಸುತ್ತಿದ್ದಾರೆ. (ನಾನು ನನ್ನ ಶೈಕ್ಷಣಿಕ ಬರಹಗಳಲ್ಲಿ 'ವರ್ನಾಕುಲರ್' ಎಂಬ ಪದಕ್ಕೆ ಪರ್ಯಾಯವಾಗಿ ದೇಶಭಾಷೆ; ಎಂದರೆ ಸಾಮಾನ್ಯ ಜನರ ಜೀವಂತ ಬಾಷೆಗಳ ವರ್ಗ ಎಂಬ ಪದವನ್ನು ಬಳಸುವ ವಿಚಾರವನ್ನು ಪ್ರತಿಪಾದಿಸಿದ್ದೇನೆ.) ಸಂಪೂರ್ಣವಾಗಿ ಸಂಸ್ಕೃತ /ಪರ್ಷಿಯನ್ ಮೂಲಗಳನ್ನು ಆಧರಿಸಿ ಹಿಂದೂ ಸಂಪ್ರದಾಯಗಳನ್ನೂ ಒಳಗೊಂಡಂತೆ ಭಾರತದ ಪ್ರಾರಂಭಿಕ ಆಧುನಿಕ ಇತಿಹಾಸವನ್ನು ರಚಿಸುವುದು ಒಂದು ಅಸಮರ್ಪಕ ಪ್ರಯತ್ನ. ಇದು ಲ್ಯಾಟಿನ್ ಮೂಲಗಳನ್ನು ಮಾತ್ರ ಅವಲಂಬಿಸಿ ರೆನೈಸಾನ್ಸ್(ಪುನರುಜ್ಜೀವನ) ಮತ್ತು ಆಧುನಿಕ

ಯೂರೋಪಿನ ಇತಿಹಾಸವನ್ನು ಬರೆದಂತೆ.

ಹೀರಾ ಭುಮಿಯಾ ರೀತಿಯ ಕಥೆಗಳನ್ನು, ಈಗ ಎಲ್ಲಡೆಯೂ ಕಂಡುಬರುವ ಕನ್ವರ್ ಯಾತ್ರಾ ರೀತಿಯ ಹೊಸ ಆಚರಣೆಗಳನ್ನು, ಸಂತೋಷೀ ಮಾ ಥರದ ಹೊಸ ದೈವಗಳನ್ನು ಸ್ಥಳೀಯ ಪುರಾಣ/ದಂತಕಥೆಗಳಲ್ಲಿ ಅಡಕಗೊಳಿಸಿಕೊಳ್ಳುವುದು ಸಹಜ ಹಿಂದೂಧರ್ಮದ ಪ್ರತಿಭೆ. ಧರ್ಮಗ್ರಂಥಗಳ ಜೊತೆ ಅದಕ್ಕೆ ಒಂದು ವಿಶೇಷವಾದ ಸಂಬಂಧವಿದೆ. ಒಬ್ಬ ಸಹಜ ಹಿಂದೂ ತನ್ನ ಧರ್ಮದ ಆಧಾರ ಗ್ರಂಥಗಳಾದ ವೇದಗಳನ್ನು ಸಾಮಾನ್ಯವಾಗಿ ನೋಡುವುದೇ ಇಲ್ಲ. ಆತ ಮಹಾಕಾವ್ಯಗಳಲ್ಲಿ ಬರುವ ಕಥೆಗಳ ಜೊತೆ ವ್ಯವಹರಿಸುತ್ತಾನೆ. ಈ ಕಥೆಗಳು ಅವನಿಗೆ ದಿನನಿತ್ಯದ ಪರಿಸ್ಥಿತಿಗಳನ್ನು ನಿಭಾಯಿಸಲು ಬೇಕಾದ ಧರ್ಮಗ್ರಂಥದ ವಿವೇಕವನ್ನು ತಂದುಕೊಡುತ್ತದೆ.

ಈ ವ್ಯಾಖ್ಯಾನಗಳು ಮತ್ತು ತಿರುವು ಮುರುವುಗಳಿಂದ ತುಂಬಿದ ವಿಸ್ತರಣೆಗಳು ಅಸಕ್ತಿ ಹುಟ್ಟಿಸುವ ಹೊಸ ಆವಿಷ್ಕಾರಗಳನ್ನು ಮತ್ತು ವ್ಯತ್ಯಾಸಗಳನ್ನು ಸೂಚಿಸುವವು. ಹಾಗೆಯೇ ಇವು ಸ್ವತಂತ್ರವಾದ ನೈತಿಕ ಮತ್ತು ಸದಾಚಾರದ ಹುಡುಕಾಟಗಳಾಗಿ ಕೂಡ ಪರಿಣಮಿಸುವುವು. ಕುತೂಹಲ ಹುಟ್ಟಿಸುವ ವಿಚಾರ ಏನೆಂದರೆ ಹಿಂದೂ ಪರಿಭಾಷೆಯಲ್ಲಿ ವೇದಿಕ್ ಎಂಬ ಗುಣವಾಚಕವು ಕೇವಲ ನಾಲ್ಕು ವೇದಗಳಿಗೆ ಮಾತ್ರ ಅನ್ವಯವಾಗುವುದಿಲ್ಲ. ಬಹಳ ಸಲ ಅದು ಒಂದು ಬೌದ್ಧಿಕ ಮತ್ತು ವಿಚಾರಶೀಲ ಸಂಪ್ರದಾಯದೊಂದಿಗೆ, ಜ್ಞಾನ ವ್ಯವಸ್ಥೆಯೊಂದಿಗೆ ಇರುವ ಸಂಬಂಧವನ್ನು ಸೂಚಿಸುತ್ತದೆ. ಆದ್ದರಿಂದಲೇ, ಆಯುರ್ವೇದ (ವೈದ್ಯಕೀಯ ಜ್ಞಾನ) ನಾಟ್ಯವೇದ (ನೃತ್ಯ ಅಥವಾ ರಂಗದ ಜ್ಞಾನ) ಮುಂತಾದ ಬಳಕೆಗಳಿರುವುದು.


ಹಿಂದೂಧರ್ಮದ ಇತಿಹಾಸದ ಪಥವು ವೈವಿಧ್ಯತೆ, ಸಂವಾದ ಮತ್ತು ಚಲನಶೀಲ ಸಾಂಕೇತಿಕತೆಗಳಿಂದ ತುಂಬಿದೆ. ವಿಗ್ರಹಾರಾಧನೆ ಅಥವಾ ಅವತಾರದ ಕಲ್ಪನೆಗಳೂ ಕೂಡ ಈ ಚಲನಶೀಲ ಸಾಂಕೇತಿಕತೆಯ ಉದಾಹರಣೆಗಳೇ– ಒಂದು ತಾತ್ವಿಕ ನೆಲೆಯಲ್ಲಿ, ಒಬ್ಬ ವ್ಯಕ್ತಿಯಲ್ಲಿ ದೈವತ್ವವು ಯಾವ ಮಟ್ಟಕ್ಕೆ ಸಾಕ್ಷಾತ್ಕಾರಗೊಂಡಿದೆ ಎಂಬ ಕಲ್ಪನೆಯಾಗಿ ಮತ್ತು ಒಂದು ಸಾಂಸ್ಕೃತಿಕ ನೆಲೆಯಲ್ಲಿ, ಒಂದು ಸಾಮುದಾಯಿಕ ನೆನಪಿಗೆ ಒದಗಿ ಬರುವ ಒಂದು ಕಲಾಕೃತಿಯ ಸೃಷ್ಟಿಯಾಗಿ.

ಹಿಂದೂಧರ್ಮದ ಅವತಾರದ ಪರಿಕಲ್ಪನೆಯು ತನ್ನ ವೈವಿಧ್ಯತೆಯಲ್ಲಿ ಮತ್ತು ಕ್ರಿಯಾಶೀಲತೆಯಲ್ಲಿ ಅಪಾರವಾದ ವಿಶ್ವಾಸವನ್ನು ಹೊಂದಿರುವಂಥದು. ಇದಕ್ಕೆ ಪ್ರತಿಯಾಗಿ ಹಿಂದೂರಾಷ್ಟ್ರ ಅಥವಾ ಹಿಂದುತ್ವವು ನೆಲೆಗೊಂಡಿರುವುದು ಸೊಕ್ಕಿನ ಅತಿರೇಕದ ಸ್ವಸಮರ್ಥನೆಯ ಆತ್ಮವಿಶ್ವಾಸದ ಮುಖವಾಡ ತೊಟ್ಟಿರುವ ಮುಖೇಡಿತನದಲ್ಲಿ. ಆರ್.ಎಸ್.ಎಸ್.ಗೆ ಏಕಚಾಲಕಾನುವರ್ತಿತ್ವವು (ಒಬ್ಬ ಸರ್ವೋಚ್ಛ ನಾಯಕನನ್ನು ಪ್ರಶ್ನಾತೀತವಾಗಿ ಹಿಂಬಾಲಿಸುವುದು) ಒಂದು ನಂಬಿಕೆಯ ವಿಚಾರ ಮತ್ತು ಒಂದು ಮುಖ್ಯ ಸಾಂಸ್ಥಿಕ ನೀತಿ. ಈ ವ್ಯಕ್ತಿಪೂಜೆಯ ಮೂಲವಿರುವುದು ಯೂರೋಪ್ ಮೂಲದ ಫ್ಯಾಸಿಸಂನಲ್ಲಿ. ದೇವತೆಗಳೂ ಅವತಾರಗಳೂ ಸಮೃದ್ಧವಾಗಿರುವ ಹಿಂದೂಧರ್ಮದಲ್ಲಲ್ಲ. ರಾಷ್ಟ್ರೀಯವಾಗಿ ನಮ್ಮ ವಿವೇಕದ ಅತ್ಯುನ್ನತ ಮೂಲ, ಒಂದಲ್ಲ; ಅದು ನಾಲ್ಕು ವೇದಗಳು.

ಹಿಂದೂರಾಷ್ಟ್ರ ಎಂಬುದು ಹಿಂದೂಯಿಸಂನ ಸಹಜವಾದ ವಿಸ್ತರಣೆಯಲ್ಲ. ಹಿಂದುತ್ವ ಎಂಬುದು ಒಂದು ಆಧ್ಯಾತ್ಮಿಕ ಅಥವಾ ಧಾರ್ಮಿಕ ಲೋಕದೃಷ್ಟಿಯಲ್ಲ. ಅದೊಂದು ಸಿದ್ಧಾಂತ, ನಿರಂಕುಶಾಧಿಕಾರದ ರಾಜಕೀಯ ಕಾರ್ಯಕ್ರಮ. ಹಿಂದೂಧರ್ಮ ಎಂಬ ಶಬ್ದ ಅದಕ್ಕೊಂದು ಆಸರೆ ಅಷ್ಟೇ. ಸಾವರ್ಕರ್ ಇದನ್ನು ತಮ್ಮ 'ಹಿಂದುತ್ವ: ಹಿಂದೂ ಎಂದರೆ ಯಾರು?' (1923) ಎಂಬ ಹಿಂದೂರಾಷ್ಟ್ರದ ಕಲ್ಪನೆಗೆ ಆಧಾರಭೂತವಾದ ಕೃತಿಯಲ್ಲಿ ಮುಕ್ತವಾಗಿ ಒಪ್ಪಿಕೊಳ್ಳುತ್ತಾರೆ. ಹಿಂದೂಧರ್ಮ ಎಂದರೆ ಸ್ಥೂಲವಾಗಿ ಯಾವ ಅರ್ಥ ಧ್ವನಿಸುತ್ತದೋ ಅದಕ್ಕೆ ಸಮಾನವಾದುದು ಹಿಂದುತ್ವವಲ್ಲ. ಸಾವರ್ಕರ್ ಯಾವುದನ್ನು ಹಿಂದುತ್ವ ಅಥವಾ ಹಿಂದುತನ ಎಂದು ಕರೆಯುತ್ತಾರೋ ಅದರ ಕೇಂದ್ರದಲ್ಲಿ ಅನ್ಯರ ಅಂದರೆ ಮುಖ್ಯವಾಗಿ ಮುಸ್ಲಿಮರ ಬಗೆಗಿನ, ಸೃಷ್ಟಿಸಲ್ಪಟ್ಟ ಹೆದರಿಕೆ ಮತ್ತು ದ್ವೇಷ ಇದೆ. ಭಾರತದ ಒಂದು ವಿಚಾರವಾಗಿ, ಹಿಂದೂರಾಷ್ಟ್ರ ಎಂಬುದು ಸುಳ್ಳು. ಏಕೆಂದರೆ ಅದು ಐತಿಹಾಸಿಕವಾಗಿ ವಿಶ್ವಾಸಾರ್ಹವಲ್ಲದ್ದು ಮತ್ತು ಸಾಂಸ್ಕೃತಿಕವಾಗಿ ಒಟ್ಟಾರೆ ಭಾರತೀಯ ತಾತ್ವಿಕತೆಗೆ ಮತ್ತು ವಿಶೇಷವಾಗಿ ಹಿಂದೂಧರ್ಮಕ್ಕೆ ಪರಕೀಯವಾದುದು. ಹಿಂದೂರಾಷ್ಟ್ರ ಸಿದ್ಧಾಂತವಾದಿಗಳಿಗೆ ಹಿಂದೂಧರ್ಮದ ಫಲವಂತಿಕೆ ಮತ್ತು ಸಂಪ್ರದಾಯಗಳ ಸಂಕೀರ್ಣತೆಗಳು ಒಂದು ಹೊರೆ ಎಂಬಂತೆ ಕಾಣುತ್ತದೆ. ಹಿಂದುತ್ವವು ತನ್ನ ಸ್ವಭಾವದಿಂದ ಮತ್ತು ಉದ್ದೇಶದಿಂದ ಹಿಂದೂಧರ್ಮದ ವಿಕಾಸಶೀಲತೆ, ಅದರ ಐತಿಹಾಸಿಕತೆ ಮತ್ತು ನೇಯ್ಗೆಯ ಬಗೆಗೆ ಅಸೂಕ್ಷ್ಮವಾಗಿದೆ.

ಆದ್ದರಿಂದಲೇ ಒಬ್ಬ ನಾಯಕ, ಒಂದು ಭಾಷೆ, ಒಂದು ಜೀವನ ವಿಧಾನ, ಒಂದು ಆಹಾರ ಸಂಸ್ಕೃತಿ ಇತ್ಯಾದಿ ಕಲ್ಪನೆಗಳನ್ನು ಮುನ್ನೆಲೆಗೆ ತರಲಾಗುತ್ತಿದೆ. ಸಮಕಾಲೀನ ರಾಜಕೀಯ ಕಾಳಜಿಗಳಿಂದ ಪ್ರೇರೇಪಿಸಲ್ಪಟ್ಟು ಹಿಂದುತ್ವದ ರಕ್ಷಕರು ಬಹಳ ಹತಾಶೆಯಿಂದ ಹಿಂದೂಧರ್ಮದ ಸಮೃದ್ಧ ಮೂಲ ಮಾತೃಕೆಯನ್ನು ಒಂದು ಏಕರೂಪದ ಎರಕದಲ್ಲಿ ಪುನಾರಚಿಸುವ ಪ್ರಯತ್ನ ನಡೆಸಿದ್ದಾರೆ. ಇತ್ತೀಚಿನ ದಿನಗಳಲ್ಲಿ ಈ ಯೋಜನೆಯು ಭಾರೀ ಯಶಸ್ಸನ್ನು ಕಂಡಿದೆ ಮತ್ತು ಎಡ– ಉದಾರವಾದೀ ಬುದ್ಧಿಜೀವಿಗಳಲ್ಲಿ ಮತ್ತು ರಾಜಕೀಯ ವಲಯಗಳಲ್ಲಿ ಹಿಂದೂ ಸಂಪ್ರದಾಯದ ಅಂತರಿಕ ಕ್ರಿಯಾಶೀಲತೆಯ ಬಗೆಗೆ ಇರುವ ವ್ಯಾಪಕವಾದ ಅಜ್ಞಾನ ಹಿಂದುತ್ವದ ದೊಡ್ಡ ಮಟ್ಟದ ಯಶಸ್ಸಿಗೆ ಕಾರಣವಾಗಿದೆ.

ಎಡ ಉದಾರವಾದಿಗಳು ಹಿಂದೂಧರ್ಮ ಅಂದರೆ ಏನು ಎಂಬುದನ್ನು ಗ್ರಹಿಸುವಲ್ಲಿ ಸೋತಿದ್ದರೆ ಅದಕ್ಕೆ ಮುಖ್ಯ ಕಾರಣ, ದೇಶಭಾಷೆಯ ಮೂಲಗಳ ಜೊತೆ ಗಂಭೀರವಾಗಿ ತೊಡಗಿಕೊಳ್ಳಲು ಅವರಿಗೆ ಸಾಧ್ಯವಾಗದಿರುವುದು; ಹಿಂದುಗಳ ಸಾಂಸ್ಕೃತಿಕ ಕಾಳಜಿಗಳ ಬಗ್ಗೆ ನಿರ್ಲಕ್ಷ್ಯ ಕೂಡ ಈ ವಿಚಾರದಲ್ಲಿ ಒಂದು ಸಣ್ಣ ಪಾತ್ರವನ್ನು ವಹಿಸಿರಬಹುದು. ನೀವೊಬ್ಬ ಸಹಜ ಹಿಂದೂವಾಗಿದ್ದು ಅಧಿಕಾರದ ಆಟಗಳಿಗಿಂತ ಮತ್ತು ರಾಜಕೀಯ ಸ್ಪರ್ಧೆಗಳಿಗಿಂತ ನಿಮ್ಮ ಸಂಪ್ರದಾಯವೇ ಹೆಚ್ಚು ಎಂದು ನೀವು ಪರಿಗಣಿಸುವವರಾಗಿದ್ದರೆ, ಆಗ ಗುಂಪು ಹಲ್ಲೆಗಳಂತಹ ಘಟನೆಗಳು, ನಿಮ್ಮ ಧಾರ್ಮಿಕ ಅಸ್ಮಿತೆಯನ್ನು ಉದ್ದೀಪಿಸುವ ಭಾವನೆಗಳ ಸಿನಿಕ ಸೆಳೆತಗಳು, ಬುದ್ಧಿಜೀವಿಗಳನ್ನು ಮತ್ತು ವಿದ್ವತ್ತನ್ನು ಮತ್ತು ಭಿನ್ನ ದೃಷ್ಟಿಕೋನಗಳನ್ನು ರಾಕ್ಷಸೀಕರಣಗಳು, ಹಿಂದುತ್ವದ ಯೋಜನೆಯ ಒಂದು ಸಣ್ಣ ಅಸಂಗತ ಅಥವಾ ಕ್ಷುಲ್ಲಕ ಚಟುವಟಿಕೆಯಲ್ಲ; ಹಿಂದೂಧರ್ಮವನ್ನು ಅಮೂಲಾಗ್ರ ನಾಶಮಾಡದೇ ಯಶಸ್ವಿಯಾಗಲಾರದ ಒಂದು ರಾಜಕೀಯ ಕಾರ್ಯಕ್ರಮದ ಅಡ್ಡದಾರಿ ಹಿಡಿದ ಕುಟಿಲ ತಂತ್ರ ಎಂಬ ಬಗ್ಗೆ ಸಂಶಯವೇ ಬೇಡ.



(ಆಧುನಿಕ ಭಾರತದ ಇತಿಹಾಸ ಕುರಿತ ಖ್ಯಾತ ವಿದ್ವಾಂಸರೆನಿಸಿದ ಲೇಖಕರು ಈ ಬಗೆಗಿನ ಹಲವು ಉದ್ಗ್ರಂಥಗಳಿಗೂ ಹೆಸರಾಗಿದ್ದಾರೆ)

(ಕೃಪೆ: *ಜನತಾ*, ೧೯ ಸೆಪ್ಟಂ., ೨೦೨೧ ಕನ್ನಡಕ್ಕೆ: ಎಂ. ರಾಜು)

೧ನೇ ಪುಟದಿಂದ)

'ಮನಸ್ಸಾಗಿಲ್ಲ. ಇದು ಮೋದಿಯವರ ಈ ಪರಿಶುದ್ಧ ಸೈದ್ಧಾಂತಿಕ ರಾಜಕಾರಣದ ಪರಿ; ಭವ್ಯ ಹಿಂದೂ ಪರಂಪರೆಯ ರಕ್ಷಣೆಗಾಗಿ ತೆರಬೇಕಾದ ಸಣ್ಣ ಬೆಲೆ!

ಸಂಘ ಪರಿವಾರದ ನಂಬಿಕೆಯ ಪ್ರಕಾರ ಭವ್ಯ ಹಿಂದೂ–ಭಾರತೀಯ ಪರಂಪರೆಯ ಸ್ಥಾಪನೆಯ ಮೊದಲ ಹಂತವೆಂದರೆ ರಾಜಕೀಯವಾಗಿ 'ಕಾಂಗ್ರೆಸ್ ಮುಕ್ತ ಭಾರತ'ವನ್ನು ನಿರ್ಮಾಣ ಮಾಡುವುದು. ಇಲ್ಲಿ ಕಾಂಗ್ರೆಸ್ ಎಂದರೆ ಒಂದು ರಾಜಕೀಯ ಪಕ್ಷವಲ್ಲ. ಅದೊಂದು ಮೌಲ್ಯ ಪರಂಪರೆ. ಇದಕ್ಕೂ ಇಂದಿನ ಕಾಂಗ್ರೆಸ್ ಪಕ್ಷಕ್ಕೂ ಏನೂ ಸಂಬಂಧವಿರದಿರಬಹುದು. ಆದರೆ ದೇಶ ಹೊತ್ತಿದ್ದ ವಿದೇಶಿ ನೊಗದ ಭಾರವನ್ನು ಇಳಿಸಲು ಜನಸಾಮಾನ್ಯರ ಜಾಗೃತಿಯ ಮೂಲಕ ನಡೆದ ಒಂದು ಐತಿಹಾಸಿಕ ಮಹಾ ಹೋರಾಟದ ಪ್ರತೀಕವದು. ಅದಕ್ಕಿಂತ ಮುಖ್ಯವಾಗಿ ಆ ನೊಗಭಾರವನ್ನು ಹೊರುವ ದುಃಸ್ಥಿತಿಗೆ ದೇಶ ಈಡಾಗಲು ಕಾರಣವಾದ ನಮ್ಮ ಪರಂಪರೆಯ ದೋಷಗಳನ್ನು ಗುರುತಿಸಿ ಅವುಗಳಿಂದ ಮುಕ್ತವಾದ ಜನಸಾಮಾನ್ಯರ ನವಭಾರತದ ಕನಸು ಮತ್ತು ನಕ್ಷೆ ನಿರ್ಮಿಸಿಕೊಟ್ಟ ಒಂದು ದೊಡ್ಡ ಜನಜಾಗೃತಿಯ ವಿವೇಕದ ಪ್ರತೀಕ ಅದು.ಆಧುನಿಕ ಭಾರತದ ಅತ್ಯುತ್ಕೃಷ್ಟ ಮನಸ್ಸುಗಳನ್ನೂ, ಹೋರಾಗಾರರನ್ನೂ ಸೃಷ್ಟಿಸಿದ ಆಂದೋಲನವದು,


ಇದನ್ನು ಅರಿಯದಿದ್ದರೆ, ಈ ಹೋರಾಟ ಮತ್ತು ಕನಸಿನಲ್ಲಿ ಭಾಗವಹಿಸಲು, ಸಹಕರಿಸಲು ತನ್ನದೇ ಸೈದ್ಧಾಂತಿಕ ಕಾರಣಗಳಿಗಾಗಿ ನಿರಾಕರಿಸಿದ ಸಂಘ ಪರಿವಾರದ ರಾಜಕಾರಣದ ದೂರಗಾಮಿ ಪರಿಣಾಮಗಳು ಅರ್ಥವಾಗುವುದಿಲ್ಲ. ಅದು ಏಕೆ ಗಾಂಧಿ ಜಯಂತಿಯನ್ನು ಸ್ವಚ್ಛ ಭಾರತ ಕಾರ್ಯಕ್ರಮದ ಮಟ್ಟಕ್ಕೆ ಕುಬ್ಜಗೊಳಿಸುತ್ತಿದೆ, ಜಲಿಯನ್‌ವಾಲಾಬಾಗ್‌ನ ನಂತರ ಈಗ ಸಬರಮತಿ ಆಶ್ರಮದ ಐತಿಹಾಸಿಕ ಮೌಲ್ಯ ಮತ್ತು ಪಾವಿತ್ರ್ಯಗಳಿಗೆ ಅಪಚಾರವೆಸಗುವಂತೆ ಅವುಗಳನ್ನು ವ್ಯಾಪಾರಿ ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸ ಹೊರಟಿದೆ, ನೆಹರೂ ಅವರ ಹೆಸರನ್ನು ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಿಂದಲೇ ಏಕೆ ಅಳಿಸಹಾಕಹೊರಟಿದೆ, ಏಕೆ ಗೋಡ್ಸೆಯನ್ನು ಆರಾಧಿಸಿದವರನ್ನೆಲ್ಲ ಶಾಸಕರು, ಮಂತ್ರಿಗಳನ್ನಾಗಿ ಮಾಡುತ್ತಿದೆ, ಗೋಡ್ಸೆಯನ್ನು ತಯಾರು ಮಾಡಿದ ಸಾವರ್ಕರ್ ಸೆರೆಮನೆಯಿಂದ ಬಿಡುಗಡೆಯಾಗಲು ಬ್ರಿಟಿಷ್ ಸರ್ಕಾರಕ್ಕೆ ಬರೆದ ಕ್ಷಮಾಪಣಾ ಪತ್ರಗಳಿಗೆ ಗಾಂಧಿ ನೀಡಿದ ಸಲಹೆಯೇ ಕಾರಣವೆಂಬ ಸುಳ್ಳು ಕೇಂದ್ರದ ಮಂತ್ರಿಯೊಬ್ಬರ ಮೂಲಕವೇ ಏಕೆ ಹಬ್ಬಿಸುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದ ಹೊರತು ಸದ್ಯ ಚಾಲ್ತಿಯಲ್ಲಿರುವ 'ಕಾಂಗ್ರೆಸ್‌ಮುಕ್ತ ಭಾರತ' ಎಂಬ ಮಹಾಯೋಜನೆಯ ಮರ್ಮವೂ ಅರ್ಥವಾಗುವುದಿಲ್ಲ. ಸದ್ಯದ ಸತ್ಯಗಳ ರಾಜಕಾರಣದ ದಂದುಗದಲ್ಲಿ ಶಾಶ್ವತ ಸತ್ಯಗಳ ನೆಲೆಯ ರಾಜಕಾರಣದ ದೃಷ್ಟಿಯಿಂದ ನಾವು ಏನನ್ನು ಕಳೆದುಕೊಂಡು ಏನನ್ನು ಪಡೆಯಹೊರಟಿದ್ದೇವೆ ಎಂಬುದೂ ಗೊತ್ತಾಗುವುದಿಲ್ಲ. ಇದಕ್ಕಾಗಿ ಮೊದಲು, 'ಈಗ ಅಥವಾ ಇನ್ನಿಲ್ಲ'(ನೌ ಆರ್ ನೆವರ್) ಎಂಬ ಸಂಘಪರಿವಾರದವರ ತುರ್ತು, ಅದರ 'ಕಾಂಗ್ರೆಸ್‌ಮುಕ್ತ ಭಾರತ'ದಲ್ಲಿನ ಎಲ್ಲ 'ಕಾಂಗ್ರೆಸ್'ನವರಿಗೂ ಅರ್ಥವಾಗಬೇಕಾಗಿದೆ.

–ಸಂಪಾದಕ

ರಾಜ್ಯೋತ್ಸವ ವಿಶೇಷ

ಮಾತೃಭಾಷಾ ಶಿಕ್ಷಣ: ಮೂರು ಅನುಭವ ಕಥನಗಳು

೧. ತರಗತಿಗಳ ಮಧ್ಯೆ ಸಾಕ್ಷಿಯಾಗಿ ನಿಂತಾಗ...



ಕಲಿಕಾ ಮಾಧ್ಯಮದ ಗೊಂದಲಗಳು ನಮ್ಮಲ್ಲಿ ಇನ್ನೂ ಅಂತಿಮವಾಗಿ ಬಗೆಹರಿದಿಲ್ಲ. ಕಳೆದ ನಾಲ್ಕು ದಶಕಗಳ ಭಾಷಾ ಗೊಂದಲ ಹಾಗೇ ಮುಂದುವರಿದಿದೆ. ಹೊಸ ಶಿಕ್ಷಣ ನೀತಿಯಡಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಕಲಿಕೆಗೆ ಒತ್ತು ನೀಡಲಾಗಿದೆಯಾದರೂ, ೨೦೧೫ರ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ, ಅದಕ್ಕೆ ಯಾವುದೇ ಸಾಂವಿಧಾನಿಕ ಬಲ ಇಲ್ಲವಾದ್ದರಿಂದ ಅದೂ ಕೂಡಾ ಔಪಚಾರಿಕ ಮಾತೆನ್ನಿಸಿದೆ. ಈ ಮಧ್ಯೆ ನಮ್ಮ ಸರಕಾರ ಕೆಲ ಇಂಜನೀಯರಿಂಗ್ ಕೋರ್ಸ್‌ಗಳನ್ನು ಕೆಲವು ಕಾಲೇಜುಗಳಲ್ಲಿ ಪ್ರಸಕ್ತ ಸಾಲಿನಿಂದ ಕನ್ನಡದಲ್ಲಿ ಬೋಧಿಸಲು ಕ್ರಮ ಕೈಗೊಂಡಿದೆ. ತಳ ಭದ್ರಗೊಳಿಸದೆ ಕಟ್ಟಡ ಕಟ್ಟುವ ಅವಿವೇಕ ಇದು. ದೇಶಿ ಭಾಷೆಗಳ ಕುರಿತು ಅಗತ್ಯ ಬದ್ಧತೆ ಸರಕಾರಗಳಲ್ಲಿ ಇಲ್ಲದಿರುವುದೇ ಇದಕ್ಕೆಲ್ಲ ಕಾರಣ.

ಕಲಿಕಾ ಮಾಧ್ಯಮ ಕುರಿತು ನನ್ನ ಜಿಜ್ಞಾಸೆ ಆರಂಭಗೊಂಡದ್ದು ನಾನು ಬೆಳಗಾವಿ ವಿಭಾಗದ, ಧಾರವಾಡ ಶಿಕ್ಷಣ ವಲಯದ ಅಪರ ಆಯುಕ್ತನಾಗಿ ೨೦೦೮ರಿಂದ ೨೦೧೧ರವರೆಗೆ ಸೇವೆ ಸಲ್ಲಿಸುವಾಗ. ಅದು ಬೆಳಗಾವಿ ವಿಭಾಗದ ಏಳು ಜಿಲ್ಲೆಗಳ ಒಂಭತ್ತು ಶೈಕ್ಷಣಿಕ ಜಿಲ್ಲೆಗಳ ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಶಿಕ್ಷಣದ ಜವಾಬ್ದಾರಿ. ಸರ್ಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಶಾಲೆಗಳು ಸೇರಿ ಸುಮಾರು ಹದಿನೆಂಟು ಸಾವಿರ ಶಾಲೆಗಳು, ಇಪ್ಪತ್ತೈದು ಲಕ್ಷ ಮಕ್ಕಳನ್ನು ಒಳಗೊಂಡ ವಲಯ ಅದು. ಆ ಮೊದಲು ಶಿಕ್ಷಣ ಇಲಾಖೆ ಕುರಿತು ನನಗೆ ಬಾಹ್ಯ ಪರಿಚಯ ಅಷ್ಟೇ ಇತ್ತು. ನಾನು ಕಳೆದ ಅರವತ್ತರ ದಶಕದಲ್ಲಿ ಪ್ರಾಥಮಿಕ ಹಂತದಲ್ಲಿ ಓದಿದ್ದು ಬೆಳಗಾವಿ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ. ಹತ್ತನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ. ಆಂಗ್ಲ ಅಕ್ಷರಾಭ್ಯಾಸ ಆರಂಭವಾದದ್ದು ಐದನೇ ತರಗತಿಯಲ್ಲಿ. ಇದೇ ಆ ಕಾಲದ ಹೆಚ್ಚೂಕಡಿಮೆ ಎಲ್ಲರ ಓದಿನ ಕ್ರಮವಾಗಿತ್ತು. ಹೀಗಾಗಿ ನಮಗೆ ಕನ್ನಡ ಭಾಷೆಯ ಅಡಿಪಾಯ; ಹಾಗಾಗಿ ನಮ್ಮ ಶಿಕ್ಷಣದ ಅಡಿಪಾಯ ಸುಭದ್ರವಾಗಿತ್ತು.

ಶಿಕ್ಷಣ ಇಲಾಖೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರದ ಅನೇಕ ಯೋಜನೆಗಳಿವೆ. ಈ ಇಲಾಖೆಯ ಎಲ್ಲ ಯೋಜನೆಗಳ ಆಶಯ, ಸರಕಾರಿ ಶಾಲೆಗಳ ಮಕ್ಕಳ ಕಲಿಕೆ ಮತ್ತು ಕಲಿಕೆಗೆ ಪೂರಕವಾದ ವಾತಾವರಣ ನಿರ್ಮಾಣ. ಅದು ಶಿಕ್ಷಕರ ಸಬಲೀಕರಣ, ಮಕ್ಕಳ ಆರೋಗ್ಯ, ಆಹಾರ, ಸೌಲಭ್ಯಗಳ ಕುರಿತು ಕಾಳಜಿ ಹಾಗೂ ಇವೆಲ್ಲವುಗಳ ಹಿಂದೆ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗಬೇಕೆಂಬ ಕಾಳಜಿ. ಈ ಆಶಯಗಳನ್ನು ಗಮನದಲ್ಲಿ ಇಟ್ಟುಕೊಂಡು ನಾನು ಕಾರ್ಯ ನಿರ್ವಹಿಸಬೇಕಾಗಿತ್ತು.

ನಮ್ಮ ರಾಜ್ಯದಲ್ಲಿ ಸರಕಾರಿ ಶಾಲೆಗಳಲ್ಲಿ ಶೇ. ೬೦ರಷ್ಟು ಮಕ್ಕಳು ಮುಖ್ಯವಾಗಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಓದುತ್ತಲಿದ್ದಾರೆ. ಹೆಚ್ಚಿನ ಶಾಲೆಗಳು ಗ್ರಾಮೀಣ ಪ್ರದೇಶದಲ್ಲಿವೆ. ಕಳೆದ ಕೆಲ ವರ್ಷಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ತ್ವರಿತ ಗತಿಯಲ್ಲಿ ಕಡಿಮೆಯಾಗುತ್ತಿದ್ದು ಆಂಗ್ಲ ಮಾಧ್ಯಮದಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚುತ್ತಿದೆ. ಈಗ ಸರಕಾರವೇ ಮುಂದಾಗಿ ಆಂಗ್ಲ ಮಾಧ್ಯಮ ಶಾಲೆಗಳನ್ನು ಆರಂಭಿಸಿರುವುದರಿಂದ ಒಟ್ಟಾರೆ ಪ್ರಾಥಮಿಕ ಹಂತದ ಶಿಕ್ಷಣ ಆಯೋಮಯವಾಗಿದೆ. ಕರೋನ ಕಾರಣದಿಂದಾಗಿ ಸರಕಾರಿ ಶಾಲೆಗಳಲ್ಲಿ ದಾಖಲಾತಿ ಸ್ವಲ್ಪ ಹೆಚ್ಚಾಗಿರುವುದಾಗಿ ಹೇಳಲಾಗಿದೆ.


ನನ್ನ ಮೂರು ವರ್ಷಗಳ ಅವಧಿಯಲ್ಲಿ ಧಾರವಾಡ ವಲಯದ ನೂರಾರು ಶಾಲೆಗಳ ಹಾಗೂ ಕಲಬುರಗಿ ವಿಭಾಗದ ಕೆಲವು ಶಾಲೆಗಳ ನಾಲ್ಕಾರು ನೂರು ಬೇರೆಬೇರೆ ತರಗತಿಗಳ ಮಧ್ಯ ನಿಂತು ಮಕ್ಕಳ ಕಲಿಕೆಯನ್ನು ಮತ್ತು ಗುಣಮಟ್ಟವನ್ನು ಪರಿಶೀಲಿಸುತ್ತ ಹೋದಂತೆ ನನಗೆ ಅನಿಸಿದ್ದು, ಮಕ್ಕಳ ಕಲಿಕೆಯಲ್ಲಿ ಕಲಿಕಾ ಮಾಧ್ಯಮದ ಭಾಷೆಯ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು. ಮಾತೃಭಾಷೆ ಅಥವಾ ಮಗುವಿನ ಪರಿಸರದಲ್ಲಿ ಇಲ್ಲದ ಭಾಷೆಯಲ್ಲಿ ಮಗುವಿನ ಆರಂಭಿಕ ಕಲಿಕೆ ಆದರೆ ಅಂಥ ಮಗುವಿನ ಕಲಿಕೆಯಲ್ಲಿ ತೀವ್ರ ಹಿನ್ನಡೆ ಉಂಟಾಗುತ್ತದೆ. ಇದನ್ನು ಎಲ್ಲ ಭಾಷಾ ತಜ್ಞರು, ಶಿಕ್ಷಣ ತಜ್ಞರು, ಪ್ರಾಜ್ಞರು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದಾರೆ. ಹೊಸದೇನಿಲ್ಲ. ಕನ್ನಡ, ಆಂಗ್ಲ, ಕೆಲವು ಮರಾಠಿ, ಉರ್ದು ಪ್ರಾಥಮಿಕ, ಮಾಧ್ಯಮಿಕ ಸರಕಾರಿ, ಖಾಸಗಿ ಶಾಲೆಗಳ ತರಗತಿಗಳ ಮಧ್ಯ ನಿಂತು ಮಕ್ಕಳ ಕಲಿಕೆಯಲ್ಲಿನ ಆಸಕ್ತಿ, ಓದುವುದು, ಬರೆಯುವುದು, ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವುದು, ಶಿಕ್ಷಕರ ತೊಡಗುವಿಕೆ ಗಮನಿಸುತ್ತ ಹೋದಂತೆ ನನಗೆ ಅನಿಸಿದ್ದು–

೧) ಪ್ರಾಥಮಿಕ ಹಂತದ ಮಗುವಿನ ಕಲಿಕೆ ಪ್ರಕ್ರಿಯೆಯಲ್ಲಿ ಮಗುವಿಗೆ ಕಲಿಕಾ ಭಾಷೆ ಎಲ್ಲವೂ ಆಗಿರುತ್ತದೆ. ತನ್ನ ಮನೆಭಾಷೆ ಅಥವಾ ಪರಿಸರದ ಭಾಷೆಯಲ್ಲಿ ಮಗು ಲವಲವಿಕೆಯಿಂದ ಕಲಿಯುತ್ತದೆ. ತನ್ನದಲ್ಲದ ಭಾಷೆಯಲ್ಲಿ ಮಗುವಿಗೆ ಕಲಿಸಲೆತ್ನಿಸುವುದು ಮಗುವನ್ನು ಹಿಂಸಿಸಿದಂತಾಗುತ್ತದೆ. ೨) ಆಂಗ್ಲ ಅಥವಾ ತನ್ನದಲ್ಲದ ಭಾಷೆಯಲ್ಲಿ ಕಲಿಕೆ ಮಾಡುತ್ತಿರುವ ಮಗುವಿನ ಸಮಸ್ಯೆ ಅಥವಾ ಶಿಕ್ಷಕರ ಮೂಲ ಸಮಸ್ಯೆ ಎಂದರೆ ಭಾಷೆಯನ್ನು ಮೊದಲು ಕಲಿಸಬೇಕೋ ಅಥವಾ ವಿಷಯವನ್ನೋ ಎಂಬ ಗೊಂದಲ. ಭಾಷೆಯನ್ನು ಸಮರ್ಪಕವಾಗಿ ಕಲಿಯದೇ ವಿಷಯ ಕಲಿಕೆ ಅಥವಾ ಗ್ರಹಿಕೆ ಸಾಧ್ಯವಾಗದ ಕಾರಣ ಸಾಮಾನ್ಯ ಬುದ್ಧಿಮತ್ತೆಯ ಮಗು ಕಲಿಕೆಯಲ್ಲಿ ಹಿಂದೆ ಉಳಿಯುತ್ತದೆ. ೩) ನಂತರದ ತರಗತಿಗಳಲ್ಲಿ ಕೂಡಾ ಮಾತೃ ಅಥವಾ ಪರಿಸರದ ಭಾಷೆಯಲ್ಲಿನ ಮಕ್ಕಳ ಕಲಿಕೆ, ಗ್ರಹಿಕೆ, ಪ್ರಗತಿ ಚೆನ್ನಾಗಿರುತ್ತದೆ. ಭಾಷೆ ಒಂದು ಸಮಸ್ಯೆಯಾಗಿರುವುದಿಲ್ಲ. ೪) ಆಂಗ್ಲ ಮಾಧ್ಯಮದ ಮಕ್ಕಳಲ್ಲಿ ಭಾಷೆ ಕಾರಣದಿಂದಲೇ ಮಕ್ಕಳ ಮಧ್ಯ ಸಹಜ ಸಂವಹನ, ತಿಳಿಯದ ವಿಷಯ ಕುರಿತು ಸಹಪಾಠಿಗಳು, ಶಿಕ್ಷಕರೊಂದಿಗೆ ಸಂಶಯ ಪರಿಹರಿಸಿಕೊಳ್ಳಲು ಹಿಂಜರಿಕೆಯ ಕಾರಣ ಅನೇಕ ಮಕ್ಕಳು ತರಗತಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ. ೫) ಪ್ರಾಥಮಿಕ ಹಂತದಲ್ಲಿ ಭಾಷಾ ಕಲಿಕೆ ಮೂಲಕ ಮಗುವಿನ ಭಾಷೆ ಮತ್ತು ಗಣಿತ ಕಲಿಕೆ ಮೂಲಕ ಮಗುವಿನ ಬುದ್ಧಿಮತ್ತೆ ಅರಳಬೇಕು. ಅದು ಸಹಜವಾಗಿ ಆಗುವುದು ಮಗುವಿನ ಮಾತೃ ಭಾಷೆಯಲ್ಲಿ. ಅದಾಗದಿದ್ದರೆ ಮಗುವಿನ ಕಲಿಕೆಯಲ್ಲಿ ನಂತರ ಹಿನ್ನಡೆ ಉಂಟಾಗುವುದು. ೬) ಮನೆಗಳಲ್ಲಿ ಪೂರಕ ವಾತಾವರಣ ಇರದಿದ್ದಲ್ಲಿ ಆಂಗ್ಲ ಭಾಷಾ ಮಾಧ್ಯಮದಲ್ಲಿನ ಕಲಿಕೆ ತುಂಬಾ ಹಿನ್ನಡೆಯನ್ನುಂಟು ಮಾಡುತ್ತದೆ. ಹೀಗಾಗಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ವಿದ್ಯಾರ್ಥಿಗಳಲ್ಲಿ ತಾರತಮ್ಯ ಉಂಟಾಗುತ್ತದೆ. ೭) ಹೆಚ್ಚಿನ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ತರಬೇತಿ ಹೊಂದಿದ ಶಿಕ್ಷಕರೇ ಇರುವುದಿಲ್ಲ. ೮) ಯಾವುದೇ ಒಂದು ತರಗತಿಯಲ್ಲಿ ಸುಮಾರು ಶೇ. ೧೦ ರಷ್ಟು ಮಕ್ಕಳು ಕಲಿಕೆಯಲ್ಲಿ ಚುರುಕಾಗಿರುತ್ತಾರೆ. ಶೇ. ೧೦ ರಿಂದ ೧೫ ರಷ್ಟು ಮಧ್ಯಮ ಬುದ್ಧಿಮತ್ತೆಯವರು. ಇನ್ನುಳಿದವರು ಸಾಧಾರಣ ಬುದ್ಧಿಮತ್ತೆಯವರು ಇರುತ್ತಾರೆ. ಅವರಿಗೆ ಹೆಚ್ಚಿನ ಗಮನ ಬೇಕಾಗುತ್ತದೆ. ಕಲಿಕೆಯಲ್ಲಿ ಚುರುಕಾಗಿರುವ ಶೇ. ಹತ್ತರಷ್ಟು ಮಕ್ಕಳು ಯಾವುದೇ ಮಾಧ್ಯಮವಾದರೂ ಏಗಬಲ್ಲರು ೯) ಗ್ರಾಮೀಣ ಶಾಲೆಗಳಲ್ಲಿ ಮಾತೃಭಾಷೆಯಲ್ಲಿ ಓದಿದ ಮಕ್ಕಳ ಆತ್ಮವಿಶ್ವಾಸದ ಪರಿ ಬೇರೆ ತೆರನಾಗಿರುತ್ತದೆ.

ಸರಕಾರದ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ದೊರೆಯುತ್ತಿಲ್ಲವೆಂದು ಪಾಲಕರು ಆಂಗ್ಲ ಮಾಧ್ಯಮದ ಖಾಸಗಿ ಶಾಲೆಗಳತ್ತ ದೌಡಾಯಿಸುತ್ತಿದ್ದಾರೆ. ಸರಕಾರಿ ಶಾಲೆಗಳಲ್ಲಿನ ಗುಣಮಟ್ಟವನ್ನು, ಆಂಗ್ಲ ಭಾಷೆ ಕಲಿಕೆಯನ್ನು ಸುಧಾರಿಸುವ ಬದಲು ಆಂಗ್ಲ ಮಾಧ್ಯಮ ಅಳವಡಿಕೆ ಸರಿಯಾದ ಕ್ರಮವಲ್ಲ. ಅಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡುವ ಶಿಕ್ಷಕರಿಲ್ಲ. ಇತ್ತ ಆಂಗ್ಲ ಭಾಷೆಯ ಮೇಲೆ ಹಿಡಿತ ಸಾಧಿಸಲಾಗದ, ಅತ್ತ ಕನ್ನಡವನ್ನು ಸರಿಯಾಗಿ ಕಲಿಯದ ತ್ರಿಶಂಕು ಸ್ಥಿತಿಯ ವಿಧ್ಯಾರ್ಥಿಗಳನ್ನು ನಾವು ಮುಂದೆ ನೋಡಬಹುದಾಗಿದೆ.

ಅಪರ ಆಯುಕ್ತನಾಗಿ ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದ ಮೇಲೆ ನನಗೆ ಅನಿಸಿದ್ದು ನಾಲ್ಕು ದಶಕಗಳ ಹಿಂದೆ ಮಕ್ಕಳನ್ನು ಶಾಲೆಗೆ ಸೇರಿಸುವಾಗ ನಮ್ಮ ಮಕ್ಕಳ ಕಲಿಕಾ ಮಾಧ್ಯಮ ಕುರಿತು ನಾವು ಇನ್ನೂ ಹೆಚ್ಚಿನ ವಿವೇಚನೆಯಿಂದ ನಿರ್ಣಯ ತೆಗೆದುಕೊಳ್ಳಬಹುದಾಗಿತ್ತು ಎಂದು. ಹೆಚ್ಚು ವಿಚಾರವಿಲ್ಲದೆ ಒಂದು ನಗರದಲ್ಲಿ ಮನೆ ಸಮೀಪದ ಆಂಗ್ಲ ಮಾಧ್ಯಮ ಶಾಲೆಗೆ ಮಕ್ಕಳನ್ನು ಸೇರಿಸಿದೆ. ಇಬ್ಬರೂ ತಮ್ಮ ಬದುಕಿನಲ್ಲಿ ಚೆನ್ನಾಗಿಯೇ ನೆಲೆ ಕಂಡುಕೊಂಡಿರುವರಾದರೂ ಇವರು ಕನ್ನಡ ಮಾಧ್ಯಮದಲ್ಲಿ ಓದಿದ್ದರೆ ಇವರ ಬದುಕು ಇನ್ನಷ್ಟು ಅರ್ಥಪೂರ್ಣವಾಗಿರುತ್ತಿತ್ತೇನೋ ಎಂದು ಆಗಾಗ ಅನಿಸುವುದುಂಟು.

ಯಾವುದೇ ವಿಧ್ಯಾರ್ಥಿಯ ಬೌದ್ಧಿಕ ಬೆಳವಣಿಗೆಯಲ್ಲಿ ಅವನು ಓದಿದ ಶಾಲೆ, ಕಲಿತ ವಾತಾವರಣ, ಸಹಪಾಠಿಗಳ ಒಡನಾಟದ ಛಾಪು, ಕಲಿಕೆಯ ಸಮಯದಲ್ಲಿ ಬೆಳೆಸಿಕೊಂಡ ಕೆಲವು ಒಳ್ಳೆಯ ಹವ್ಯಾಸಗಳು ಕೊನೆಯವರೆಗೆ ಜತೆಯಾಗಿರುತ್ತವೆ. ಅಂಕಗಳ ಬೆನ್ನು ಹತ್ತಿರುವ ಇಂದಿನ ಯುವ ಪೀಳಿಗೆಗೆ ಬಾಲ್ಯವೇ ಇಲ್ಲದಂತಾಗಿದೆ. ನಮ್ಮ ಪೀಳಿಗೆಯವರ ಅನೇಕ ಮಕ್ಕಳು ಇಂದು ದೇಶ ವಿದೇಶಗಳಲ್ಲಿದ್ದು ಸಾಕಷ್ಟು ಸಂಪಾದಿಸುತ್ತಿರಬಹುದು. ಆದರೆ ಗಳಿಕೆಗೆ ಮೀರಿದ ಒಂದು ತೃಪ್ತಿ ವ್ಯಕ್ತಿಗೆ ಬೇಕಲ್ಲವೆ. ಅದು ಬರುವುದು ಓದಿನೊಂದಿಗೆ ಬರಬಹುದಾದ ಅಂತರಂಗದ ಬೆಳವಣಿಗೆಯಿಂದ, ಬಾಲ್ಯದಿಂದ ಉಳಿದು ಬರುವ ಕೆಲವು ನೆನಪುಗಳಿಂದ ಮಾತ್ರ ಸಾಧ್ಯವೆಂದು ನನ್ನ ಅನಿಸಿಕೆ.



–ವೆಂಕಟೇಶ ಮಾಚಕನೂರ, ನಿವೃತ್ತ ಕೆ.ಎ.ಎಸ್ ಅಧಿಕಾರಿ, ಲೇಖಕ, ಧಾರವಾಡ

೨. ಸರ್ಕಾರಿ ಶಾಲೆಗಳ 'ಸಮಸ್ಯೆ'ಗಳು : ಒಂದು ನೋಟ



ಮಕ್ಕಳ ಶಿಕ್ಷಣದ ಬಗೆಗಿನ ನಿರ್ದಿಷ್ಟ ಆಸಕ್ತಿಯಿಂದ ಹೊಯೇ ಸೇವಾ ನಿವೃತ್ತಿಯ ನಂತರ ಶಿಕ್ಷಣ ವಿಷಯ ಕುರಿತಂತೆ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷಗಳ ಅವಧಿಯ ಸ್ನಾತಕೋತ್ತರ ಪದವಿಯನ್ನು ನಿಯಮಿತ ವ್ಯಾಸಂಗ ಕ್ರಮದ ತರಗತಿಗಳ ನೇರ ವಿದ್ಯಾರ್ಥಿಯಾಗಿ ಪಡೆದೆ. ಈ ಸಮಯದಲ್ಲಿ ನಾನು ಹಲವಾರು ಸರ್ಕಾರಿ ಮತ್ತು ಖಾಸಗಿ ಶಾಲೆಗಳಿಗೆ ಭೇಟಿಕೊಟ್ಟಿದ್ದೇನೆ. ನಂತರವೂ ಸ್ವಯಮಾಸಕ್ತಿಯಿಂದ ಸ್ಥಳೀಯ ಶಾಲೆಗಳಿಗೆ ಹೋಗಿ ಪಾಠ ಹೇಳಿಕೊಡುವುದನ್ನು ಮಾಡುತ್ತಿರುತ್ತೇನೆ. ಇವುಗಳ ಅನುಭವದ ಆಧಾರದ ಮೇಲೆ ಈ ನನ್ನ ಮುಂದಿನ ಮಾತುಗಳನ್ನು ದಾಖಲಿಸುತ್ತಿದ್ದೇನೆ–

ಶಿಕ್ಷಣದ ಬಗ್ಗೆ ಮಾತನಾಡುವಾಗ, ಸರ್ಕಾರಿ ಶಾಲೆ ಎಂದರೆ ಕನ್ನಡ ಮಾಧ್ಯಮ ಶಾಲೆ ಮತ್ತು ಖಾಸಗಿ ಶಾಲೆ ಎಂದರೆ ಆಂಗ್ಲ ಮಾಧ್ಯಮ ಶಾಲೆ ಎಂದೇ ತಿಳಿಯಬೇಕಾಗುತ್ತದೆ. ಪ್ರಾದೇಶಿಕತೆ ಅಥವಾ ಸ್ಥಳೀಯತೆಯ ವೈಶಿಷ್ಟ್ಯವನ್ನು ಉಳಿಸಿಕೊಳ್ಳಬೇಕಾದರೆ ಆಯಾ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಭಿಮಾನ ಹೊಂದಿರಬೇಕು. ಮಾತೃಭಾಷೆಯಲ್ಲಿ ಅಥವಾ ಪರಿಸರದ ಭಾಷೆಯಲ್ಲಿ ಶಿಕ್ಷಣ ನೀಡುವ ಹೊಣೆಗಾರಿಕೆ ಕೇವಲ ಸರ್ಕಾರದ ಮೇಲಿದೆಯೆ? ಹಾಗಿಲ್ಲದಿದ್ದರೆ, ಆಂಗ್ಲ ಮಾಧ್ಯಮದ ಖಾಸಗಿ ಶಾಲೆಗಳು ಈ ಪರಿಯಾಗಿ ಏಕೆ ಅಣಬೆಗಳಂತೆ ತಲೆಯೆತ್ತಿವೆ? ನನ್ನ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯ ಪತಿ, ಮನೆಗೆ ಸರಿಯಾಗಿ ದವಸ ಧಾನ್ಯ ತಂದುಹಾಕದಿದ್ದರೂ, ತನ್ನ ಇಬ್ಬರು ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ದುಬಾರಿ ಶುಲ್ಕ ತೆತ್ತು ಸೇರಿಸಿ, ಪ್ರತಿದಿನ ೪ ಕಿ.ಮಿ. ದೂರದ ಶಾಲೆಗೆ ತನ್ನ ಬೈಕ್‌ನಲ್ಲಿ ಬಿಟ್ಟು, ಸಂಜೆ ಕರೆದುಕೊಂಡು ಬರುತ್ತಾರೆ.

ಪೋಷಕರ ಆಂಗ್ಲ ಮಾಧ್ಯಮ ಶಾಲೆಯ ಮೋಹವಾದರೂ ಏತಕ್ಕೆ? ಮಕ್ಕಳು ಭವಿಷ್ಯದಲ್ಲಿ ಒಳ್ಳೆಯ ಸ್ಥಾನ–ಮಾನ ಸಂಪಾದಿಸಲಿ ಎಂಬುದೇ ಆಗಿದ್ದರೆ ಈ ಉದ್ದೇಶ ಕನ್ನಡ ಮಾಧ್ಯಮ ಶಾಲೆಯಲ್ಲಿ ವಿದ್ಯಾಭಾಸ ಮಾಡಿದರೆ ಈಡೇರುವುದಿಲ್ಲವೇ? ಕನ್ನಡ ಮಾಧ್ಯಮದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುವುದಿಲ್ಲವೇ? ಸರ್ಕಾರಿ ಶಾಲೆಯ ಶಿಕ್ಷಕರು ಪಾಠ ಹೇಳಿಕೊಡಲು ಸಮರ್ಥರಲ್ಲವೇ? ಈ ಪ್ರಶ್ನೆಗಳಿಗೆ ಉತ್ತರ ಹೌದೆಂಬುದಾದರೆ, ಪೋಷಕರು ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳತ್ತ ಮುಖ ಮಾಡಿರುವುದೇತಕ್ಕೆ? ನಾನು ಗಮನಿಸಿದಂತೆ, ಖಾಸಗಿ ಶಾಲೆಯಲ್ಲಿ ಲಭ್ಯವಿರುವ ಕೆಲವು ಮೇಲ್ನೋಟಕ್ಕೆ ಕಾಣುವ ಸವಲತ್ತುಗಳು–ಅಂದರೆ ಸಮವಸ್ತ್ರ, ಓವರ್‌ಕೋಟು, ಟೈ, ಕುತ್ತಿಗೆಗೆ ನೇತಾಡುವ ಐಡೆಂಟಿಟಿ ಕಾರ್ಡ್, ಶಾಲೆಗೆ ಹೋಗಲು ಶಾಲೆಯ ಬಸ್ಸು, ಇತ್ಯಾದಿಗಳ ಆಕರ್ಷಣೆಗಳು. ಅಲ್ಲದೆ, ಖಾಸಗಿ ಶಾಲೆಗಳ ಪರವಾಗಿ ಧನಾತ್ಮಕ ಅಂಶ ಎಂದು ಪಾಲಕರಿಂದ ಪರಿಗಣಿಸಲ್ಪಡುವ ಇನ್ನೊಂದು ವಿಷಯವೆಂದರೆ, ಶಾಲೆಯನ್ನು ಸ್ವಚ್ಛ ಮಾಡುವ ಕೆಲಸ, ಶೌಚಾಲಯ ಶುಚಿಗೊಳಿಸುವ ಕೆಲಸ ಮತ್ತು ಶಾಲೆಯ ಕೈತೋಟದ ಕೆಲಸ ಇತ್ಯಾದಿ, ಸರ್ಕಾರಿ ಕನ್ನಡ ಶಾಲೆಗಳಲ್ಲಿರುವಂತೆ ಶಾಲಾಮಕ್ಕಳಿಂದ ಮಾಡಿಸುವುದಿಲ್ಲ. ಒಂದು ಶಾಲೆಯ ಪಾಲಕರ ಸಭೆಯಲ್ಲಿ, ಬೆಂಗಳೂರಿನಲ್ಲಿ ಹೋಟೆಲ್ ಸಪ್ಲೆಯರ್ ಕೆಲಸ ಮಾಡಲಾದರೂ, ಇಂಗ್ಲೀಷ್ ಭಾಷೆಯ ಬಳಕೆ ತಿಳಿದಿರಬೇಕು, ಅದಕ್ಕಾಗಿಯಾದರೂ, ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಅಗತ್ಯ ಎಂದು ಒಂದು ಪಾಲಕರ ಸಮುದಾಯವೇ ನನಗೆ ಮನವರಿಕೆ ಮಾಡಲು ಪ್ರಯತ್ನಿಸಿತು. ಆಂಗ್ಲ ಭಾಷೆಯಲ್ಲಿ ಪ್ರಭುತ್ವವನ್ನು ಸಾಧಿಸುವುದಂತೂ ದೂರದ ಮಾತು, ಇಲ್ಲಿ ಇಂಗ್ಲೀಷ್ ಕಲಿಕೆ ಕೇವಲ ಒಂದು ಶೈಲೀಕೃತ ರೀತಿಯಲ್ಲಿ ಕೆಲವರು ಮಾತಾಡುವ ರೀತಿಯನ್ನು ಅನುಕರಿಸುವಷ್ಟಕ್ಕೇ ಸೀಮಿತವಾಗುತ್ತದೆ. ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳು ಕೇವಲ ಪರೀಕ್ಷೆಗಾಗಿ ತಯಾರಿ ಮಾಡುವ, ಸ್ಪರ್ಧಾತ್ಮಕ ಜಗತ್ತಿಗೆ ಬೇಕಾದ ಉತ್ಪನ್ನಗಳನ್ನಾಗಿ ಮಕ್ಕಳನ್ನು ತಯಾರುಗೊಳಿಸುವ ಕಾರ್ಖಾನೆಗಳಾಗಿರುವುದು ಕೇವಲ ಮಾಹಿತಿಯ ಕಣಜವೇ ವಿದ್ಯೆ ಎಂದು ನಂಬಿರುವ ಈ ಕಾಲದ ಪ್ರತೀಕವಾಗಿದೆ.

ಇನ್ನು ಸರ್ಕಾರಿ ಕನ್ನಡ ಶಾಲೆಗಳ ಸ್ಥಿತಿ–ಗತಿಗಳನ್ನು ನೋಡಿದರೆ, ಶಾಲೆಗಳ ಮೂಲಸೌಕರ್ಯಗಳಾದ, ಸಾಕಷ್ಟು ಸಂಖ್ಯೆಯ ಕೊಠಡಿಗಳು, ಪೀಠೋಪಕರಣಗಳು, ಆಟದ ಬಯಲು, ಶೌಚಾಲಯ ಇತ್ಯಾದಿ ವಿಷಯಗಳಿಗೆ ೨೦೦೯ರ ಶಿಕ್ಷಣ ಹಕ್ಕು ಕಾಯ್ದೆಯನ್ನು ಅನುಷ್ಠಾನಗೊಳಿಸುವಾಗ ಗಮನಕೊಡಲಾಗಿದೆ. ಸಾಮಾನ್ಯವಾಗಿ ಅವುಗಳ ಕೊರತೆ ಕಾಣದು. ವಿದ್ಯಾರ್ಥಿಗಳ ಸಂಖ್ಯೆಯ ಅನುಪಾತಕ್ಕೆ ಸರಿಯಾಗಿ ಶಿಕ್ಷಕರ ಸಂಖ್ಯೆ ಮತ್ತು ಅವರ ಸಾಮರ್ಥ್ಯದ ಬಗ್ಗೆಯೂ ಅನುಮಾನಿಸುವಂತಿಲ್ಲ. ಶಿಕ್ಷಕರಿಗೆ ಆಗಾಗ್ಗೆ ತರಬೇತಿ ಕೊಡುವ ವ್ಯವಸ್ಥೆ ಇರುವುದರಿಂದ, ಶಿಕ್ಷಕರು ಕಲಿಸುವ ವಿಚಾರದಲ್ಲಿ ಸಬಲರೇ ಆಗಿದ್ದಾರೆ. ಹಾಗಾಗಿ, ಶಿಕ್ಷಕರು ಖಾಸಗಿ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕರಿಗಿಂತ, ಹೆಚ್ಚು ಪರಿಣತಿ ಹೊಂದಿದವರೇ ಆಗಿದ್ದಾರೆ. ಆದರೆ, ಶಾಲೆಯ ಶಿಕ್ಷಣದ ಗುಣಮಟ್ಟವು ಶಿಕ್ಷಕರು ಮಕ್ಕಳಿಗೆ ಪಾಠಮಾಡುವ ಬಗ್ಗೆ ಆಸಕ್ತಿ ಹೊಂದಿದ್ದಾರೆಯೇ ಎಂಬುದರ ಮೇಲೆ ನಿರ್ಧರಿತವಾಗುತ್ತದೆ. ಅಲ್ಲದೆ, ಶಿಕ್ಷಕರು, ಅದರಲ್ಲಿಯೂ ಮುಖ್ಯ ಶಿಕ್ಷಕರಿಗೆ, ಶಿಕ್ಷಣದ ಹೊರತಾದ ಕೆಲಸಗಳಾದ, ಮಧ್ಯಾಹ್ನದ ಬಿಸಿಯೂಟದ ವ್ಯವಸ್ಥೆ, ಅದರ ದಿನಸಿ ಸಾಮಗ್ರಿಗಳ ಲೆಕ್ಕ, ಪ್ರತಿದಿನ ಮೇಲಧಿಕಾರಿಗಳಿಗೆ ಇವುಗಳ ಮಾಹಿತಿ ರವಾನೆ ಇವುಗಳ ಜವಾಬ್ದಾರಿಯನ್ನೂ ಹೊರಿಸಿರುವುದರಿಂದ, ಪಾಠ ಮಾಡಬೇಕಾದ ವಿಷಯಗಳ ಕಡೆಗೆ ಅವರ ಗಮನ ಕಡಿಮೆಯೇ. ಕೆಲವೊಂದು ಕಡೆ ಶಿಕ್ಷಕರು ಶಾಲೆಯಿರುವ ಊರಿನಲ್ಲಿ ವಾಸಿಸದೇ ಇರುವುದರಿಂದ, ಅಂಥವರಿಗೆ ಪಾಠ ಮಾಡುವುದು ಸಂಬಳದ ಒಂದು 'ವೃತ್ತಿ' ಮಾತ್ರವಾಗಿರುತ್ತದೆ. ನನ್ನ ಶಾಲೆಯ ದಿನಗಳನ್ನು ನೆನೆಸಿಕೊಂಡರೆ, ಶಿಕ್ಷಕರಿಗೆ ಮಕ್ಕಳ ಅಭ್ಯಾಸದ ಬಗ್ಗೆ ಕಾಳಜಿ ಎಷ್ಟು ಇತ್ತೆಂದರೆ, ನಮ್ಮ ಊರಿನಲ್ಲಿ, ಮಾರ್ಚ್ ತಿಂಗಳಿನಲ್ಲಿ, ಊರ ಜಾತ್ರೆಯ ಸಮಯದಲ್ಲಿ ರಾತ್ರಿಯಿಡೀ ಯಕ್ಷಗಾನ ನೋಡಿದ ಮಕ್ಕಳು ಮಾರನೆಯ ದಿನ ಪರೀಕ್ಷೆಯಲ್ಲಿ ಬರೆಯಲು ಕುಳಿತಾಗ ಶಿಕ್ಷಕರಿಂದ ಬರೆ ಹಾಕಿಸಿಕೊಂಡಿದ್ದಿದೆ! ಆದರೆ, ಈಗ ಶಿಕ್ಷಣ ಹಕ್ಕಿನ ಕಾಯ್ದೆ ಪ್ರಕಾರ ಮಕ್ಕಳನ್ನು ದಂಡಿಸುವಂತಿಲ್ಲ. ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸುವ ಪೋಷಕರಿಗೆ ಈ ಕಾಯ್ದೆಯ ಎಲ್ಲಾ ಅಂಶಗಳ ಅರಿವಿದ್ದಂತಿದೆ. ಒಮ್ಮೆ ಒಂದು ಶಾಲೆಯ ದಕ್ಷ ಶಿಕ್ಷಕ ೬ನೆಯ ತರಗತಿಯ ಒಬ್ಬ ಬಾಲಕನನ್ನು ಇಂಗ್ಲೀಷ್ ಪಾಠದ ಹೋಂ ವರ್ಕ್ ಮಾಡದೆ, ತಂಟೆ ಮಾಡಿದುದಕ್ಕಾಗಿ, ಗದರಿಸಿ ಹೊಡೆದುದಕ್ಕಾಗಿ, ೧೦ ನಿಮಿಷದಲ್ಲಿ ಅವನು ತನ್ನ ತಂದೆಯನ್ನು ಕರೆದುಕೊಂಡು ಬಂದು ಧಮಕಿ ಹಾಕಿಸಿದ್ದನ್ನು ನಾನು ನೋಡಿರುವೆ. ಇದಕ್ಕೆ ವಿರುದ್ಧವಾಗಿ, ಇನ್ನೊಂದು ಶಾಲೆಯಲ್ಲಿ 'ಈ ಮಕ್ಕಳಿಗೆ ಎಷ್ಟು ಕಲಿಸಿದರೂ ಅಷ್ಟೇ' ಎಂಬ ಮನೋಭಾವ ಇರುವ ಶಿಕ್ಷಕರು ಓದಿನಲ್ಲಿ ಮುಂದಿರದ, ಆದರೆ ಇತರ ವಿಷಯಗಳಲ್ಲಿ ಚೂಟಿಯಾದ ಬಾಲಕರಿಂದ ಶಾಲೆಯ ಶೌಚಾಲಯ ಸ್ವಚ್ಛ ಮಾಡಿಸುವುದೂ ಸೇರಿದಂತೆ ಇತರೆ ದೈಹಿಕ ಶ್ರಮದ ಮತ್ತು ಇತರ ಕೆಲಸಗಳನ್ನು ಮಾಡಿಸುತ್ತಾರೆ. ನಾನು ಒಬ್ಬ ಬಾಲಕನನ್ನು 'ನೀನು ಯಾಕೆ ತರಗತಿಯಲ್ಲಿ ಗಮನವಿಟ್ಟು ಪಾಠ ಕೇಳುವುದಿಲ್ಲ? ಮುಂದೇನು ಆಗಬೇಕೆಂದಿದ್ದೀಯಾ?' ಎಂದು ಪ್ರಶ್ನಿಸಿದಾಗ 'ಗಾರೆ ಕೆಲಸಕ್ಕೆ ಹೋಗ್ತೀನಿ' ಎಂದುತ್ತರಿಸಿದನು! ಈ ಆಕ್ಟ್‌ನ ಇನ್ನೊಂದು ನಿಬಂಧನೆಯಂತೆ, ಮಕ್ಕಳನ್ನು, ೮ನೆಯ ತರಗತಿಯವರೆಗೆ ನಪಾಸು ಮಾಡುವಂತಿಲ್ಲ. ಇದರಿಂದಲೂ ಮಕ್ಕಳ ಕಲಿಯುವ ಆಸಕ್ತಿಗೆ ಹಿನ್ನಡೆಯಾಗುತ್ತದೆ.

ಆಂಗ್ಲ ಮಾಧ್ಯಮದಲ್ಲಿ ಕಲಿತ ಮಕ್ಕಳು ವಿಜ್ಞಾನದ ಯಾವುದೇ ಪರಿಕಲ್ಪನೆಗಳನ್ನು (Concepts) ಅರ್ಥ ಮಾಡಿಕೊಳ್ಳಲು ಹೆಣಗಾಡುತ್ತಾರೆ. ಶಾಲೆಗಳಲ್ಲಿ ಪ್ರಯೋಗಗಳನ್ನು ಮಾಡಿ, ವಿಜ್ಞಾನದ ವಿಷಯಗಳನ್ನು ಅರ್ಥಮಾಡಿಸುವ ಪರಿಪಾಟವೇ ಕಡಿಮೆಯಾಗಿದೆ. ಇಂತಹ ಸಂದರ್ಭಗಳಲ್ಲಿ, ಆಂಗ್ಲಭಾಷೆಯಲ್ಲಿ ಬಾಯಿಪಾಠ ಮಾಡಿ ಮಕ್ಕಳು ಪರೀಕ್ಷೆಗಳನ್ನು ಗೆಲ್ಲುತ್ತಾರೆಯೇ ಹೊರತು, ವಿಷಯಗಳನ್ನು ಮನನ ಮಾಡಿಕೊಂಡು ಅಂತರ್ಗತ ಮಾಡಿಕೊಳ್ಳುವುದಿಲ್ಲ. ಹೊಸ ಪರಿಕಲ್ಪನೆಗಳನ್ನು ಆಡುವ ಭಾಷೆಯಲ್ಲಿ ಸುತ್ತಮುತ್ತಲಿನ ಆಗುಹೋಗುಗಳ ವಿವರಣೆ ಮೂಲಕ ಅರ್ಥಮಾಡಿಸದಿದ್ದರೆ, ವಿಷಯಗಳು ಅಂತರ್ಗತವಾಗದೆ, ಕೇವಲ ಪುಸ್ತಕದ ಬದನೆಕಾಯಿ ಆಗುತ್ತದೆ. ಇನ್ನೊಂದು ಪ್ರಮುಖ ವಿಚಾರವೆಂದರೆ, ಖಾಸಗಿ ಶಾಲೆಗಳಿಗೆ ಶಾಲೆಯ ಫಲಿತಾಂಶದ ಬಗ್ಗೆ ಮಾತ್ರ ಚಿಂತೆಯಿರುವುದರಿಂದ, ಅವರ ನಿರೀಕ್ಷೆಯ ಮಟ್ಟದಲ್ಲಿ ಮಕ್ಕಳು ಕಲಿಯದಿದ್ದರೆ ೯ನೆಯ ತರಗತಿಯಲ್ಲಿ ನಪಾಸು ಮಾಡುತ್ತಾರೆ ಅಥವಾ ಟಿ.ಸಿ. ಕೊಟ್ಟು ಸರ್ಕಾರಿ ಶಾಲೆಗೆ ಕಳಿಸುತ್ತಾರೆ. ಹೇಗಿದೆ ಖಾಸಗಿ ಶಾಲೆಗಳಲ್ಲಿ ಮಕ್ಕಳಿಗೆ ಕಲಿಸುವ ಗುಣಮಟ್ಟ?!!

ಬಡವ–ಶ್ರೀಮಂತರಿಗೆ ಏಕರೂಪದ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಈವರೆಗೆ ನಮ್ಮಲ್ಲಿ ಒದಗಿಸಲಾಗದಿದ್ದರೂ, ಎಲ್ಲಾ ಪೋಷಕರಿಗೆ ತಮ್ಮ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣ ಕೊಡಿಸಬೇಕೆಂಬ ಏಕರೂಪದ ಮಹತ್ವಾಕಾಂಕ್ಷೆಯನ್ನು ಮೂಡಿಸುವಲ್ಲಿ ಯಶಸ್ವಿಯಾದ ಬಹುರಾಷ್ಟ್ರೀಯ ಕಂಪನಿಗಳ ಶಿಕ್ಷಣ ಜಾಗತೀಕರಣದ ಹುನ್ನಾರವಿದು ಎಂದೆನಿಸುತ್ತದೆ.



–ಕೆ.ಶ್ರೀದೇವಿ, ಅಂಚೆ ಇಲಾಖೆಯ ನಿವೃತ್ತ ಉಪ ನಿರ್ದೇಶಕರು, ಶಿಕ್ಷಣ ಸೇವಾ ಕಾರ್ಯಕರ್ತೆ, ಶಿವಮೊಗ್ಗ.

೩ ಹಳ್ಳಿ ಶಾಲೆಯಲ್ಲಿ ಕನ್ನಡ ಮಾಧ್ಯಮ ಬಂದ್ ಆದ ಕಥೆ

ಕನ್ನಡ ಅಥವಾ ಇಂಗ್ಲೀಷ್ ಮಾಧ್ಯಮದ ದ್ವಂದ್ವ ಹೆಚ್ಚು ಕಾಡುತ್ತಿರುವುದು ಹಳ್ಳಿಗರಿಗೆ ಮಾತ್ರ. ನಗರಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳು ಇದ್ದೂ ಇಲ್ಲದಂತಿರುವುದರಿಂದ ಈ ಸಮಸ್ಯೆ ಅಲ್ಲಿ ಇಲ್ಲ. ಹಳ್ಳಿಗಳಲ್ಲೂ ಈ ಸಮಸ್ಯೆ ಮೊದಲು ಇರಲಿಲ್ಲ. ಈಗೀಗ ಇಂಗ್ಲೀಷ್ ಮಾಧ್ಯಮ ಶಾಲೆಗಳು ಅಲ್ಲಲ್ಲಿ ತಲೆಯೆತ್ತತೊಡಗಿದಂತೆ ಕವಲುದಾರಿಯೊಂದು ಸೃಷ್ಟಿಯಾಗಿದೆ. ಹೆಗ್ಗೋಡಿನಲ್ಲಿ ನನ್ನ ಇಬ್ಬರು ಮಕ್ಕಳನ್ನು ಸರಕಾರಿ ಕನ್ನಡ ಮಾಧ್ಯಮದ ಶಾಲೆಗೆ ಸೇರಿಸುವಾಗಲೇ ಹತ್ತಿರದಲ್ಲಿ ಕೇಂದ್ರೀಯ ಪಠ್ಯಕ್ರಮದ ಇಂಗ್ಲೀಷ್ ಮಾಧ್ಯಮದ 'ಪ್ರತಿಷ್ಠಿತ'(ರ) ಶಾಲೆಯೊಂದು ಆರಂಭವಾಗಿತ್ತು. ಆಸುಪಾಸಿನ ಮೇಲ್ವರ್ಗದ ಮಕ್ಕಳೆಲ್ಲಾ ಅದೇ ಶಾಲೆಗೆ ಸೇರತೊಡಗಿದ್ದರು. ಮಕ್ಕಳ ಪ್ರಾಥಮಿಕ ಶಿಕ್ಷಣ ಕನಿಷ್ಠ ಏಳನೇ ತರಗತಿವರೆಗೆ ಮಾತೃಭಾಷೆಯಲ್ಲಿರಬೇಕೆಂಬುದು ನನ್ನ ಖಚಿತ ನಂಬಿಕೆಯಾಗಿರುವುದರಿಂದ ಈ ಬಗ್ಗೆ ಯಾವತ್ತೂ ಗೊಂದಲವಿರಲಿಲ್ಲ.

ವಿಜಯಪುರ ಜಿಲ್ಲೆಯ ಹಳ್ಳಿಯೊಂದರಲ್ಲಿ ನಾನು ಓದಿದ ಕನ್ನಡ ಶಾಲೆಯ ನೆನಪುಗಳು ನನ್ನೊಳಗೆ ಅಚ್ಚೊತ್ತಿ ಕುಳಿತಿವೆ. ಅಲ್ಲಿ ತರಗತಿಗೊಂದರಂತೆ ಕೊಠಡಿಗಳಿರಲಿಲ್ಲ; ವಿಷಯಕ್ಕೊಬ್ಬರಂತೆ ಶಿಕ್ಷಕರೂ ಇರಲಿಲ್ಲ; ಬೇಸಿಗೆಯಲ್ಲಿ ಕೆಲವು ತರಗತಿಗಳು ಬಯಲಿನ ಬಸರಿಮರದ ನೆರಳಿನಲ್ಲಿ ನಡೆಯುತ್ತಿದ್ದವು. ಅಲ್ಲಿ ಬ್ರಾಹ್ಮಣರಿಂದ ದಲಿತರು ಮುಸ್ಲಿಮರಾದಿಯಾಗಿ ಬಯಲುಸೀಮೆಯ ಸಕಲ ಜಾತಿಯ ಮಕ್ಕಳೂ ಒಟ್ಟಿಗೆ ಕುಳಿತು ಪಾಠ ಕೇಳುತ್ತಿದ್ದೆವು. ಶಾಲೆಬಿಡುವ ಅರ್ಧಘಂಟೆ ಮೊದಲು ನಮ್ಮ ಏಕೋಪಾಧ್ಯಾಯರಾದ 'ಕೂಡ್ಲಿಗಿ ಮಾಸ್ತರ'ರು ಹೇಳುತ್ತಿದ್ದ ಸತ್ಯಹರಿಶ್ಚಂದ್ರ, ತಾರಕಾಸುರ, ಮೊದಲಾದ ಕಥೆಗಳು ನಮ್ಮ ನಮ್ಮ ಮನೆ ಸೇರುವವರೆಗೆ ದಾರಿಯುದ್ದಕ್ಕೂ ಚರ್ಚೆಯ ವಿಷಯವಾಗಿರುತ್ತಿದ್ದವು.

ನನ್ನ ಮಕ್ಕಳೂ ಹೀಗೆ ಎಲ್ಲಾ ಸಮುದಾಯದ ಮಕ್ಕಳೊಂದಿಗೆ ಮುಕ್ತವಾಗಿ ಆಡಿ ಬೆಳೆಯಲಿ ಎಂದೇ ಬಿಗುವಿನ ವಾತಾವರಣದ ಇಂಗ್ಲೀಷ್ ಮಾಧ್ಯಮ ಶಾಲೆಯ ಬದಲು ಕನ್ನಡ ಮಾಧ್ಯಮದ ಸರಕಾರಿ ಶಾಲೆಗೆ ಸೇರಿಸಿದೆ. ಏಳನೆ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಹೆಗ್ಗೋಡಿನಲ್ಲೇ ಓದಿದ ನನ್ನ ಮಗಳು ಎಂಟನೇ ತರಗತಿಯಿಂದ ಸಾಗರದ ಸರಕಾರಿ ಪ್ರೌಢಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದಲ್ಲಿ ಓದಿದಳು. ಮುಂದೆ ಬಿಕಾಂ ಪದವಿ ತರಗತಿಗಳನ್ನು ಓದುವಾಗಲೂ ಅವಳಿಗೆ ಇಂಗ್ಲೀಷ್ ಸಮಸ್ಯೆಯಾಗಿದ್ದಿಲ್ಲ. ಆದರೆ ನನ್ನ ಮಗ ಆರನೇ ತರಗತಿಗೆ ಬಂದಾಗ ಒಂದು ಸಮಸ್ಯೆ ಎದುರಾಯಿತು.

ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಮಾಧ್ಯಮವನ್ನು ಆರಂಭಿಸದೆ ಹೋದರೆ ತಮ್ಮ ಶಾಲೆಗೆ ವಿದ್ಯಾರ್ಥಿಗಳ ಕೊರತೆಯಾಗುತ್ತದೆ ಎಂದು ಭಾವಿಸಿದ ಶಾಲೆಯ ಮುಖ್ಯಶಿಕ್ಷಕರು ಆರರಿಂದ ಎಂಟನೇ ತರಗತಿಯವರೆಗೆ (ಇಲ್ಲಿ ಎಂಟನೇ ತರಗತಿಯೂ ಇದೆ) ಇಂಗ್ಲೀಷ್ ಮಾಧ್ಯಮವನ್ನು ಆರಂಭಿಸಲು ಶಿಕ್ಷಣಾಧಿಕಾರಿಗಳಿಂದ ಅನುಮತಿ ಪಡೆದುಕೊಂಡರು. ಅವರು ಬರಿ ಅನುಮತಿ ನೀಡಿದ್ದರೆ ಹೊರತು ಹೆಚ್ಚುವರಿ ಶಿಕ್ಷಕರನ್ನು ನೀಡಲಾಗುವುದಿಲ್ಲವೆಂದು ತಿಳಿಸಿದ್ದರು. ಈ ವಿಷಯವನ್ನು ಚರ್ಚಿಸಲು ಪೋಷಕರ ಸಭೆಯನ್ನು ಕರೆಯಲಾಯಿತು. ಸಭೆಯಲ್ಲಿ ಇಂಗ್ಲೀಷ್ ಪರವಾದ ಧ್ವನಿಗಳೇ ಜೋರಾಗಿದ್ದವು. ಕನ್ನಡ ಮಾಧ್ಯಮ ಸಾಕೆನ್ನುವವರು ಸುಮ್ಮನೆ ಕುಳಿತರು. ನಾನು ನನ್ನ ಅಭಿಪ್ರಾಯ ತಿಳಿಸುತ್ತಾ ಪ್ರಾಥಮಿಕ ಹಂತದಲ್ಲಿ ಮಕ್ಕಳಿಗೆ ಮಾತೃಭಾಷೆಯಲ್ಲಿ ಅರ್ಥವಾದಷ್ಟು ಅನ್ಯ ಭಾಷೆಯಲ್ಲಿ ಅರ್ಥವಾಗಲಾರದು. ಒಂದು ಭಾಷೆಯಾಗಿ ಇಂಗ್ಲೀಷನ್ನು ಕಲಿಸುವುದೇ ಬೇರೆ; ಮಾಧ್ಯಮವೇ ಬೇರೆ. ನಾನಂತೂ ನನ್ನ ಮಗನನ್ನು ಕನ್ನಡ ಮಾಧ್ಯಮದಲ್ಲೇ ಓದಿಸುತ್ತೇನೆಂದೆ.

ಈಗಿನಂದಲೆ ತಮ್ಮ ಮಕ್ಕಳು ಇಂಗ್ಲೀಷ್ ಮಾಧ್ಯಮದಲ್ಲಿ ಓದಿದರೆ ಮುಂದೆ ಸುಲಭವಾಗುತ್ತದೆ ಎಂಬ ತಿರ್ಮಾನಕ್ಕೆ ಬಂದಿದ್ದ ಹೆಚ್ಚಿನ ಪೋಷಕರು ಇಂಗ್ಲೀಷ್ ಪರವಾಗಿಯೇ ನಿಂತರು. ಶಿಕ್ಷಕರ ಕೊರತೆ ನೀಗಿಸಲು ಹೆಚ್ಚುವರಿಯಾಗಿ ಖಾಸಗಿ ಶಿಕ್ಷಕರೊಬ್ಬರನ್ನು ನೇಮಕ ಮಾಡಿಕೊಂಡು ಅವರ ವೇತನವನ್ನು ಪೋಷಕರೇ (ವರ್ಷಕ್ಕೆ ತಲಾ ೨೦೦೦/– ರೂ. ಗಳಂತೆ) ಭರಿಸುವುದೆಂದು ಎಲ್ಲರೂ ತೀರ್ಮಾನಕ್ಕೆ ಬಂದರು. ಬಹುತೇಕ ಕನ್ನಡ ಮಾಧ್ಯಮದಲ್ಲೆ ಓದಿ ಬಂದಿರುವ ಇಲ್ಲಿಯ ಶಿಕ್ಷಕರಿಗೆ ಇಂಗ್ಲೀಷ್‌ನಲ್ಲಿ ಬೋಧನೆ ಸಾಧ್ಯವೆ? ಎಂಬುದನ್ನೂ ಯಾರೂ ಚಿಂತಿಸುವ ಗೋಜಿಗೆ ಹೋಗಲಿಲ್ಲ.

ತನ್ನ ವಾರಿಗೆಯ ಗೆಳೆಯರೆಲ್ಲಾ 'ಇಂಗ್ಲೀಷ್ ಮೀಡಿಯಮ್' ಹೆಸರಿನಲ್ಲಿ ಬೇರೆ ಕೊಠಡಿ ಸೇರಿದ ಮೇಲೆ ನನ್ನ ಮಗನಿಗೆ ಏಕಾಂಗಿತನ ಕಾಡತೊಡಗಿತು. ಹೆಚ್ಚಾಗಿ ಬುದ್ಧಿವಂತ ಮಕ್ಕಳೇ ಆ ಕಡೆ ಹೋಗಿದ್ದರಿಂದ ಕನ್ನಡ ಮಾಧ್ಯಮದಲ್ಲಿ ಉಳಿದವರು ದಡ್ಡರು ಎನ್ನುವಂತಾಯಿತು. ಕನ್ನಡವನ್ನು ಆಯ್ದುಕೊಂಡಿದ್ದ ಒಬ್ಬ ವಿದ್ಯಾರ್ಥಿನಿಯ ಪೋಷಕರಿಗೆ ಮುಖ್ಯೋಪಾಧ್ಯಾಯರು "ನಿಮ್ಮ ಮಗಳ ಭವಿಷ್ಯ ಹಾಳು ಮಾಡುತ್ತೀರಿ" ಎಂದು 'ಬುದ್ಧಿವಾದ' ಹೇಳಿದರು. ವಿಪರ್ಯಾಸವೆಂದರೆ ಇವರು ಸ್ವತಃ ಕನ್ನಡ ಶಿಕ್ಷಕರು! ಈ ಎಲ್ಲಾ ಬೆಳವಣಿಗೆಯಿಂದ ಗೊಂದಲಕ್ಕೊಳಗಾದ ನನ್ನ ಮಗ ತಾನೇನು ಮಾಡಲಿ ಎಂದ. ನಾನು ಹೇಳಿದೆ : "ನಿನ್ನ ಇಷ್ಟ, ಬಲವಂತವೇನೂ ಇಲ್ಲ". ಅವನು ಯಾವ ಮಾಧ್ಯಮಕ್ಕೆ ಸೇರಿದರೂ ಇನ್ನೊಂದರ ಕೊರತೆಯನ್ನು ನೀಗಿಸಲು ನಾನು ಸಿದ್ಧನಿದ್ದೆ.

ಇಂಗ್ಲೀಷಿನ ವಾತಾವರಣವೇ ಇಲ್ಲದ ಹಳ್ಳಿಯ ಶಾಲೆಗಳಲ್ಲಿ ಕೇವಲ



ಈ ಶಾಲೆಯಲ್ಲಿ ಈಗ ಕನ್ನಡ ಮಾಧ್ಯಮ ಬಂದ್

ಪಠ್ಯಪುಸ್ತಕಗಳಿಂದ ಇಂಗ್ಲೀಷ್ ಭಾಷಾ ಜ್ಞಾನವೇನೂ ಸುಧಾರಿಸುವಂತಿರಲಿಲ್ಲ. ಈ ವಿಷಯವಾಗಿ ಆ ಸಂದರ್ಭದಲ್ಲಿ ನಾನು ಬೇರೆಯವರೊಂದಿಗೆ ಮಾತಾಡುವುದನ್ನೂ, ಫೋನ್‌ನಲ್ಲಿ ಚರ್ಚಿಸುವುದನ್ನು ಹತ್ತಿರದಿಂದ ಗಮನಿಸಿದ್ದ ನನ್ನ ಮಗ ನನ್ನ ತಾಕಲಾಟವನ್ನು ಅರ್ಥಮಾಡಿಕೊಂಡವನಂತೆ ಕನ್ನಡ ಮಾಧ್ಯಮವೇ ಇರಲಿ ಎಂಬ ತಿರ್ಮಾನಕ್ಕೆ ಬಂದಿದ್ದ.

ಇದು ಇಷ್ಟಕ್ಕೆ ನಿಲ್ಲಲಿಲ್ಲ. ಕಳೆದ ವರ್ಷ ಹೆಗ್ಗೋಡಿನ ಯುವ ನಾಯಕರೊಬ್ಬರು ಆರನೇ ತರಗತಿಯಿಂದ ಮಾತ್ರ ಇಂಗ್ಲೀಷ್ ಮಾಧ್ಯಮ ಸಾಲದು; ಒಂದನೇ ತರಗತಿಯಿಂದಲೇ ಬೇಕು ಎಂದು ಶಿಕ್ಷಣಾಧಿಕಾರಿಗಳ ಮೇಲೆ ಒತ್ತಡ ಹೇರಿ ಪರವಾನಿಗೆ ತರುವಲ್ಲಿ ಯಶಸ್ವಿಯಾದರು. ಅವರ ವಾದವೇನೆಂದರೆ, ಸರ್ಕಾರ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ನಡೆಸಲು ಖಾಸಗಿ ಶಾಲೆಗಳಿಗೆ ಅನುಮತಿ ಕೊಟ್ಟಿದೆ; ಅನುಕೂಲಸ್ಥರು, ಮೇಲ್ವರ್ಗದವರು ತಮ್ಮ ಮಕ್ಕಳನ್ನು ಅಲ್ಲಿ ಓದಿಸುತ್ತಾರೆ. ಸರ್ಕಾರಿ ಶಾಲೆಗಳ ಬಡವರ ಮಕ್ಕಳು ಮಾತ್ರ ಯಾಕೆ ಕಡ್ಡಾಯವಾಗಿ ಕನ್ನಡದಲ್ಲಿ ಓದಬೇಕು ಎಂಬುದು. ಅನಂತಮೂರ್ತಿಯವರ 'ಇಂಗ್ಲೀಷ್ ಬ್ರಾಹ್ಮಣ, ಕನ್ನಡ ಶೂದ್ರ' ಲೇಖನ ನನಗೆ ನೆನಪಾಯಿತು. ಆಧುನಿಕ ಸಂದರ್ಭದಲ್ಲಿ ಇಂಗ್ಲೀಷ್ ಕಲಿತವರು ಬ್ರಾಹ್ಮಣರೆನಿಸಿಕೊಂಡು ಎಲ್ಲಾ ಗೌರವ ಅವಕಾಶಗಳನ್ನು ಬಾಚಿಕೊಳ್ಳುತ್ತಾರೆ. ಕನ್ನಡ ಮಾತ್ರ ಕಲಿತವರು ಅವಕಾಶವಂಚಿತರಾಗಿ ಶೂದ್ರರಾಗುತ್ತಾರೆ. ಆದರೆ ಕೊನೆಗೂ ಕನ್ನಡ ಭಾಷೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವವರು ಈ ಅವಕಾಶ ವಂಚಿತರೆ. ಆದರೆ ನಗರದವರಿಗೆ ಬೇಡವಾದ ಕನ್ನಡ ಸಂಸ್ಕೃತಿಯ ಹೊಣೆಗಾರಿಕೆಯನ್ನು; ಹಳ್ಳಿಗರೇ ಏಕೆ ಹೊರಬೇಕು ಎಂಬುದು ಎಲ್ಲರಿಗೂ ಅನ್ವಯಿಸುವ ಪ್ರಶ್ನೆ.


ಇತ್ತ ಹೆಗ್ಗೋಡಿನ ಶಾಲೆಯಲ್ಲಿ ಒಂದನೇ ತರಗತಿಯಿಂದ ಇಂಗ್ಲೀಷ್ ಮಾಧ್ಯಮಕ್ಕೆ ಅನುಮತಿ ಸಿಕ್ಕಿದ್ದೇ ತಡ ಎಲ್ಲರೂ ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮಕ್ಕೆ ಸೇರಿಸತೊಡಗಿದರು. ಕನ್ನಡ ಮಾಧ್ಯಮದಲ್ಲಿ ಇಬ್ಬರೋ, ಮುವ್ವರೋ ಬಡಪಾಯಿಗಳು ಮಾತ್ರ ಉಳಿದರು. ಆ ಮೂವರಿಗಾಗಿ ಪ್ರತ್ಯೇಕ ತರಗತಿ ಯಾಕೆ ಎಂದು ಅವರನ್ನೂ ಇಂಗ್ಲೀಷ್ ಮಾಧ್ಯಮಕ್ಕೆ ಸೇರಿಸಿಕೊಂಡು ಕನ್ನಡ ಮಾಧ್ಯಮದ ಬಾಗಿಲು ಮುಚ್ಚಿದರು. ಮುಂದಿನ ವರ್ಷಗಳಲ್ಲಿ ನಿಸ್ಸಂಶಯವಾಗಿ ಇದೇ ಪುನರಾವರ್ತನೆಯಾಗುವುದರಿಂದ ಅಲ್ಲಿಗೆ ಹೆಗ್ಗೋಡಿನ ಕನ್ನಡ ಶಾಲೆಗೆ ಶಾಶ್ವತ ಬೀಗಮುದ್ರೆಯೇ ಎನ್ನುವಂತಾಯಿತು.

ಈ ವೈಪರೀತ್ಯಕ್ಕೆ ಇಂಗ್ಲೀಷ್ ಮೋಹದ ಪೋಷಕರು ಹೊಣೆಗಾರರೆ ಹೊರತು ಮುಗ್ಧ ಮಕ್ಕಳಲ್ಲ. ಕನ್ನಡ ಭಾಷಾ ಮಾಧ್ಯಮದ ಪರವಾಗಿ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳದ ಎಡಬಿಡಂಗಿ ಸರಕಾರಗಳ ದೆಸೆಯಿಂದ ಕನ್ನಡ ಶಾಲೆಗಳು ಇವತ್ತು ಇಂಗ್ಲೀಷ್ ತೋಳ ನುಗ್ಗಿದ ಕುರಿಹಟ್ಟಿಯಂತಾಗಿವೆ. ವಿಚಿತ್ರವೆಂದರೆ ಹೆಗ್ಗೋಡಿನಲ್ಲಿರುವ 'ವಿದ್ಯಾಭಿವೃದ್ಧಿ ಪ್ರೌಢಶಾಲೆ' ಖಾಸಗಿ ಸಂಸ್ಥೆಯದ್ದಾದರೂ ಅಲ್ಲಿ ಇಂಗ್ಲೀಷ ಮಾಧ್ಯಮವಿಲ್ಲ. ಕನ್ನಡ ಮಾಧ್ಯಮದ ತರಗತಿಗಳನ್ನು ತಾಲ್ಲೂಕು ಮಟ್ಟದ ಶಾಲೆಗಳಿಗಿಂತ ಚೆನ್ನಾಗಿ ನಡೆಸುತ್ತಿದೆ. ನನ್ನ ಮಗ ಈಗ ಒಂಭತ್ತನೇ ತರಗತಿಯನ್ನು ಅಲ್ಲೇ ಓದುತ್ತಿದ್ದಾನೆ. ಈ ಬಗ್ಗೆ ನನಗಾಗಲೀ, ಅವನಿಗಾಗಲೀ ಯಾವ ಚಿಂತೆಯೂ ಇಲ್ಲ.



–ಎನ್.ಎಂ. ಕುಲಕರ್ಣಿ, ವಸ್ತ್ರ ವಿನ್ಯಾಸಕರು, ಮಾರಾಟಗಾರರು ಮತ್ತು ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಟ್ರಸ್ಟೀ, ಹೆಗ್ಗೋಡು.

ಪ್ಲಾಸ್ಟಿಕ್ ವಿರುದ್ಧ ಸರ್ಕಾರಿ ಶಾಲೆಯೊಂದರ ವಿಶೇಷ ಅಭಿಯಾನ



ಪ್ಲಾಸ್ಟಿಕ್ ವಿರೋಧಿ ಅಭಿಯಾನದ ರೂವಾರಿ ಶಿಕ್ಷಕ ಸಂತೋಷ್ ಗುಡ್ಡೆಯಂಗಡಿ

ಕೈಗಾರಿಕಾ ಕ್ರಾಂತಿಯ ನಂತರ ಏರಿಕೆಯಾಗಲು ಶುರುವಾದ ಭೂಮಿಯ ತಾಪಮಾನ ತನ್ನ ಮಿತಿಯನ್ನು ದಾಟಿ ಮುನ್ನುಗ್ಗುತ್ತಿದೆ. ಸಮುದ್ರದಿಂದ ಉತ್ಪತ್ತಿಯಾಗುವ ಆಮ್ಲಜನಕ, ಮರಗಳಿಂದ ಉತ್ಪತ್ತಿಯಾಗುವ ಆಮ್ಲಜನಕಕ್ಕಿಂತಲೂ ಹೆಚ್ಚಿನ ಪ್ರಮಾಣದ್ದು. ಭೂಮಿ ತಾಪಮಾನದ ಮಿತಿ ಮೀರಿದ ಏರಿಕೆಯು ಮೊದಲಿಗೆ ಸಮುದ್ರವು ಬಿಸಿಯಾಗುವುದರ ಮೂಲಕವೆ ತೋರ್ಪಡಿಸಿಕೊಳ್ಳುತ್ತದೆ. ಸುನಾಮಿ, ಅಕಾಲಿಕ ಮತ್ತು ಹುಚ್ಚು ಮಳೆ, ಪ್ರವಾಹ ಇವೆಲ್ಲ ತಾಪಮಾನಕ್ಕೆ ಭೂಮಿ ತೋರುತ್ತಿರುವ ಪ್ರತಿಕ್ರಿಯೆಗಳು.

ಇನ್ನು ಸಮುದ್ರವು ನಾಗರೀಕತೆಯ ಕಸದ ತೊಟ್ಟಿಯಂತೆ ಪ್ಲಾಸ್ಟಿಕ್‌ನ ಆಗರವಾಗಿದೆ. ಹಾಗಾಗಿ ಸಮುದ್ರದ ಎಲ್ಲಾ ಜೀವಿಗಳ ಒಡಲಲ್ಲೂ ಈಗ ಸಣ್ಣ ಪ್ರಮಾಣದಲ್ಲಿ ಪ್ಲಾಸ್ಟಿಕ್‌ನ ಅಂಶ ಸೇರಿಕೊಂಡಿದೆ. ದಡಕ್ಕೆ ಬಂದು ಸತ್ತ ಸಮುದ್ರದ ಜೀವಿಗಳ ಹೊಟ್ಟೆ ಬಗೆದರೆ ಪ್ಲಾಸ್ಟಿಕ್‌ನ ರಾಶಿಯೆ ಗೋಚರಿಸುತ್ತಿದೆ. ಸಮುದ್ರ ಮಿತಿ ಮೀರಿ ಬಿಸಿಯಾಗುತ್ತಿರುವುದಕ್ಕೇ ಈ ಪ್ಲಾಸ್ಟಿಕ್ ಹಾವಳಿಯೂ ಒಂದು ಕಾರಣವಾಗಿದೆ. ಜಾಗತಿಕವಾಗಿ ಸರ್ಕಾರಗಳು ಭೂಮಿಯ ತಾಪಮಾನವನ್ನು ಗಂಭೀರವಾಗಿ ತೆಗೆದುಕೊಂಡರೂ ಕ್ರಿಯೆಯಲ್ಲಿ ಅದು ಬಹಳ ಹಿಂದುಳಿದಿದೆ. ಸಮುದ್ರದ ಪ್ಲಾಸ್ಟಿಕ್ ಹೊರಹಾಕಲು ಜಾಗತಿಕ ಸರ್ಕಾರಗಳು ಕ್ರಿಯಾಶೀಲರಾಗಲು ಗಂಭೀರವಾಗಿ ಆಲೋಚಿಸುತ್ತಿಲ್ಲ. ಇನ್ನೂ ಎಷ್ಟು ಜಾಗತಿಕ ಸಮಾವೇಶಗಳನ್ನು ಮಾಡಿ ಅರ್ಥಮಾಡಿಕೊಳ್ಳಬೇಕೊ ತಿಳಿಯದಾಗಿದೆ. ಹಾಗಾಗಿ ಗ್ರೇಟಾ ಥನ್‌ಬರ್ಗ್‌ಗಳಂತಹ ಪರಿಸರ ಹೋರಾಟಗಾರ್ತಿ ಜಾಗತಿಕ ಸಮಾವೇಶಗಳಲ್ಲಿ ಆಡುವ ಮಾತುಗಳೆಲ್ಲ ಕೇಳುವ ಸುಖದ ವಸ್ತುಗಳಾಗುತ್ತಿವೆಯೇ ಹೊರತು ಯಾರೂ ಪ್ರಾಮಾಣಿಕವಾಗಿ ಭೂಮಿಗೆ ಬಂದೆರಗಿರುವ ಆಪತ್ತಿಗೆ ಪರಿಹಾರ ಕಂಡುಕೊಳ್ಳಲು ಕ್ರಿಯಾಶೀಲರಾಗುತ್ತಿಲ್ಲ ಎಂದು ಹೇಳಿರುವುದು.

ಅಂದರೆ ಭೂಮಿ ನಾಶವಾದರೆ ಮಂಗಳ ಗ್ರಹಕ್ಕೆ ಓಡಿಹೋಗಬೇಕೆಂದಿರುವವರು ಸರ್ಕಾರಗಳನ್ನು ಹದ್ದುಬಸ್ತಿನಲ್ಲಿ ಇಟ್ಟಿದ್ದಾರೆಯೇ? ಹೀಗೆ ಅನುಮಾನಿಸಲು ಕಾರಣ ಜಗತ್ತಿನ ಅತಿ ಶ್ರೀಮಂತರಲ್ಲಿ ಒಬ್ಬರಾದ ಅಮೇಜಾನ್‌ನ ಮಾಲೀಕರು ಇತ್ತೀಚೆಗೆ ತಮ್ಮ ರಾಕೆಟ್‌ನಲ್ಲಿ ಸ್ಪೇಸ್ ಸ್ಟೇಷನ್‌ಗೆ ಜಾಲಿ ರೈಡ್ ಹೋಗಿಬಂದಿದ್ದಾರೆ. ಇವರು ಪಲಾಯನಕ್ಕೆ ರೆಡಿ ಇದ್ದಾರೆ.

ಹಾಗಾಗಿ ಈಗ ನಮಗೆ ಆಶಾದಾಯಕವಾಗಿರುವ ಒಂದಷ್ಟು ವಿಷಯಗಳು ಅಲ್ಲಲ್ಲಿ ನಾಗರೀಕರಿಂದ ಕಾಣಸಿಗುತ್ತವೆ. ಈಗ ಸದ್ಯಕ್ಕೆ ಇಂಥ ಸಣ್ಣ ಪ್ರಯತ್ನಗಳೆ ನಮ್ಮನ್ನು ಕಾಪಾಡುತ್ತಿರುವುದು. ಇಂಥ ಪ್ರಯತ್ನಗಳ ಮೂಲಕ ಸಣ್ಣ ಭರವಸೆ ನಮಗೆ ಉಳಿದಿದೆ. ನಂಜನಗೂಡಿನ ಹೆಗ್ಗಡಹಳ್ಳಿಯ ವಿಶೇಷ ಶಿಕ್ಷಕರಾದ ಸಂತೋಷ್ ಗುಡ್ಡೆಯಂಗಡಿಯವರು ಪ್ಲಾಸ್ಟಿಕ್ ವಿರುದ್ಧ ನಡೆಸಿರುವ ಅಭಿಯಾನ ಸಣ್ಣದಾದರೂ ಮಹತ್ವದ್ದಾಗಿದೆ. ಹೆಗ್ಗಡಹಳ್ಳಿ ಗ್ರಾಮದ ಪೌಢಶಾಲಾ ಮಕ್ಕಳಿಂದ ಈ ಅಭಿಯಾನ ೨೦೧೯ರಿಂದ ನಡೆಯುತ್ತಿದೆ. ಅವರು ಪ್ಲಾಸ್ಟಿಕ್ ಉತ್ಪಾದಿಸುವ ಕಂಪನಿಗಳಿಗೆ 'ನಿಮ್ಮ ಕಸ ನಿಮಗೆ' ಎಂಬ ಅಭಿಯಾನದ ಮೂಲಕ ಪ್ಲಾಸ್ಟಿಕ್ ಕಸವನ್ನು ಮಕ್ಕಳ ಮೂಲಕ ಆಯಾ ಕಂಪನಿಗೆ ಕಳಿಸುತ್ತಿದ್ದಾರೆ. 'ಮನೆಯ ಪ್ಲಾಸ್ಟಿಕ್ ಕಸವನ್ನು ಕಂಪನಿಗೆ ಕಳುಸುತ್ತೇವೆ' ಎನ್ನುವ ಪೋಷಕರಿಂದ, ಗ್ರಾಮ ಮಟ್ಟದಲ್ಲಿ ಕಡೆಗೆ ಹೊರಗಡೆಯೂ ಸುದ್ದಿಯಾಗಿ ಈ ಶಾಲೆಯ ಮಕ್ಕಳ ಕಾರ್ಯಕ್ಕೆ ಎಲ್ಲೆಡೆಯಿಂದ ಮೆಚ್ಚುಗೆ ವ್ಯಕ್ತವಾಗಿದೆ.

ಸಂತೋಷ್ ಹೆಗ್ಗೋಡಿನ 'ನೀನಾಸಂ'ನಲ್ಲಿ ರಂಗ ಶಿಕ್ಷಣ ಮುಗಿಸಿ ವಿಶೇಷ ಶಿಕ್ಷಕರಾಗಿ ಸರ್ಕಾರಿ ನೌಕರಿಗೆ ಬಂದವರು. ಇವರು ಮೂಲತಃ ದಕ್ಷಿಣಕನ್ನಡದ ಕುಂದಾಪುರ ತಾಲ್ಲೂಕಿನ ಗುಡ್ಡೆಯಂಗಡಿಯವರು. ಮನೆಯ ಸುತ್ತಳತೆಯಲ್ಲೆ ನದಿ, ಸಮುದ್ರವನ್ನು ಕಂಡವರು. ಗುಡ್ಡೆಯಂಗಡಿಯ ನಮ್ಮ 'ಭೂಮಿ' ಸಂಸ್ಥೆಯ ಮೂಲಕ ಬೀದಿನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಇದು ಮಕ್ಕಳ ಹಕ್ಕುಗಳ ಬಗ್ಗೆ ದುಡಿಯುತ್ತಿರುವ ಸಂಸ್ಥೆಯಾಗಿದ್ದು, ಬೀದಿ ನಾಟಕಗಳ ಮೂಲಕ ಮೂಡಿಸುವ ಜಾಗೃತಿ ಇವರಲ್ಲಿ ರಂಗಭೂಮಿಯ ಕುರಿತು ಆಕರ್ಷಿಸುವಂತೆ ಮಾಡಿತ್ತು. ರಂಗಭೂಮಿಯ ಆಸಕ್ತಿ ಹಾಡು, ಚಿತ್ರಕಲೆಯ ಮೂಲಕ ಸಾಗಿ ನೀನಾಸಂನವರೆಗೆ ಇವರನ್ನು ತಲುಪಿಸಿತು. ನೀನಾಸಂನ ಸಾಹಿತ್ಯ, ನಾಟಕದ ವಾತಾವರಣ ಪರಿಸರವನ್ನು ನೋಡುವ ನೋಟವನ್ನು ಬದಲಾಯಿಸಿತು.

ಸಂತೋಷ್ ವಿಶೇಷ ಶಿಕ್ಷಕರ ವೃಂದದ ಅಡಿಯಲ್ಲಿ ರಂಗಶಿಕ್ಷಕರಾಗಿ ಸರ್ಕಾರಿ ಕೆಲಸಕ್ಕೆ ಸೇರಿದಾಗ ಜಾತಿ ತಾರತಮ್ಯದ ಕಾರಣಕ್ಕೆ ಬಾಡಿಗೆ ಮನೆ ಸಿಗದೆ ಪರದಾಡುವಂತಾಗುತ್ತದೆ. ಈ ತಾರತಮ್ಯ ಅವರು ಬೆಳೆದ ಊರಿಗಿಂತಲೂ ಕೆಲಸಕ್ಕೆ ಸೇರಿದ ಊರಲ್ಲಿ ಅನುಭವಕ್ಕೆ ಬಂದು, ಇದು ಸುತ್ತಲಿನ ಸಮಾಜ, ಪರಿಸರವನ್ನು ಕುರಿತು ಆಳವಾಗಿ ಧೇನಿಸಲು ಪ್ರೇರಣೆ ಒದಗಿಸುತ್ತದೆ. ಕಥೆ ಬರೆಯಲು ತೊಡಗುತ್ತಾರೆ. ನಂತರ ಪ್ರೇಮ ವಿವಾಹವಾಗಿ ಮಗು 'ಬೆಳಕು' ಹುಟ್ಟಿದ ಮೇಲೆ ಈ ಪರಿಸರದಿಂದ ಶುದ್ಧನೀರು, ಶುದ್ಧ ಗಾಳಿಯೂ ನೀಡಲಾಗದ ನಾವು ನಮ್ಮ ಮಕ್ಕಳಿಗೆ ಏನನ್ನು ಬಿಟ್ಟುಹೋಗುತ್ತಿದ್ದೇವೆ ಎಂಬ ಪ್ರಶ್ನೆ ಜಾಗೃತವಾಗುತ್ತದೆ. ಇದು ವಿಸ್ತರಿಸಿ ಅವರ ಶಾಲೆಯ ಮಕ್ಕಳಲ್ಲೂ ಪರಿಸರ ಜಾಗೃತಿಯ ನಾಟಕ, ಸಿನಿಮಾ, ತೇಜಸ್ವಿಯವರ ಕಥೆಗಳ ಓದು ಆರಂಭವಾಗಿ 'ನಿಮ್ಮ ಕಸ ನಿಮಗೆ' ಅಭಿಯಾನ ಉದಯವಾಗುತ್ತದೆ. ಇದಕ್ಕೆ ಶಾಲೆಯ ಸಿಬ್ಬಂದಿಯ ಪ್ರೋತ್ಸಾಹವು ಜೊತೆಯಾಗುತ್ತದೆ. ಮುಖ್ಯವಾಗಿ ಇಲ್ಲಿನ ಮುಖ್ಯೋಪಾಧ್ಯಾಯರಾದ ಲಿಂಗರಾಜುರವರು ಸಂತೋಷ ಗುಡ್ಡೆಯಂಗಡಿಯವರ ಒಂಭತ್ತು ವರ್ಷಗಳ ಸೇವೆಯಲ್ಲಿ ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರು ಹೇಳುವ ಪ್ರಕಾರ, ಜಿಲ್ಲಾ ಪಂಚಾಯತ್ ಈ ಕಾರ್ಯಕ್ರಮವನ್ನು ಮೆಚ್ಚಿ ತಾಲ್ಲೂಕಿನಾದ್ಯಂತ ಇದನ್ನು ವಿಸ್ತರಿಸುವಂತೆ ಶಿಕ್ಷಣ ಅಧಿಕಾರಿಗಳ ಮೂಲಕ ಪತ್ರ ಕಳುಹಿಸಿದ್ದಾರೆ. ಇದು ಶಾಲೆಗೆ ಹೆಮ್ಮೆ ತರುವ ವಿಚಾರವಾಗಿದ್ದು, ಬೇರೆ ಶಾಲೆಗಳು ಇದನ್ನು ಸ್ಫೂರ್ತಿಯಾಗಿ ಸ್ವೀಕರಿಸಿ ಈ ಅಭಿಯಾನ ಪ್ರಾರಂಭಿಸಲಿ ಎಂಬುದು ಅವರ ಆಶಯವಾಗಿದೆ. ಇನ್ನು ಈ ಅಭಿಯಾನ ಆರಂಭವಾದಾಗ ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ವಿದ್ಯಾರ್ಥಿನಿ ಶ್ವೇತಾ ಪ್ರಕಾರ ಹಾಡು, ಚಿತ್ರ, ನಾಟಕ, ಸಿನಿಮಾಗಳ ಪರಿಚಯದೊಂದಿಗೆ ಆರಂಭವಾದ ಈ ಅಭಿಯಾನ ಒಂದು ವಿಶಿಷ್ಟ ಅನುಭವ. ಪೋಷಕರು, ಗ್ರಾಮ ಪಂಚಾಯ್ತಿ ಮತ್ತು ಅರಣ್ಯ ಇಲಾಖೆಗಳ ಒಮ್ಮತದೊಂದಿಗೆ ನಡೆದ ಈ ಅಭಿಯಾನ ತಮ್ಮ ನೆರೆಹೊರೆಯಲ್ಲಿ ಹೊಸ ಪರಿಸರ ಜಾಗೃತಿ ಮೂಡಿತೆಂದು ನೆನಪಿಸಿಕೊಳ್ಳುತ್ತಾರೆ.

ಈ ಅಭಿಯಾನದ ಬಗ್ಗೆ ಸಂತೋಷರನ್ನು ಮಾತಾಡಿಸಿದಾಗ–

೧. ಶಾಲಾ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡಿಸಿದ್ದು ಹೇಗೆ?

ಹೆಮ್ಮರಗಾಲದಲ್ಲಿದ್ದಾಗ ನಮ್ಮ ಧರಣಿ, ಕಾಮನ ಬಿಲ್ಲಿನ ಸೈನಿಕರು ನಾಟಕ ಮಾಡಿಸಿದ್ದೆ. ಹೆಗ್ಗಡಹಳ್ಳಿಗೆ ಬಂದ ನಂತರ ಕಾರ್ಬನ್ ಲೋಕ, ಜಟ್ರೋಪ ಎಂಬ ವರ, ಪ್ಲಾಸ್ಟಿಕ್ ಭೂತ, ಭೂಮಿಗೆ ಜ್ವರ ಬಂದಿದೆ, ಮಾಯಾದ ಡಬ್ಬಿ, ಹಲಗಲಿಯ ಬೇಡರು, ಮಂಟೇಸ್ವಾಮಿ ಕಥಾ ಪ್ರಸಂಗ ನಾಟಕಗಳನ್ನು ಮಾಡಿಸಿ ಪರಿಸರ ಮತ್ತು ಕಲೆಯ ರುಚಿ ಹತ್ತಿಸಿದೆ.

೨. ಕಂಪನಿಗಳ ಪ್ಲಾಸ್ಟಿಕ್ ಅದೇ ಕಂಪನಿಗೆ ಪೋಸ್ಟ್ ಮಾಡುವ ಚಳವಳಿಯ ಬಗ್ಗೆ ತಿಳಿಸಿ.

ಮೊದಲಿಗೆ ಮಕ್ಕಳಿಗೆ ಊರಲ್ಲಿರುವ, ಅವರ ಮನೆಯಲ್ಲಿನ ಪ್ಲಾಸ್ಟಿಕ್ ಸಂಗ್ರಹಿಸಲು ತಿಳಿಸಲಾಯಿತು. ಕಸ ಸಾಕಷ್ಟು ಒಟ್ಟುಗೂಡೋದು. ಅದನ್ನು ಎಲ್ಲಾ ಮಕ್ಕಳ ಸಹಿಯೊಂದಿಗೆ ನಿಮ್ಮ ಕಸ ನಿಮಗೆ ಎಂಬ ಅಭಿಯಾನದೊಂದಿಗೆ ಪ್ರಾರಂಭಿಸಿದೆವು.

೩. ಕಂಪನಿಗಳ ಕಡೆಯಿಂದ ಯಾವ ರೀತಿಯ ಪ್ರತಿಕ್ರಿಯೆ ಬಂತು?

ನೆಸ್ಲೆ, ಕೊಲ್ಗೆಟ್, ಯೂನಿಕಾನ್ ಕಂಪನಿ ಪ್ರತಿಕ್ರಿಯಿಸಿದವು. ನೆಸ್ಲೆ, ಯೂನಿಕಾನ್ ತಮ್ಮ ಉತ್ಪನ್ನಗಳನ್ನು ಪ್ಲಾಸ್ಟಿಕ್ ಮುಕ್ತ ಮಾಡುವ ಪ್ರಯತ್ನದಲ್ಲಿದ್ದೇವೆ ಎಂದರೆ, ಕೊಲ್ಗೆಟ್ ೨೦೨೫ ರಲ್ಲಿ ಪ್ಲಾಸ್ಟಿಕ್ ಮುಕ್ತ ಮಾಡುವುದಾಗಿ ಪ್ರತಿಕ್ರಿಯೆ ನೀಡಿದ್ದರು.


೪. ಈ ನಿಮ್ಮ ಅಭಿಯಾನ ಯಾರಿಗಾದರೂ ಪ್ರೇರಣೆಯಾಗಿದೆಯೇ?

ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮೂಲಕ ನಮ್ಮ ಅಭಿಯಾನವನ್ನು ಪ್ರದರ್ಶಿಸಲಾಗಿತ್ತು. ಶಾಲೆಗೆ ನೆನಪಿನ ಕಾಣಿಕೆಯನ್ನು ಕೊಟ್ಟಿದ್ದರು. ರಾಯಚೂರಿನ ಶಾಲೆಯೊಂದು ತಾವು ಈ ಅಭಿಯಾನ ಪ್ರಾರಂಭಿಸುವುದಾಗಿ ಹೇಳಿದ್ದರು.

೫. ಮಕ್ಕಳಿಗೆ ಪರಿಸರದ ಬಗ್ಗೆ ಅರಿವು ಮೂಡಿಸುವ ಬೇರೆ ಕಾರ್ಯಗಳೇನಾದರು ಹಮ್ಮಿಕೊಂಡಿದ್ದೀರಾ?

ಮಕ್ಕಳಿಗೆ ಭೂಮಿ, ಅದರ ಪರಿಸರ ಇತ್ಯಾದಿಗಳ ಕಲ್ಪನೆಯೇ ಇಲ್ಲ. ಸೌರಮಂಡಲ, ಭೂಮಿ, ಪ್ರಾಣಿ ಪಕ್ಷಿಗಳ ಕುರಿತು ಸಿನಿಮಾ, ಸಾಕ್ಷಚಿತ್ರ ತೋರಿಸ್ತೀನಿ. ಶಾಲೆಯಲ್ಲೆ ಪ್ರೊಜೆಕ್ಟರ್ ಇರುವುದರಿಂದ ನಮಗೆ ತುಂಬಾ ಅನುಕೂಲವಾಗಿದೆ. ಇತ್ತೀಚೆಗೆ ಗಾಂಧಿ ಸಿನಿಮಾ ನಿರ್ದೇಶಕರಾದ ಆಟನ್ ಬರೋ ಅವರ ಪರಿಸರ ಸಂಬಂಧದ ಸಾಕ್ಷಚಿತ್ರವನ್ನು ತೋರ್ಸಿದೀವಿ. ತೇಜಸ್ವಿ ಕಥೆಗಳನ್ನು ಓದಿಸ್ತೀವಿ. ಪರಿಸರಕ್ಕೆ ಸಂಬಂಧಪಟ್ಟ ನಾಟಕ ಆಡಿಸ್ತೀವಿ.

ಸಣ್ಣ ಊರೊಂದರಲ್ಲಿ ನಡೆದಿರುವ ಈ ಪ್ಲಾಸ್ಟಿಕ್ ವಿರೋಧಿ ಸಣ್ಣ ಪ್ರಯತ್ನ ನಾಡಿಗೇ ಸ್ಫೂರ್ತಿಯಾದರೆ ಸಂತೋಷರ ಈ ಪ್ರಯತ್ನ ಸಾರ್ಥಕವಾದೀತು.



–ಅಪೂರ್ವ ಡಿಸಿಲ್ವ, ಯುವ ಸಮಾಜವಾದಿ, ಕಿರುತೆರೆ ಸಾಹಿತಿ ಮತ್ತು ಯುವ ರಂಗಕರ್ಮಿ ಮೈಸೂರು.

ಕಥೆ

ಬಳಿ ಬಂದರು

–ಮಹಾಂತೇಶ ಓಶಿಮಠ



ಚಿತ್ರ : ಗುಜ್ಜಾರ್

‘ಬೇಂದ್ರೆ’ ಸಿಟಿ ಬಸ್ಸು, ಗುರ್ರ್... ಗುರ್ರ್ ಅನ್ನುತ್ತಾ ಹುಬ್ಬಳ್ಳಿ ರೇಲ್ವೆ ನಿಲ್ದಾಣದ ಅನತಿದೂರದಲ್ಲಿ, ಸಂವಿಧಾನದ ಪ್ರತಿ ಹಿಡಿದ ಅಂಬೇಡ್ಕರರ ಪ್ರತಿಮೆಯ ಪಕ್ಕದಲ್ಲಿ ಗಟ್ಟಿಯಾಗಿ ಹಾರ್ನಹಾಕಿ ನಿಂತಿತು. ಬಸ್ಸಿನಿಂದಿಳಿದ ಭಾರತಿ, ತೇಜಸ್ ಹಾಗೂ ಸುಹಾಸ ದುಡುದುಡು ನಿಲ್ದಾಣದೆಡೆಗೆ ಧಾವಿಸಿದರು. ಸ್ಟೇಶನ್ನಿನ ಮೆಟ್ಟಿಲುಗಳು ಸಮೀಪಿಸುತ್ತಿದ್ದಂತೆ ಸುಹಾಸ ಉಳಿದಿಬ್ಬರನ್ನು ಮತ್ತಷ್ಟು ಜೋರಾಗಿ ನಡೆಯಲು ಆಗ್ರಹಿಸುತ್ತಾ ಮುಂದೆ ಸಾಗಿ ಗಡಿಯಾರ ನೋಡಿದ. ಇನ್ನೇನು ‘ಅಮರಾವತಿ’ ಎಕ್ಸ್‌ಪ್ರೆಸ್ ಹೊರಡಲು ಬರಿ ಐದು ನಿಮಿಷಗಳು ಬಾಕಿಯಿವೆ! ಅದೃಷ್ಟಕ್ಕೆ ಟ್ರೇನ್ ಮೊದಲನೆಯ ಪ್ಲಾಟಫಾರ್ಮನಲ್ಲೇ ನಿಂತಿತ್ತು. ಬೋಗಿಯೆನ್ನೇರಿ ಸೀಟುಗಳ ಕೆಳಗೆ ಲಗೇಜಗಳನ್ನು ತುರುಕಿ ಆಸೀನರಾದ ಭಾರತಿ ಹಾಗೂ ತೇಜಸ್‌ರನ್ನು ಬೀಳ್ಕೊಡಲು ಕೆಳಗಿಳಿದ ಸುಹಾಸ.

“ಭಾರತಿ, ಟಿಕೆಟ್ ಮತ್ತೊಂದ್ ಸರ್ತಿ ನೋಡು”

ಅವಳು ನೋಡಿ, “ನಾವ್ ಕುಂತಿದ್ದs ಬರೋಬ್ಬರಿ ಐತಿ ತೋಗೊ, ನೀ ಕಾಳಜಿ ಮಾಡಬ್ಯಾಡ್ ಲಘುನs ಕೆಲ್ಸಾ ಮುಗಸ್ಕೊಂಡ್ ಧಾರವಾಡಕ್ಕ ನಡಿ ನೀs” ಎಂದು ಉತ್ತರಿಸುವಷ್ಟರಲ್ಲಿ ಸೀಟಿ ಊದಿದ ಟ್ರೇನ್ ನಿಲ್ದಾಣವನ್ನು ಸಾವಕಾಶವಾಗಿ ಬಿಟ್ಟಿತು. ಓಡುತ್ತಾ ರೈಲನ್ನು ಹಿಂಬಾಲಿಸಿದ ಸುಹಾಸ “ಭಾರತೀ, ನ್ಯಾಷನಲ್ ಡ್ರಾಮಾ ಸ್ಕೂಲ್ ಅರ್ಜಿ ಬಗ್ಗೆನೂ ವಿಚಾರ ಮಾಡ್ ಮತ್ತ” ಎಂದು ಜೋರಾಗಿ ಕೂಗಿ ಕೈ ಬೀಸುತ್ತಿರುವಂತೆ ಟ್ರೇನ ಮುಂದೆ ಸಾಗಿತು, ಆತ ಕಿರಿದಾಗುತ್ತಾ ದೂರ ದೂರ ಸರಿದ.

ಭಾರತಿ ಮತ್ತು ತೇಜಸ್ ಇಬ್ಬರೂ ಕೆಳಗಿನ ಬರ್ತ್‌ಗಳಲ್ಲಿ ಎದುರುಬದುರಾಗಿ ಕುಳಿತಿದ್ದರು. ಇವರು ಹೊರಟಿದ್ದು ಪೂರ್ವ ಕರಾವಳಿಯ ಬಂದರು ಪಟ್ಟಣ ಕಾಕಿನಾಡನಲ್ಲಿರುವ ಅಚ್ಚುಮೆಚ್ಚಿನ ಗೆಳತಿ ಗೌರಿಯನ್ನು ಭೇಟಿಯಾಗುವುದಾಗಿತ್ತು. ಇಬ್ಬರೂ ಹತ್ತಿದ್ದ ಅಮರಾವತಿ ಎಕ್ಸ್‌ಪ್ರೆಸ್ ವಿಜಯವಾಡದವರೆಗೆ ಮಾತ್ರ ಹೋಗುತ್ತಿದ್ದರಿಂದ, ಅಲ್ಲಿಂದ ಮುಂದೆ ಬೇರೆಯ ಟ್ರೇನ್ ಹಿಡಿದು ಕಾಕಿನಾಡಕ್ಕೆ ತಲುಪಬೇಕಿತ್ತು. ಕಾಕಿನಾಡದಲ್ಲಿ ನೆಲೆಸಿರುವ ಗೌರಿ, ಅಲ್ಲಿಗೆ ಹೊರಟ ಭಾರತಿ ಹಾಗೂ ತೇಜಸ್; ನಿಲ್ದಾಣದವರೆಗೆ ಬಂದಿದ್ದ ಸುಹಾಸ ಇವರೆಲ್ಲರ, ಒಬ್ಬರಿಗೊಬ್ಬರ ಸಂಬಂಧಗಳು ಬಿಡಿಸಲಾಗದ, ಹಿಡಿಯಲಾಗದ ಸಂಕೀರ್ಣ ಪರಿಸ್ಥಿತಿಯಲ್ಲಿದ್ದವು.

ಹುಬ್ಬಳ್ಳಿಯನ್ನು ಬಿಟ್ಟು ಟ್ರೇನ್ ಮುನ್ನಡೆಯುತ್ತಿದ್ದಂತೆ ತೇಜಸ್ ಇಯರ್ ಪೋನ ಹಾಕಿಕೊಂಡು ಸಂಗೀತ ಆಲಿಸಹತ್ತಿದ. ಕಣ್ಣುಗಳು ಕಿಡಕಿಯ ಹೊರಗೆ ಚಾಚಿದ್ದರೂ, ಅವುಗಳಲ್ಲಿ ಏನನ್ನೂ ನೋಡುವ ತವಕವಿರಲಿಲ್ಲ. ಭಾರತಿ ವ್ಯಾನಿಟಿ ಬ್ಯಾಗಿನಿಂದ ಕಾರ್ನಾಡರ ನಾಟಕ ‘ರಾಕ್ಷಸ ತಂಗಡಿ’ ಹೊರತೆಗೆಯುತ್ತಿದಂತೆ “ಶೇಂಗಾs.. ಶೇಂಗಾರೀs... ಶೇಂಗಾs” ಎನ್ನುತ್ತಾ ಮುದುಕಿಯೊಬ್ಬಳು ಬುಟ್ಟಿ ಹಿಡಿದು ಬಂದಳು. ಎರಡು ಪುಡಕಿ ಕೊಂಡು ಒಂದನ್ನು ತೇಜಸನಿಗೆ ನೀಡಿ ನೆಲಗಡಲೆಗಳನ್ನು ತಿನ್ನುತ್ತಾ ನಾಟಕ ಓದತೊಡಗಿದಳು. ಮುಕ್ಕಾಲು ಘಂಟೆಯಲ್ಲಿ ಗದಗ ದಾಟಿದ ಟ್ರೇನ್ ವೇಗ ಹೆಚ್ಚಿಸಿಕೊಂಡು ಓಡತೊಡಗಿತು. ರೈಲುಬಂಡಿಯ ಗುಡು...ಗುಡು ಸದ್ದು ಹೆಚ್ಚಾದಂತೆ ಕಿಡಕಿಯಿಂದ ಒಳಸೂಸುವ ಗಾಳಿಯು

ನಾಲ್ಕು ವರುಷಗಳ ಹಿಂದೆ ಗೌರಿಯು ಪದವಿ ತರಗತಿಯ ಕೊನೆಯ ಸೆಮಿಸ್ಟರಿನ ಪರೀಕ್ಷೆಗಳನ್ನು ಮುಗಿಸಿ ಫಲಿತಾಂಶಕ್ಕಾಗಿ ಕಾಯುತ್ತಿದ್ದಾಗ, ಭಾರತಿ ಸ್ನಾತಕೋತ್ತರ ಪದವಿಯ ಎರಡನೆಯ ಸೆಮಿಸ್ಟರ್‌ನಲ್ಲಿ ಓದುತ್ತಿದ್ದಳು. ತೇಜಸ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ಸುಹಾಸ್ ತನ್ನಪ್ಪನ ಫಾರ್ಮಸಿಯಲ್ಲಿ ತಂದೆಗೆ ಸಹಾಯಕನಾಗುತ್ತಾನೆ. ಕ್ರಿಯಾರಂಗದ ಚಟುವಟಿಕೆಗಳು ಯಥಾವತ್ತಾಗಿ ನಡೆದಿತ್ತು. ಒಂದು ಮುಸ್ಸಂಜೆ ಏನಾಯಿತೆಂದರೆ, ಇವರೆಲ್ಲ ಮಾಮೂಲು ಸ್ಥಳದಲ್ಲಿ ಕೂಡಿದ್ದಾಗ ಗೌರಿ ಬಂದು ಭಾರತಿಯನ್ನು ಪಕ್ಕಕ್ಕೆ ಕರೆದು ಮನೆಯಲ್ಲಿ ತನ್ನ ಮದುವೆ ಗೊತ್ತು ಮಾಡಿದ್ದಾರೆಂದು ಕಣ್ಣೀರಿಡತೊಡಗಿದಳು. ಇದನ್ನು ಗಮನಿಸಿದ ತೇಜಸ್ ಹಾಗೂ ಸುಹಾಸ್ ಕೂಡ ಸಮೀಪಿದರು. ತೇಜಸನಿಗೆ ಈ ವಿಷಯ ಗೊತ್ತಿದೆಯಾ? ಅಂತ ಸುಹಾಸ ಮತ್ತು ಭಾರತಿ ಇಬ್ಬರೂ ಕೇಳಿದಾಗ ಗೌರಿ ಹೂಂ ಗುಟ್ಟಿದಳು. ನಾಲ್ವರಲ್ಲೂ ತುಸು ಹೊತ್ತು ಗಾಢ ಮೌನ ಆವರಿಸಿತು. ಮೌನ ಮುರಿದ ಭಾರತಿಯು ಮದುವೆ ಮುಹೂರ್ತವೆಂದು ಅಂತ ಕೇಳಿದಾಗ ಅವಳು ಮುಂದಿನ ವಾರವೇ ಅಂದಾಗ ಚಡಪಡಿಸಿ ತೇಜಸ್‌ನನ್ನು ಉದ್ದೇಶಿಸಿ ‘ನಡಿ ಗೌರಿಯ ಮನೆಗೆ’ ಎಂದು ಕರೆದಳು. ಬಡಪಾಯಿ ನಡುಗುತ್ತಿರುವ ಕಾಲುಗಳನ್ನು ತಹಬಂದಿಗೆ ತರಲಾಗದೆ ಪಕ್ಕದ ಮರವನ್ನು ಆಸರೆಗೆ ಆತುಕೊಂಡನು. ಮೂವರ ಕಣ್ಣುಗಳು ಭಾರತಿಯೆಡೆಗೆ ಭರವಸೆಯಿಂದ ನೋಡುತ್ತಿರುವಂತೆಯೇ ಏನನ್ನೂ ಮಾತನಾಡದ ಅವಳು, ಗೌರಿಯ ಮನೆಯತ್ತ ಒಬ್ಬಳೇ ಬಿರಬಿರನೆ ಸಾಗಿದಳು.

ವೇಗ ಪಡೆದು ಭಾರತಿಯ ಕಣ್ಣುಗಳನ್ನು ಮುಂಗುರುಳುಗಳು ಮುಚ್ಚತೊಡಗಿದವು. ಅವುಗಳನ್ನು ಸರಿಸುತ್ತಾ ಹೊರಗಡೆ ದೃಷ್ಟಿ ಬೀರಿದಾಗ, ಕಪ್ಪು ಮಣ್ಣಿನ ಹೊಲಗಳು ದೂರದೂರದವರೆಗೆ ವಿಶಾಲವಾಗಿ ಚಾಚಿ ನೆಲವೆಲ್ಲ ಕಪ್ಪುಸಮುದ್ರದಂತೆ ಕಾಣುತ್ತಿತ್ತು. ಅಲ್ಲಲ್ಲಿ ಹಿಂಗಾರು ಹಂಗಾಮಿನ ತಯಾರಿಯನ್ನು ರೈತರು ಮಾಡುತ್ತಿದ್ದರು. ಕೆಲವರು ಟ್ರ್ಯಾಕ್ಟರಗಳನ್ನು, ಮತ್ತೆ ಕೆಲವರು ಎತ್ತುಗಳನ್ನು ಹೂಡಿ ನೆಲವನ್ನು ಹರಗುತ್ತಿದ್ದರೆ, ಬಿತ್ತನೆಯ ಸಾಲುಗಳಡಿಯಿಂದ ಹೊರಬರುತ್ತಿದ್ದ ಕ್ರಿಮಿಕೀಟಗಳನ್ನು ಕಬಳಿಸಲು ಗೋವಕ್ಕಿಗಳು, ಕಾಜಾಣಗಳು ಹಾಗೂ ಗೊರವಂಕಗಳು ಅತ್ತಿಂದಿತ್ತ ಪಟಪಟನೆ ಹಾರಾಡುತ್ತಿದ್ದವು.

ಬಿಸಿಲಿನ ಜಳ ಕಡಿಮೆಯಿದ್ದದ್ದರಿಂದ ರಮಣೀಯ ವಾತಾವರಣದಲ್ಲಿ ರೈಲು ಓಡುತ್ತಿತ್ತು. ಹೊಲಗಳಿಂದ ಹೊರಸೂಸುತ್ತಿದ್ದ ಮಣ್ಣಿನ ಕಂಪನ್ನು ಸಂಪಿಗೆ ಪುಷ್ಪದಂತಹ ನಾಸಿಕದ ಹೊಳ್ಳೆಗಳನ್ನು ಹಿರಿದಾಗಿಸಿ ಭಾರತಿ ಆಸ್ವಾದಿಸುತ್ತಿದ್ದಳು. ಅದೇ ಘಳಿಗೆಯಲ್ಲಿ ಕೆಲ ಆಕೃತಿಗಳು ರೈಲಿನೊಂದಿಗೆ ಸಮಾನಾಂತರವಾಗಿ ಓಡುತ್ತಿರುವುದು ಕಾಣಿಸಿತು. ಮೇಕೆಗಳೋ, ಕುರಿಗಳೋ ಅಂತ ಏಣಿಕೆ ಹಾಕುವಷ್ಟರಲ್ಲೇ ಸಮೀಪಿಸಿ ಸ್ಪಷ್ಟವಾಗಿ ಕಂಡವು. ಮನಮೋಹಕ ಬಣ್ಣಗಳ ಹಾಗೂ ಆಕರ್ಷಕ ಕೊಂಬುಗಳಿರುವ ಕೃಷ್ಣಮೃಗಗಳಾಗಿದ್ದವು. ಕೈಯಲ್ಲಿರುವ ಪುಸ್ತಕವನ್ನು ಮುಚ್ಚಿ ಮೃಗಗಳ ನೆಗೆತಗಳನ್ನು ಅಚ್ಚರಿಗೊಂಡು ನೋಡುತ್ತಾ, “ತೇಜಸ್, ಚಿಗರಿ ನೋಡೋ ಎಷ್ಟ್ ಚಂದ ಅದಾವ ನೋಡೋ” ಎಂದು ಉತ್ಸಾಹದಿಂದ ಆತನ ತೊಡೆಯನ್ನು ತಟ್ಟಿ ತೋರಿಸಿದಳು. ಹೊರನೋಡಿದ ತೇಜಸ್ ತಿಳಿನಗುವನ್ನು ಮುಖದ ಮೇಲೆ ತಂದು ಮತ್ತೆ ಸಂಗೀತದಲ್ಲಿ ಲೀನನಾದ. ಆತನ ನಿರ್ಲಿಪ್ತ ಸ್ವಭಾವ ಅರಿತಿದ್ದ ಭಾರತಿಯು ಜಿಂಕೆ ದಂಡಿನ ಸೌಂದರ್ಯವನ್ನು ಅನುಭವಿಸುತ್ತಾ ಶಾಲಾ ಕಾಲೇಜಿನ ದಿನಗಳಿಗೆ ಜಾರಿದಳು.

*****

ಧಾರವಾಡದ ಕೆ.ಇ ಬೋರ್ಡ ಪ್ರೌಢಶಾಲೆಯಲ್ಲಿ ಕಲಿತ ಮೂವರ ಮನೆಗಳು ನಾರಾಯಣಪುರ ಹಾಗೂ ಚೆನ್ನಮ್ಮ ನಗರಗಳಲ್ಲಿದ್ದು, ಒಂದಕ್ಕೊಂದು ಅಷ್ಟೇನು ದೂರವಿರಲಿಲ್ಲ. ಆದರೆ, ತೇಜಸನ ಮನೆ ಹಳೆಧಾರವಾಡದ ಗುಲಗಂಜಿಕೊಪ್ಪದಲ್ಲಿತ್ತು. ಭಾರತಿ, ತೇಜಸ್ ಹಾಗೂ ಸುಹಾಸ ಹತ್ತನೆಯ ತರಗತಿಯಲ್ಲಿದ್ದಾಗ ಗೌರಿಯು ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಳು. ಇವರೆಲ್ಲರೂ ಸಂಗೀತ ಕಲಿಯುತ್ತಿದ್ದರು. ಗೌರಿ ಸಂಗೀತದ ಜೊತೆ ಭರತನಾಟ್ಯವನ್ನೂ ಅಭ್ಯಸಿಸುತ್ತಿದ್ದಳು. ತೇಜಸ್ ತಬಲಾ, ಸುಹಾಸ ವಾಯಲಿನ್ ಹಾಗೂ ಭಾರತಿಗೆ ಹಿಂದೂಸ್ಥಾನಿಯ ಕಡೆ ಒಲವಿತ್ತು. ಆಕಾಶವಾಣಿಯ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಕಿರುನಾಟಕಗಳಲ್ಲಿ ಭಾಗವಹಿಸುವ ಸದವಕಾಶ ಇವರಿಗೆ ದೊರಕಿತ್ತು. ಪಿಯುಸಿಯಲ್ಲಿ ಭಾರತಿ ಹಾಗೂ ತೇಜಸ್ ಕರ್ನಾಟಕ ಕಾಲೇಜಿನ ಕಲಾ ವಿಭಾಗ ಸೇರಿಕೊಂಡರೆ; ಸುಹಾಸ ವಿಜ್ಞಾನ ವಿಭಾಗವನ್ನು ಸೇರಿಕೊಂಡ. ವರುಷದ ಬಳಿಕ ಗೌರಿ ಕೂಡ ಇದೇ ಕಾಲೇಜಿನಲ್ಲಿ ಕಲಾ ವಿಭಾಗವನ್ನು ಆಯ್ದುಕೊಂಡಳು. ದಿನಗಳುರುಳಿದಂತೆ ಸಂಗೀತ, ನೃತ್ಯ ಹಾಗೂ ನಾಟಕಗಳ ಗೀಳು ಇವರಲ್ಲಿ ಆವರಿಸಿತು. ಸಮಾನಮನಸ್ಕ ಕಲಾವಿದರು ಸೇರಿ ‘ಕ್ರಿಯಾರಂಗ’ವೆನ್ನುವ ಹವ್ಯಾಸಿ ತಂಡ ಕಟ್ಟಿಕೊಂಡು ವಿವಿಧ ಚಟುವಟಿಕೆಗಳನ್ನು ಮಾಡುತ್ತಿದ್ದರು. ನೋಡು ನೋಡುತ್ತಿದ್ದಂತೆ ಸಾಂಸ್ಕೃತಿಕ ನಗರದ ವಿದ್ಯಾರ್ಥಿಗಳಲ್ಲಿ ಇವರೆಲ್ಲ ಹೆಸರುವಾಸಿಗಳಾದರು. ಅಂತರ ಕಾಲೇಜ್ ಸ್ಪರ್ಧೆಗಳಲ್ಲಿ ಪ್ರತಿಬಾರಿ ಜಯಿಸಿ ಮುಂದೆ ಅಂತರವಿಶ್ವವಿದ್ಯಾನಿಲಯಗಳ ಕೂಟಗಳಲ್ಲೂ ಪ್ರಶಸ್ತಿಗಳನ್ನು ಗೆದ್ದು ಬೀಗುತ್ತಿರುವ ಸಾಧನೆಯ ಉನ್ನತ ಹಂತದ ಅವಧಿಯಲ್ಲೇ, ಗೌರಿಯ ಪದವಿ ಪರೀಕ್ಷೆಯ ಫಲಿತಾಂಶ

ಬರುವ ಮುಂಚೆಯೇ ಅವಳ ಮದುವೆಯ ವಿಚಾರ ಮುನ್ನಲೆಗೆ ಬಂದಿತು.

ವಿಜಯವಾಡದತ್ತ ಹೊರಟ ರೈಲಿನ ಗುಡು....ಗುಡು.. ಸದ್ದು ಬದಲಾಗಿ, ಪಟ್....ಪಟ್...ಪಟ್ ಎಂದು ಕೇಳಿಸಲು ಶುರುವಾಯಿತು. ಭಾರತಿ ಹೊರಗಡೆ ಇಣುಕಿ ನೋಡಿದಾಗ ರೈಲು ತುಂಗಭದ್ರಾ ಹೊಳೆಯನ್ನು ದಾಟುತ್ತಿರುವುದು ಕಾಣಿಸಿತು. ನದಿ ಹರಿಯುವ ದಿಕ್ಕಿನಲ್ಲಿ ದೊಡ್ಡ ದೊಡ್ಡ ಬಂಡೆಗಳಿಂದ ಆವೃತ ವಿಜಯನಗರದ ಬೆಟ್ಟಗಳು ವಿಶಾಲವಾಗಿ ಹರಡಿರುವುದು ಗೋಚರಿಸುತ್ತಿದಂತೆ ಇತಿಹಾಸಕಾರರ ಅರಿವಿಗೂ ಬಾರದ ಅಸಂಖ್ಯಾತ ಹಳೆಕಥನಗಳ ಪುಟಗಳನ್ನು ಹುದುಗಿಸಿಕೊಂಡ ವಿವಿಧಾಕೃತಿಯ ಬಂಡೆಗಳು ಅವಳನ್ನು ತಮ್ಮ ಕ್ರಿಯಾರಂಗ ತಂಡವು ಹಂಪಿ ಉತ್ಸವದಲ್ಲಿ ಭಾಗವಹಿಸಲು ಈ ಹಿಂದೆ ಬಂದಿದ್ದನ್ನು ನೆನಪಿಸಿತು. ಆಗ ಭೇಟಿಯಾಗಿದ್ದ ಹೆಸರಾಂತ ಕಲಾವಿದರು ಹಾಗೂ ಹಂಪಿಯೆಲ್ಲೆಡೆ ಸುತ್ತಿದ್ದು ನೆನೆಪಿನ ಆಳದಿಂದ ಹೊರಬಂದು ಶಿಲ್ಪ ಕಲಾಕೃತಿಗಳ ಚಿತ್ರಣಗಳು ಕಣ್ಣಮುಂದೆ ಹಾದುಹೋಯಿತು. ಕೈಯಲ್ಲಿರುವ 'ರಾಕ್ಷಸ ತಂಗಡಿ' ಪುಸ್ತಕವನ್ನು ನೋಡಿ ಬ್ಯಾಗಿನೊಳಗೆ ಹಾಕಿದಳು. ಮುಂದಿನ ಸೀಟಿನಲ್ಲಿ ತೇಜಸ್ ಕಾಣಿಸಲಿಲ್ಲ, ಇಲ್ಲೇ ಎಲ್ಲಾದರೂ ಹೋಗಿರಬಹುದೆಂದುಕೊಂಡು ಮುಖ ತೊಳೆದು ಹಿಂದಿರುಗುವಷ್ಟರಲ್ಲಿ ಚಹಾ ಕಪ್‌ಗಳನ್ನು ಹಿಡಿದುಕೊಂಡು ಬಂದನು. ಮನೆಯಿಂದ ತಂದ ಚಿವಡಾ ಹೊರತೆಗೆದು ಸುದ್ದಿಪತ್ರಿಕೆಯ ಮೇಲೆ ಹರಡುತ್ತಿದ್ದಾಗ,

"ಭಾರತಿ, ನಿನ್ನ ಕಡೆ ಅಡ್ರಸ್ಸ್ ಸಮಾ ಐತ್ ಅಲ್ಲಾ ಮತ್ತs" ಅಂತ ತೇಜಸ್ ಪ್ರಶ್ನಿಸಿದಾಗ,

"ಹೌದು, ನಾ ಆಂಟಿ ಕಡೆ ಕುಂತು ಪಕ್ಕಾ ಬರಕೊಂಡs ಬಂದೇನಿ, ಮತ್ತ್ ಬರದಿದ್ದ ಹಾಳಿ ಸೈತ ಪೋಟೊ ತೆಗೆದೀನಿ. ವಿಜಯವಾಡದಾಗ ಟ್ರೇನ್ ಬದ್ಲಿ ಮಾಡಿ ಕಾಕಿನಾಡ ಟ್ರೇನ್ ಹತ್ತಬೇಕು, ಸ್ಟೇಶನ್ ಹೊರಗ ಸರ್ಕಾರಿ ಬಸ್ಗೋಳು ಊರಿನ ಕಡೆ ಸಾಕಷ್ಟ ಅದಾವಂತ ಇನ್ನs ಅಲ್ಲೇ ರಿಕ್ಷಾಗಳದ್ದೂ ಚಿಂತಿಯಿಲ್ಲ ಅಂತ ಆಂಟಿ ಹೇಳ್ಯಾರ"

ಆಯ್ತು ಅಂತ ತಲೆಯಾಡಿಸಿದ. ಭಾರತಿಯು ಧಾರವಾಡದಲ್ಲಿರುವ ಗೌರಿಯ ತಾಯಿ ಉಮಾದೇವಿ ಕಟ್ಟಿಕೊಟ್ಟ ರೊಟ್ಟಿಗಂಟು ಹಾಗೂ ಬುತ್ತಿಯನ್ನು ನೆನಪಿಸಿಕೊಂಡು ಅವನ್ನು ಮುಟ್ಟಿ ನೋಡಿದಳು.

*****

"ಲೆವಂಢಿ ಲೆವಂಢಿ ತೆಲ್ಲವಾರಿಂಧಿ" ಜೊತೆಗಿದ್ದವರನ್ನು ಎಬ್ಬಿಸುವ ತೆಲುಗು ಮಾತುಗಳು ರೈಲಿನಲ್ಲಿ ರಿಂಗಣಿಸಿದಾಗ ಇಬ್ಬರೂ ನಿದ್ದೆಯಿಂದೆದ್ದು ನೋಡಿದರು. ಹೊರಗೆ ಚುಮು ಚುಮು ಬೆಳಕು ಹರಡಿತ್ತು. ಫಲಕದತ್ತ ನೋಡಿದಾಗ ಟ್ರೇನ ವಿಜಯವಾಡ ತಲುಪಿತ್ತು. ಇಳಿದು ಕ್ಯಾಂಟಿನ್ ಬಳಿ ಸಾಗಿದರು. ಅಂತರವಿಶ್ವವಿದ್ಯಾನಿಲಯದ ಸ್ಪರ್ಧೆಗಾಗಿ ಮೊದಲು ಇಲ್ಲಿ ಬಂದದ್ದರಿಂದ, ಆಗ ತಿಂದ ತಿಂಡಿಯ ಹೆಸರನ್ನು ನೆನಪಿಸಿಕೊಂಡು ಆರ್ಡರ ಮಾಡಿದರು. ಸರ್ವರ್ ಸ್ಥಳೀಯ ಪೆಸರಟ್ಟು(ಹೆಸರುಬೇಳೆ ದೋಸೆ), ಉಪಮಾ ಹಾಗೂ ಹಸಿಶುಂಠಿ ಚಟ್ನಿಯ ತಟ್ಟೆಗಳನ್ನಿಟ್ಟನು. ಉಪ್ಪಿಟ್ಟಿನೊಂದಿಗೆ ದೋಸೆಯನ್ನು ಸುತ್ತಿ ಚಟ್ನಿ ಹಚ್ಚಿಕೊಂಡು ಚಪ್ಪರಿಸಿ, ಚಹಾ ಕುಡಿದು ಕಾಕಿನಾಡ ರೈಲನ್ನು ಹಿಡಿದರು. ವಿಜಯವಾಡದ ಕಾಂಕ್ರೀಟ ಕಾಡು ದಾಟಿ ರೈಲು ಒಕ್ಕಲುತನದ ವೈಭವದಿಂದ ಕಂಗೊಳಿಸುತ್ತಿರುವ ತೋಟಗಳ ನಡುವೆ ಓಡುತ್ತದೆ. ಕೃಷ್ಣೆಯ ಇಕ್ಕೆಲಗಳ ಭೂರಮೆಯು ಮಾವು, ಬಾಳೆ ಹಾಗೂ ಭತ್ತದ ಬೆಳೆಗಳ ಸೊಬಗಿನಲ್ಲಿ ಮೆರೆಯುತ್ತಿರುವುದನ್ನು ಕಣ್ಣು ತುಂಬಿಕೊಳ್ಳುತ್ತಾ ತೇಜಸನ್ನೊಮ್ಮೆ ವೀಕ್ಷಿಸಿದಾಗ ಅವನು ತೂಕಡಿಸುತ್ತಿದ್ದ.

ಇಪ್ಪತ್ತೈದು ಇಪ್ಪತ್ತಾರರ ತನ್ನಷ್ಟೆ ವಯೋಮಾನದ ತೇಜಸನತ್ತ ತದೇಕಚಿತ್ತದಿಂದ ನೋಡುತ್ತಾ ಭಾರತಿ ಯೋಚಿಸಿದಳು. 'ನಾವೆಲ್ಲ ವಿದ್ಯಾರ್ಥಿ ಜೀವನದಲ್ಲಿ ಎಷ್ಟೊಂದು ಲವಲವಿಕೆಯಿಂದ ಹಾಗೂ ಕ್ರಿಯಾಶೀಲತೆಯಿಂದ ಇದ್ವೀ. ತೇಜಸ್ ಅತ್ಯಂತ ಶಾಂತಚಿತ್ತದವನಾಗಿದ್ದರೂ ತಬಲಾ ಮುಂದೆ ಕುಳಿತನೆಂದರೆ ಬೆರಳುಗಳ ಚಲನೆಯ ವೇಗವು ಸಂಗೀತದ ನಾದವನ್ನು ಲಯಬದ್ದವಾಗಿ ಹರಡುತ್ತಿತ್ತು. ಆದರೆ, ಮತ್ತೊಬ್ಬ ಗೆಳೆಯ ಸುಹಾಸನ ತಲೆಗೆ ವಾಯಲಿನ ಹತ್ತದೆ ನಾಟಕಗಳ ಪಾತ್ರಗಳಿಗಷ್ಟೆ ಸೀಮಿತನಾದವ. ಮತ್ತು ಗೌರಿ, ಅವಳಲ್ಲಿದ್ದ ನಾಟ್ಯ, ನಟನೆ ಹಾಗೂ ಆಂಗಿಕ ಅಭಿನಯಗಳಿಗೆ ಸರಿಸಾಟಿ ಧಾರವಾಡದಲ್ಲೇ ಯಾರೂ ಇರಲಿಲ್ಲ. ಮೊದ ಮೊದಲಿಗೆ ಅವಳ ಜೊತೆ ಸ್ಪರ್ಧೆಗೆ ಇಳಿದೆನಾದರೂ ಆಕೆಯ ಖದರಿನ ಮುಂದೆ ನಾನು ಸೋಲನ್ನು ಒಪ್ಪಿಕೊಳ್ಳಬೇಕಾಯಿತು. ರೂಪದಲ್ಲಿ ಗೌರಿ ನನ್ನಷ್ಟು ಚೆನ್ನಾಗಿಲ್ಲದಿದ್ದರೂ ಪ್ರತಿಭೆಯಿಂದಲೇ ಮುಖ್ಯಪಾತ್ರಗಳನ್ನು ದಕ್ಕಿಸಿಕೊಳ್ಳುತ್ತಿದ್ದಳು. ಹೈಸ್ಕೂಲಿನಲ್ಲಿರುವಾಗ ಕಿರುನಾಟಕಗಳಲ್ಲಿ ನಾವು ನಾಲ್ವರೂ ಪಶುಪಕ್ಷಿ, ಮರಗಿಡ ಹಾಗೂ ಮಕ್ಕಳ ಪಾತ್ರಗಳನ್ನು ಮಾಡಿ ಸಂತೋಷ ಪಟ್ಟಿದ್ವೀ. ನಾವು ಬೆಳೆದಂತೆ ಕಾಲೇಜಿನಲ್ಲಿ ಸಿರಿಸಂಪಿಗೆ, ತಲೆದಂಡ, ಯಯಾತಿ, ಚಿರೆಬಂದಿವಾಡೆ, ಖರೇಖರೇ ಸಂಗ್ಯಾಬಾಳ್ಯಾ ಮುಂತಾದ ನಾಟಕಗಳನ್ನು ಪ್ರದರ್ಶಿಸುವಾಗ ಯಾವ್ಯಾವ ಊರುಗಳನ್ನು ತಿರುಗಲಿಲ್ಲ' ಅವಳ ಮನಸ್ಸು ರೈಲು ಬಂಡಿಯ ಸದ್ದಿನ ತಾಳಕ್ಕೆ ತಕ್ಕಂತೆ ಸಾಗಿತು.

ಹದಿವಯಸ್ಸಿನಲ್ಲೇ ಕೂಡಿ ಬೆಳೆದವರಾಗಿದ್ದರಿಂದ, ಸ್ನೇಹದ ಜೊತೆ ಜೊತೆಗೆ ಯುವ ಮನಸ್ಸಿನೊಳಗೆ ಸರ್ವೇಸಾಮಾನ್ಯವಾಗಿ ಸುಳಿಯುವ ಬಯಕೆಗಳು ಇವರಲ್ಲೂ ಸಹಜವಾಗಿ ಬಂದಿದ್ದವು. ಆದರೆ, ಕಲಾವಿದ ಸೃಜನಮನಸ್ಸುಗಳ ಪ್ರೇಮದ ಪರಿಭಾಷೆ ಹಾಗೂ ನಿವೇದನೆಗಳು ಸಾಮಾನ್ಯ ಯುವ ಮನಸ್ಸುಗಳನ್ನು ಅರಿಯುವಷ್ಟು ಸುಲಭವಾಗಿರಲಿಲ್ಲ. ಪಿ.ಯು.ಸಿ ಎರಡನೆಯ ವರುಷದಲ್ಲಿ ಭಾರತಿಯು ತೇಜಸ್‌ನಲ್ಲಿ ತನಗೆ ತಾನೇ ತಿಳಿಯದೆ ಅನುರಕ್ತಳಾದಳು. ಅದೇ ಸಮಯಕ್ಕೆ ಒಂದು ವರುಷ ತಡವಾಗಿ ಕಾಲೇಜ್ ಸೇರಿದ್ದ ಗೌರಿ ಕೂಡ ತೇಜಸ್ ಪ್ರತಿಭೆಗೆ ಮಾರುಹೋದಳು. ಮತ್ತೆ ವಾಯಲಿನ್ ಕಲಾವಿದ ಸುಹಾಸನು ಭಾರತಿಯ ಬೆಡಗಿಗೆ ತನ್ನ ಹೃದಯದಲ್ಲಿ ಸ್ಥಾನ ಕೊಟ್ಟನು. ಆದರೆ ಇತ್ತ ತೇಜಸನು ಭಾರತಿ ತೋರ್ಪಡಿಸಿದ ಅಮೂರ್ತ ಪ್ರೇಮ ಪರಿಭಾಷೆಗಳನ್ನು ತಿಳಿಯಲಾಗದೆ ಗೌರಿಯ ಕಣ್ಣುಗಳಲ್ಲಿನ ಬಿಂಬಗಳಿಗೆ ಮನಸೋತನು. ಇಲ್ಲಿ ಒಂದರ್ಥದಲ್ಲಿ ಪ್ರೀತಿ ಪ್ರೇಮಗಳ ಸಂವಹನ ಎರಡೂ ಬದಿಯಿಂದ ಕೂಡಿ ಬಂದಿದ್ದು ಗೌರಿ ಹಾಗೂ ತೇಜಸ್ ಪರಸ್ಪರರ ಹೃದಯಗಳಿಗೆ ಮಾತ್ರ.

*****

ಟ್ರೇನು ಯಾವುದೋ ನಿಲ್ದಾಣಕ್ಕೆ ಬಂದು ನಿಂತಿತು. ಸಹ ಪ್ರಯಾಣಿಕನೊಬ್ಬನನ್ನು ಮಾತನಾಡಿಸಿದಾಗ ಇದು ರಾಜಮಹೇಂದ್ರವರಂ, ಇದನ್ನು ಮೊದಲು ರಾಜಮಂಡ್ರಿ ಅನ್ನುತ್ತಿದ್ದರು ಎಂದೂ ತಿಳಿಸಿದನು. ಗಡಿಯಾರ ನೋಡಿದ ಭಾರತಿ ರೊಟ್ಟಿಗಂಟನ್ನು ಬಿಚ್ಚಿದಳು. ಮೊಸರನ್ನ ಹಾಗೂ ಕಾಳುಪಲ್ಯ ನಿನ್ನೆಯೇ ತಿಂದು ಮುಗಿಸಿದ್ದರಿಂದ ರೊಟ್ಟಿ, ರಂಜಕ ಹಾಗೂ ಗುರೆಳ್ಳಿನ ಒಣ ಚಟ್ನಿ ಉಳಿದಿತ್ತು. ಅಂಗಡಿಯಿಂದ ತೇಜಸ್ ಮೊಸರನ್ನು ತಂದನು.

"ತೇಜಸ್, ನಿನಗ ಗೊತ್ತೈತಿ ರೊಟ್ಟಿ, ರಂಜಕ ಮತ್ತ ಗುರೆಳ್ಳು, ಶೇಂಗಾ, ಪುಠಾಣಿ, ಅಗಸಿ ಚಟ್ನಿ ಅಂದ್ರ ನನಗ ಬಾಳ ಪಸಂದ ಅಂಥ, ನಮ್ಮ ಆಯಿಗಂತೂ ರೊಟ್ಟಿ ಬಡ್ಯಾಕ ಬರುದಿಲ್ಲಾ ನಾನೂ ಕಲಿಲಿಲ್ಲ, ಬರೇ ಚಪಾತಿ ಲಟ್ಟಿಸಿ ತಿಂದವ್ರ ನಾಫ. ಮತ್ತ, ಗೌರಿಯವರ ಅವ್ವ ಉಮಾ ಆಂಟಿ ಚೆನ್ನಮನ ಕಿತ್ತೂರಿನವರಲ್ಲೆನ.. ಬಾಳ ಚಂದ ತೆಳೂರೊಟ್ಟಿ ಬಡಿತಾರ ಅಂತ ನಾವೆಲ್ಲಾ ಎಷ್ಟ ಸರ್ತಿ ಆಂಟಿ ಕೈಯಾಗಿನ ರೊಟ್ಟಿ ತಿಂದಿಲ್ಲ ಹೇಳು".

"ಸೆಕೆಂಡ್ ಹ್ಯಾಂಡ್ ಡಿಜಿಟಲ್ ಪ್ರಿಂಟಿಂಗ್ ಮೆಶಿನ್ ಹೆಂಗ ನಡೆದೆತಿ ನಿಮ್ದು, ನಿಮ್ಮ ಕಾಕಾರೀಗ ಅದನ್ನ ಉಪಯೋಗಿಸೋದು ನೀ ಕಲಿಸಿದಿಯೋ ಇಲ್ಲೊ?."

"ಅಡ್ಡಿಯಿಲ್ಲಾ ಕಲ್ತಾರ, ನಾ ಇಲ್ದಿದ್ರೂ ಈಗ ನಡಿತೈತಿ"

ತೇಜಸ್‌ನ ಅವ್ವ ಹೋದ ವರುಷವಷ್ಟೇ ತೀರಿಕೊಂಡಿದ್ದರು. ಹತ್ತಾರು ವರುಷಗಳ ಹಿಂದೆ ಅಪ್ಪನ ಅಕಾಲಿಕ ನಿಧನದ ನಂತರ ಹಳೆಯದಾದ ಪ್ರಿಂಟಿಂಗ್ ಪ್ರೆಸ್ ಅನ್ನು ಚಿಕ್ಕಪ್ಪನೆ ನಡೆಸುತ್ತಿದ್ದ. ಕಾಲದ ಹೊಡೆತಕ್ಕೆ ಪಾವರ್ ಮೆಶಿನಗಳ ಚಕ್ರಗಳು ನಿಂತ ನಂತರ ಹಣಕಾಸಿನ ತೊಂದರೆಯಿಂದ ಇವರು ಹಳೆಯ ಡಿಜಿಟಲ್ ಯಂತ್ರಗಳನ್ನು ಕೊಂಡು ಅಷ್ಟಿಷ್ಟು ಸಂಪಾದಿಸುತ್ತಿರುವುದು ಭಾರತಿಗೆ ಗೊತ್ತಿದ್ದರಿಂದ ವಿಷಯವನ್ನು ಬೆಳೆಸಲಿಲ್ಲ. ತೇಜಸ್ ಕಾಗದದ ಊಟದ ತಟ್ಟೆಗಳನ್ನು ಕಸದ ತೊಟ್ಟಿಗೆ ಓಡಿ ಹೋಗಿ ಹಾಕಿ ಬಂದ. ಟ್ರೇನ್ ರಾಜಮಹೇಂದ್ರವರಂ ಬಿಟ್ಟಿತು.

ಊರು ದಾಟಿ ಗ್ರಾಮೀಣ ಪ್ರದೇಶದಲ್ಲಿ ಭತ್ತದ ಜೊತೆ ಮತ್ತೊಂದು ಹೊಸ ಬಗೆಯ ಫಸಲು ಹೊಲಗಳಲ್ಲಿ ನಳನಳಿಸುತ್ತಿರುವುದು ಕಂಡಿತು. ಭಾರತಿ ಬೆಳೆಯನ್ನು ನೋಡುತ್ತಿರುವಂತೆ ಮತ್ತೊಂದು ಹೊಳೆ ಹರಿಯುವುದು ಕಂಡಿತು. ಪಕ್ಕದ ಪ್ರಯಾಣಿಕನತ್ತ ಕಣ್ಣುಗಳನ್ನು ಬಿಟ್ಟಾಗ ಹೊಳೆಯ ಹೆಸರು ಗೋದಾವರಿ; ಹೊಲದಲ್ಲಿರುವ ಬೆಳೆ ಉದ್ದು ಎಂದು ತಿಳಿಯಿತು. ಭಾರತದಲ್ಲಿ ನದಿಗಳು ಎಷ್ಟೊಂದು ಇವೆ ಪಶ್ಚಿಮ ಘಟ್ಟದಲ್ಲಿ ಹುಟ್ಟಿರುವ ಕೃಷ್ಣಾ ನದಿಗಂತೂ ಕೋಯ್ನಾ, ಮಲಪ್ರಭಾ, ಘಟಪ್ರಭಾ, ತುಂಗಾ, ಭದ್ರಾ, ವರದಾ, ಭೀಮಾ ಹೀಗೆ ಎಲ್ಲೆಲ್ಲೊ ಹುಟ್ಟಿರುವ ಹೊಳೆಗಳು ಮನುಷ್ಯ ನಿರ್ಮಿತ ಗಡಿಗಳ ಹಂಗಿಲ್ಲದೆ ಹರಿಯುತ್ತಾ ಸಂಗಮಗಳಾಗುತ್ತ ಸಾಗರ ಸೇರಲು ದೂರದವರಗೆ ಸಾಗುತ್ತವೆ. ಆದರೆ ನಾವೂ ಅವಿವೇಕಿಗಳಾಗಿ ಮುಕ್ತವಾಗಿ ಹರಿಯುವ ನದಿಗಳ ಸಲುವಾಗಿ ಜಗಳವಾಡುತ್ತಾ ರಕ್ತ ಹರಿಸಲೂ ಹಿಂಜರಿಯದ ನಮ್ಮ ಪಾಡೂ ಎಂತದು ಎಂದು ಭಾರತಿ ಯೋಚಿಸುತ್ತಲೆ, ತಟ್ಟನೆ

"ತೇಜೂ, ನದಿಗಳಿಗೆ ಎಷ್ಟs ಚಂದ ಹೆಸರ್ ಇಟ್ಟಾರ್ ನೋಡ, ಇವನೆಲ್ಲಾ ಯಾರ್ ಇಟ್ಟಿರಬಹುದೂ ನಿನಗ ಗೊತ್ತs ಐತ್ಯಾs?"

ಆತ, ಇಯರ್ ಫೋನನ್ನು ಸಿಕ್ಕಿಸಿಕೊಳ್ಳುತ್ತಾ ಮೂಕಬಸವನ ತರಹ ಇಲ್ಲವೆನ್ನುತ್ತ ಗೋಣನ್ನು ಸಾವಕಾಶವಾಗಿ ಅಲ್ಲಾಡಿಸಿದನು.

ನಾಲ್ಕು ವರುಷಗಳ ಹಿಂದೆ ಗೌರಿಯು ಪದವಿ ತರಗತಿಯ ಕೊನೆಯ ಸೆಮಿಸ್ಟರಿನ ಪರೀಕ್ಷೆಗಳನ್ನು ಮುಗಿಸಿ ಫಲಿತಾಂಶಕ್ಕಾಗಿ ಕಾಯುತ್ತಿದ್ದಾಗ, ಭಾರತಿ ಸ್ನಾತಕೋತ್ತರ ಪದವಿಯ ಎರಡನೆಯ ಸೆಮಿಸ್ಟರ್‌ನಲ್ಲಿ ಓದುತ್ತಿದ್ದಳು. ತೇಜಸ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ಸುಹಾಸ್ ತನ್ನಪ್ಪನ ಫಾರ್ಮಸಿಯಲ್ಲಿ ತಂದೆಗೆ ಸಹಾಯಕನಾಗುತ್ತಾನೆ. ಕ್ರಿಯಾರಂಗದ ಚಟುವಟಿಕೆಗಳು ಯಥಾವತ್ತಾಗಿ ನಡೆದಿತ್ತು. ಒಂದು ಮುಸ್ಸಂಜೆ ಏನಾಯಿತೆಂದರೆ, ಇವರೆಲ್ಲ ಮಾಮೂಲು ಸ್ಥಳದಲ್ಲಿ ಕೂಡಿದ್ದಾಗ ಗೌರಿ ಬಂದು ಭಾರತಿಯನ್ನು ಪಕ್ಕಕ್ಕೆ ಕರೆದು ಮನೆಯಲ್ಲಿ ತನ್ನ ಮದುವೆ ಗೊತ್ತು ಮಾಡಿದ್ದಾರೆಂದು ಕಣ್ಣೀರಿಡತೊಡಗಿದಳು. ಇದನ್ನು ಗಮನಿಸಿದ ತೇಜಸ್ ಹಾಗೂ ಸುಹಾಸ್ ಕೂಡ ಸಮೀಪಿದರು. ತೇಜಸನಿಗೆ ಈ ವಿಷಯ ಗೊತ್ತಿದೆಯಾ? ಅಂತ ಸುಹಾಸ ಮತ್ತು ಭಾರತಿ ಇಬ್ಬರೂ ಕೇಳಿದಾಗ ಗೌರಿ ಹೂಂ ಗುಟ್ಟಿದಳು. ನಾಲ್ವರಲ್ಲೂ ತುಸು ಹೊತ್ತು ಗಾಢ ಮೌನ ಆವರಿಸಿತು. ಮೌನ ಮುರಿದ ಭಾರತಿಯು ಮದುವೆ ಮುಹೂರ್ತವೆಂದು

ಅಂತ ಕೇಳಿದಾಗ ಅವಳು ಮುಂದಿನ ವಾರವೇ ಅಂದಾಗ ಚಡಪಡಿಸಿ ತೇಜಸ್‌ನನ್ನು ಉದ್ದೇಶಿಸಿ 'ನಡಿ ಗೌರಿಯ ಮನೆಗೆ' ಎಂದು ಕರೆದಳು. ಬಡಪಾಯಿ ನಡುಗುತ್ತಿರುವ ಕಾಲುಗಳನ್ನು ತಹಬಂದಿಗೆ ತರಲಾಗದೆ ಪಕ್ಕದ ಮರವನ್ನು ಆಸರೆಗೆ ಆತುಕೊಂಡನು. ಮೂವರ ಕಣ್ಣುಗಳು ಭಾರತಿಯಡೆಗೆ ಭರವಸೆಯಿಂದ ನೋಡುತ್ತಿರುವಂತೆಯೇ ಏನನ್ನೂ ಮಾತನಾಡದ ಅವಳು, ಗೌರಿಯ ಮನೆಯತ್ತ ಒಬ್ಬಳೇ ಬಿರಬಿರನೆ ಸಾಗಿದಳು.

ಕಾಕಿನಾಡದತ್ತ ಹೊರಟ ರೈಲು ಗುಡು..ಗುಡು....ಓಡುತ್ತಿತ್ತು. ಹೊರಗಿನ ಬಿಸಿಲಿನ ಜಳದಿಂದ ಬೋಗಿಯ ತಾಪಮಾನವು ಏರಿ ಭಾರತಿಯ ತಲೆಯು ಬಿಸಿಯಾಯಿತು. ಪರಿಸರದಲ್ಲಿ ಹಸಿರಿಲ್ಲದೆ ಬರೀ ಬೋಳು ಗುಡ್ಡಗಳು ಒಂದೊಂದಾಗಿ ಹಿಂದೆ ಸರಿಯುತ್ತಿತ್ತು. ಮತ್ತೊಂದು ನದಿ ರೈಲಿನ ಹಳಿಗಳಿಗೆ ಅಡ್ಡಲಾಗಿ ಹರಿಯುತ್ತಿರುವುದು ಕಾಣಿಸುತ್ತಿತ್ತು. ಅರ್ಧಂಬರ್ಧ ಹರಿಯುತ್ತಿರುವ ನದಿಯ ಹೆಸರನ್ನು ಹೇಳಲು ಪಕ್ಕದ ಪ್ರಯಾಣಿಕ ಆಸಕ್ತಿಯಿಂದ ನೋಡಿದಾಗ ಅವಳು ಬಿಸಿಲಿನ ಜಳದ ರಕ್ಷಣೆಗೆ ಕಣ್ಣುಗಳನ್ನು ಮುಚ್ಚಿದ್ದಳು.

*****

ಗೌರಿಯ ಮದುವೆ ಬೇರೊಬ್ಬನ ಜೊತೆ ನಡೆಯಲಿರುವುದು ಬಿರುಗಾಲುಗಳನ್ನು ಹಾಕುತ್ತಿರುವ ಭಾರತಿಯ ಮನದಲ್ಲಿ ತಲ್ಲಣ ಸೃಷ್ಟಿಸಿತ್ತು. ಗೌರಿಯ ಮನೆಹೊಕ್ಕವಳೆ ಅವ್ವ ಉಮಾದೇವಿಯ ಜೊತೆ ಮಾತನಾಡಲು ಸೀದಾ ಅಡುಗೆಮನೆಯೊಳಗೆ ಕಾಲಿಟ್ಟಳು.

"ಭಾರತಿ, ಬಾ ಕುಂದ್ರ ಇಲ್ಲೆ" ಉಮಾದೇವಿ ಕೊನ್ಮೆಗಿ ಒರೆಸುತ್ತಾ ಕರೆದಳು.

"ಆಂಟಿ, ಏನ್ರೀ ಗೌರಿ ಮದ್ವಿ ಮಾಡಾಕ್ ಹೊಂಟೆರಂತs. ನಿಮಗೂ ಗೊತ್ತೈತಿ ಅವಳು ತೇಜಸ್‌ನ ಎಷ್ಟ ಹಚ್ಚಕೊಂಡಾಳಂತ್, ಮುಂದs ಅವರಿಬ್ಬರೂ ಕೂಡೆ ಸಂಗೀತನಾಟಕ ಅಕೆಡೆಮಿ ತಗಿಬೇಕಂತ್ ಲೆಕ್ಕಾ ಹಾಕ್ಯಾರ"

ನಿಟ್ಟುಸಿರು ಬಿಟ್ಟ ಉಮಾದೇವಿ ಕೊನ್ಮೆಗಿಗೆ ಜೋಳದ ಹಿಟ್ಟನ್ನು ಹಾಕಿ

"ಭಾರತಿ, ಇದರೊಳಗ್ ನನ್ನದೇನ್ ನಡಿದುಲ್ಲ, ಎಲ್ಲ ನಮ್ಮ ಮನ್ಯಾವರ್ದ ತೀರ್ಮಾನ ಇದರಾಗ"

"ಅಲ್ರೀ ಆಂಟಿs, ತೇಜಸರವರದು ಮತ್ತ ನಿಮ್ಮದೂ ಒಂದs ಜಾತಿ ಐತಿ ಮತ್ ಯಾಕ್ ಬ್ಯಾಡ್ ಅಂತಾರ್ ಅಂಕಲ್?"

ಬಿಸಿನೀರನ್ನು ಹಿಟ್ಟಿಗೆ ಹಾಕಿ ಕಲಸುತ್ತಾ, ಉತ್ತರಿಸುವಷ್ಟರಲ್ಲೇ ಉಮಾದೇವಿಯ ಪತಿ, ಗಂಗಾಧರಯ್ಯನ ಪ್ರವೇಶವಾಯಿತು. ಆತ ಮಧ್ಯ ಬಾಯಿಹಾಕಿ, "ಭಾರತಿ, ನಿನಗಿದೆಲ್ಲ ತಿಳಿದುಲ್ಲ. ತೇಜಸನ ಅಪ್ಪ ಆಧುನಿಕ ಬಸವಣ್ಣ ಆಗಾಕ್ ಹೊಂಟವs, ಸ್ವತಹ ಅಂತರಜಾತಿ ಮದ್ವಿ ಆಗೀ ಪಾದಪೂಜೆ, ಅಡ್ಡ ಪಲಕ್ಕಿ, ಪಂಚಕ, ಮುಹೂರ್ತ ಇವೆಲ್ಲ ಮಾಡಬ್ಯಾಡ್ರಿ ಅಂತ ಮಂದಿ ಮನಸs ಕೆಡಿಸದಾಂವಾ. ಅಷ್ಟ ಅಲ್ಲದ ತಮ್ಮ ಪ್ರಿಂಟಿಂಗ್ ಪ್ರೆಸ್ ಹೆಸರನ್ನ 'ಸಮತಾ' ಪ್ರೆಸ್ ಅಂತ ಇಟ್ಟೂ ರೈತ, ದಲಿತ ಹಾಗೂ ಕೂಲಿಕಾರ್ಮಿಕರ ಪರ ಚಳುವಳಿ ಮಾಡಿ ಗೋಲಿಬಾರನ್ಯಾಗ್ ಗುಂಡು ತಿಂದು ಕಾಲಿಗೆs ಪೆಟ್ಟ ಮಾಡಕೊಂಡಾವ ಇದ್ದ. ಹಂಗs ಹತ್ತಾರು ವರ್ಷ ಕುಂಟುಕೋತs... ಕುಂಟುಕೋತs ಐವತ್ತ ವಯಸ್ಸ ಆಗೋದ್ರೊಳಗ ತೀರಕೊಂಡಾಂವ". ಮುಂದುವರೆದು "ಈಗ ಗೌರಿಗೆ ಮೈಸೂರ್ ಕಡಿಯಿಂದ ಭಲೋ ಸಂಬಂಧ ಕೂಡಿ ಬಂದೇತಿ. ಹುಡುಗ ಕಲತಾಂವ್ ಅದಾನ, ಇಬ್ಬರ್ದೂ ಗುಣಗೋಳು ಶಂಬರ್ ಟಕ್ಕೆ ಕೂಡಿ ಬಂದಾವ್, ಮತ್ತs ಸಂಪ್ರದಾಯಸ್ಥ ಆಗರ್ಭ ಶ್ರೀಮಂತರ ಮನೆತನ ಅವರ್ದು. ಗೌರಿ ಈ ಸಂಬಂಧಕ್ಕ ಒಪ್ಪಲಿಲ್ಲಾ ಅಂದ್ರ ನನ್ನಷ್ಟ್ ಕೆಟ್ಟ್ ಸೂಳಿಮಗಾನ ಯಾರ್ ಇಲ್ಲ ಮತ್" ಎಂದು ಭುಸುಗುಡುತ್ತಾ ಅಡುಗೆ ಮನೆಯಿಂದ ಹೊರಟೇಬಿಟ್ಟ.

ಭಾರತಿ ದಿಗ್ಭ್ರಮೆಯಿಂದ "ಅರೇ! ಅರೇ! ನಾವೂ ಕರಾವಳಿ ಕಡೆಯಿಂದ ಬಂದ ಸಂಪ್ರದಾಯಸ್ಥ ಕುಲದವರ ಅದೇವಿ. ಇಲ್ಲಿ ಧಾರವಾಡಕ್ಕ ನಮ್ಮಪ್ಪ ಆಕಾಶವಾಣಿ ನೌಕರಿಗೆ ಬಂದು ಮುರಘಾಮಠದ ನಂಟ ಬೆಳೆಸಿಕೊಂಡ, ನಮ್ಮಪ್ಪ.. ನಮ್ಮವ್ವ ಹಂಗs ಕಣವಿ, ಕಾಪಸೆ, ಕಲಬುರ್ಗಿ, ಕನವಳ್ಳಿ ಮುಂತಾದವರ ಸಂಪರ್ಕದಿಂದ ಬಸವಣ್ಣನ ಬಗ್ಗೆ ತಿಳಕೊಂಡ್ರು, ಶರಣರು ನಮ್ಮ ಕನ್ನಡನಾಡಿನ್ಯಾಗ ಆಗಿ ಹೋಗ್ಯಾರ ಅಂತ ಅಭಿಮಾನ ಪಟ್ಟಕೊಂಡು ಬಸವಣ್ಣನ ಫೋಟೊ ನಮ್ಮ ಮನ್ಯಾಗs ತಂದ್ ಹಚ್ಚಿಕೊಂಡೇವಿ, ಇವರೂ! ಗಂಗಾಧರಯ್ಯನಂತವರು ಹುಟ್ಟಿನಿಂದ ಬಸವಣ್ಣನ ಫೋಟೊ ಮನಿವಳಗ ಹಚ್ಚಕೊಂಡು ಈಗಿನ ಡಿಜಿಟಲ್ ಯುಗದಾಗಲೂ ಎಷ್ಟೊಂದು ಹುಂಬತನ, ಮೌಢ್ಯ ಬೆಳಿಸಿಕೊಂಡಾರಲ್ಲ" ಅಂತ ತನ್ನಲ್ಲೆ ಪಿಸುಗುಟ್ಟುತ್ತಾ ಬೇಸರಗೊಂಡಳು.

ಉಮಾ ಆಂಟಿ ಏನಾದರೂ ಹೇಳಬಹುದೇ ಅಂತ ಅವರತ್ತ ತಿರುಗಿದಾಗ ಕಣ್ಣೀರಿಡುತ್ತಾ, "ನಮ್ಮ ಮನಿಯವರೂ ಮೊದಲೆಲ್ಲಾ ಇಷ್ಟ ಕಠಿಣ ಇದ್ದಿಲ್ಲs ಇತ್ತಿತ್ತಲಾಗs ವಾಟ್ಸಾಪ್, ಫೇಸ್ಬುಕ್ ಗ್ರುಪ್‌ನೊಳಗ ಬರೋ ಮಾಹಿತಿ ನೋಡಕೋತs ಹಿಂಗ್ ಆಗ್ಯಾರ"

ಭಾರತಿ, ಇದು ಇಲ್ಲೆ ಬಗೆಹರಿಯೋ ವಿಷಯ ಅಲ್ಲ. ಇದನ್ನು ಬೇರೆ ರೀತಿಯಲ್ಲೇ ಪರಿಹರಿಸಬೇಕೆಂದು ಯೋಚಿಸಿ ಮೇಲೆದ್ದಳು.

"ನಿಲ್ಲವಾs, ರೊಟ್ಟಿ ಎಣಗಾಯಿ ತಿಂದ್ ಹೋಗೋವಂತಿ" ಅಂತ ಬಡಿಸಲು ಉಮಾದೇವಿ ತಟ್ಟೆ ಕೈಗೆತ್ತಿಕೊಂಡರೆ, ಮಾತುಗಳನ್ನು ಕೇಳಿಸಿಕೊಳ್ಳದೆ ಭಾರತಿ ಹೊರಟುಬಿಟ್ಟಳು.

ಮದುವೆಯ ಮುಂಚಿನ ದಿನ ಕೆಸಿಡಿ ಕಾಲೇಜಿನ ಮೈದಾನದ ಕಟ್ಟೆಯ ಮೇಲೆ ಗೌರಿಗಾಗಿ ಗೆಳೆಯರೆಲ್ಲ ಕಾಯುತ್ತಿದ್ದರು. ಹೊರಗೆ ಮತ್ತೊಬ್ಬ ಸಹಪಾಠಿ ರಿಯಾಜ್ ಕಾರಿನೊಳಿಗಿನಿಂದ ಮೈದಾನದೆಡೆಗೆ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದನು. ಈತ ಗೌರಿ ಹಾಗೂ ತೇಜಸರನ್ನು ಧಾರವಾಡದಿಂದ ದೂರ ಓಡಿಸಿಕೊಂಡು ಹೋಗಲು ಬಂದಿದ್ದ. ರಿಯಾಜನನ್ನು ಯಾರೇ ಕರೆಯಲಿ ಹಿಂದೆ ಮುಂದೆ ನೋಡದೇ ಸಹಾಯಹಸ್ತ ಚಾಚಲು ಸಿದ್ಧನಾಗಿರುತ್ತಿದ್ದ. ಮೈದಾನದಲ್ಲಿ "ಕಡಗರ್ಣಿ ಅರಣ್ಯ ಇಲ್ಲಿಂದ ಬರೋಬ್ಬರಿ ೧೦೦ ಕಿ.ಮೀ ಐತಿ. ಅಲ್ಲೆs 'ಮಹಾಮನೆ' ಅನ್ನೊ ಹೆಸರಿನ ಹೋಮಸ್ಟೇಗೆ ನೀವು ಹೋಗ್ಬೇಕು. ನಾನು ಇಲ್ಲಿನ ಪರಿಸ್ಥಿತಿ ನೋಡ್ಕೊಂಡು ಮುಂದಿನವಾರಾs ಬರತೆನಿ. ಅಲ್ಲೇ ಸಮೀಪ ಇರೊ ಉಳವಿ ಚನ್ನಬಸವಣ್ಣನ ಗುಡಿಯೊಳಗ ಲಗ್ನದ್ದs ವ್ಯವಸ್ಥೆ ಮಾಡೋಣ" ಅಂತ ಭಾರತಿ ನಿರ್ದೇಶನ ನೀಡಿದ್ದಳು. ಸುಹಾಸ "ಹೂಂ" ಅಂದ. ತೇಜಸ ದುಗುಡ ತುಂಬಿಕೊಂಡು ನಿಂತಿದ್ದ. ಎದೆಯ ತುಂಬೆಲ್ಲಾ ಆತಂಕದ ಭಯ ತುಂಬಿ ನಾಲಿಗೆ ಒಣಗಿ ಗರಬಡಿದವನಂತಾಗಿದ್ದ ಆತ. ಸಮಯ ಸರಿಯುತ್ತಾ ಹೋಯಿತು. ಗೌರಿಯ ಸುಳಿವು ಕಾಣದೆ ಭಾರತಿ ಫೋನ ಮಾಡಲು ಶುರು ಮಾಡಿದ್ದಳು. ಫೋನ್ ಸ್ವಿಚ್‌ಆಫ್ ಆಗಿತ್ತು. ಸಂಜೆಗತ್ತಲಾವರಸಿ ಬೀದಿದೀಪಗಳು ಉರಿದರೂ ಗೌರಿ ಬರದೆ ಅಲ್ಲಿದ್ದವರಲ್ಲಿ ನಿರಾಶೆ ಆವರಿಸಿತು. ಬೇರೆ ವಿಧಿಯಿಲ್ಲದೆ ರಿಯಾಜ್, ತೇಜಸನನ್ನು ಆತನ ಮನೆಗೆ ಬಿಟ್ಟನು. ಭಾರತಿ ಹಾಗೂ ಸುಹಾಸ್ ಗೌರಿಯ ಮನೆಯತ್ತ ಹೋಗಿ ಇಣುಕಿದರೆ ಮನೆಯಲ್ಲಿ ಅರಿಶಿಣದ ಶಾಸ್ತ್ರ ನಡೆದಿತ್ತು. ಸಪ್ಪೆಮುಖಗಳನ್ನು ಹೊತ್ತು ಭಾರವಾದ ಹೆಜ್ಜೆಗಳನ್ನು ಹಾಕುತ್ತಾ ತಮ್ಮ ಮನೆಗಳತ್ತ ಸಾಗಿದರು.

****

ಕಾಕಿನಾಡ ಸ್ಟೇಶನ್ನಿಂದ ಹೊರಬಂದ ಇಬ್ಬರೂ ಬಸ್ಸನ್ನೇರಿದರು. ಇನ್ನೇನೂ ಒಂದರ್ಧ ಘಂಟೆಯೊಳಗೆ ಗೌರಿಯನ್ನು ಭೇಟಿಯಾಗುವುದಿತ್ತು. ಮದುವೆಯಾದಾಗಿನಿಂದ ಇಲ್ಲಿಯವರೆಗೆ ಅವಳೊಂದಿಗೆ ಏನೇನೂ ಸಂಪರ್ಕವಿರಲಿಲ್ಲ. ಮದುವೆಯ ಮುಂಚಿನ ದಿನ ಓಡಿ ಹೋಗಲು ವ್ಯವಸ್ಥೆ ಮಾಡಿದ್ದರೂ ಮೊದಲು ಹೂಂ ಅಂದವಳು ಮೈದಾನದತ್ತ ಅವಳು ಯಾಕೆ ಬರಲಿಲ್ಲ ಎನ್ನುವುದನ್ನೂ ವಿಚಾರಿಸುವ ಗೋಜಿಗೆ ಇವರು ಹೋಗಿರಲಿಲ್ಲ. ತೇಜಸ್, ಗೌರಿಯ ಮದುವೆಯ ನಂತರ ಮತ್ತಷ್ಟು ಅಂತರಮುಖಿಯಾಗಿದ್ದ. ಅವನಲ್ಲಿದ್ದ ತಬಲಾ ಸದ್ದು ಮಾಡದೆ ತನ್ನಲ್ಲಿರುವ ತಾಳಗಳನ್ನೇ ಮರೆತು ಧೂಳು ಹಿಡಿದು ಮೂಲೆ ಸೇರಿತ್ತು. ಗೌರಿ ಇಲ್ಲದ ಕ್ರಿಯಾರಂಗ ಕ್ರಿಯಾಹೀನವಾಗಿತ್ತು. ಒಂದೆರೆಡು ಸರ್ತಿ ಸುಹಾಸ, ಭಾರತಿಯಲ್ಲಿ ತಮ್ಮಿಬ್ಬರ ಮದುವೆಯ ಪ್ರಸ್ತಾಪ ಮಾಡಿದರೂ ಅವಳು ನಿರುತ್ತರಳಾಗಿದ್ದಳು. ಈ ನಡುವೆ ಗೌರಿಯ ಅಪ್ಪ ಗಂಗಾಧರಯ್ಯ ಕೂಡ ತೀರಿ ಹೋದನು. ಕಳೆದ ತಿಂಗಳಷ್ಟೇ ಭಾರತಿಗೆ ಉಮಾ ಆಂಟಿ ಫೋನ ಮಾಡಿ ಗೌರಿಯ ಪತಿ ಕಾಕಿನಾಡಿನ ಓ.ಎನ್.ಜಿ.ಸಿ ತೈಲ ಕಂಪನಿಯ ಸಂಸ್ಕರಣಾ ಘಟಕದಲ್ಲಿ ಕೆಲಸದಲ್ಲಿದ್ದಾಗ ಅಪಘಾತವೊಂದರಲ್ಲಿ ಸಾವಿಗೀಡಾಗಿದ್ದನ್ನು ಹೇಳಿದ್ದಳು. ಈ ವಿಷಯ ತೇಜಸ್ ಹಾಗೂ ಸುಹಾಸರಿಗೆ ತಿಳಿದು ತುಂಬಾ ಸಂಕಟಪಟ್ಟಿದ್ದರು. ಮೂವರು ಉಮಾ ಆಂಟಿಗೆ ಸ್ವಾಂತನ ಹೇಳಹೋದಾಗ ತಾನು ಕಾಕಿನಾಡದಲ್ಲಿ ನಾಲ್ಕಾರು ತಿಂಗಳು ಇದ್ದು ಬಂದೆ, ಗೌರಿಗೆ ಮೂರು ವರುಷದ ಮಗಳಿದ್ದಾಳೆ ನೀವು ಒಂದು ಸಾರಿಯಾದರೂ ಅವಳನ್ನು ಭೇಟಿಯಾಗಿ ಬನ್ನಿ ಎಂದು ವಿನಂತಿಸಿದ್ದಳು. ಭಾರತಿಯೇನೋ ಹೋಗಲು ಸಿದ್ಧಳಾದಳು, ಆದರೆ ಸುಹಾಸ ಹಾಗೂ ತೇಜಸ್‌ರನ್ನು ಒಪ್ಪಿಸಲು ಸಮಯ ಹಿಡಿಯಿತು. ಕೊನೆಘಳಿಗೆಯಲ್ಲಿ ಸುಹಾಸ ಕೆಲಸದ ನಿಮಿತ್ತ ಇವರೊಂದಿಗೆ ಬರಲಾಗಿರಲಿಲ್ಲ. ಪೂರ್ವ ಕರಾವಳಿ ಪ್ರದೇಶದ ಸೆಕೆಯಲ್ಲಿ ಸಾಗುತ್ತಿರುವ ಬಸ್ಸಿನಲ್ಲಿದ್ದ ಇವರಿಬ್ಬರ ಎದೆಯಲ್ಲಿ ಗೌರಿಯನ್ನು ಕಾಣುವ ತವಕ, ಮುಖದ ಬೆವರನ್ನು ಒರೆಸಿಕೊಳ್ಳುತ್ತಾ ಸಮಯ ಹೋಗಿದ್ದು ತಿಳಿಯದೆ ನೋಡು ನೋಡುವುದರಲ್ಲೇ ಕಾಕಿನಾಡ ಬಂದುಬಿಟ್ಟಿತ್ತು.

*****

ಕರೆಗಂಟೆಯ ಸದ್ದಿಗೆ ಬಾಗಿಲು ತೆರೆದ ಗೌರಿಯನ್ನು ನೋಡಿ ಭಾವನೆಗಳನ್ನು ವ್ಯಕ್ತಪಡಿಸಲಾಗದೆ ಭಾರತಿ ಅವಳನ್ನು ಅಪ್ಪಿಕೊಂಡರೆ, ಭಾವನಾತ್ಮಕ ಸನ್ನಿವೇಶವನ್ನು ನೋಡುತ್ತಾ ತೇಜಸ ನಿಂತುಬಿಟ್ಟನು. ಅದೇ ಸಮಯದಲ್ಲಿ ಭಾರತಿಯ ಕಾಲುಗಳನ್ನು ಯಾರೋ ಮೃದುವಾಗಿ ಬಳಸಿದಂತಾಗಿ ಅತ್ತ ನೋಡಿದಳು. ಚಿಕ್ಕ ಹೆಣ್ಣು ಮಗು ಇಬ್ಬರ ಕಾಲುಗಳನ್ನು ಹಿಡಿದುಕೊಂಡು ನಿಂತಿತ್ತು. ಮಗುವನ್ನು ಎತ್ತಿಕೊಂಡು ಮುತ್ತುಗಳ ಮಳೆ ಸುರಿಸಿದ ಭಾರತಿ,

"ಎಷ್ಟ್ ಚಂದ ಅದಾಳ ನಿನ್ನ ಮಗಳs ಗೌರಿ, ಥೇಟ್ ನಿನ್ನಂಗs ಅದಾಳs ನೋಡು"

ಗೌರಿಯು ತೇಜಸನತ್ತ ನೋಡಿ ಒಳಗೆ ಕರೆದು, ಪ್ರಯಾಣದ ಆಯಾಸದಿಂದ ಬಳಲಿದ್ದ ಇಬ್ಬರಿಗೂ ಕುಡಿಯಲು ನೀರನ್ನು ಕೊಡುತ್ತಿದ್ದಾಗ "ಏನ್ ನಿನ್ನ ಹೆಸರೂ ಪುಟ್ಟಿ" ಎಂದು ಮಗುವನ್ನು ಮುದ್ದಿಸುತ್ತಾ ಕೇಳಿದಾಗ ಮಗು ನಾಚಿ ಅಮ್ಮನತ್ತ ಓಡಿತು. ಗೌರಿಯೇ ಮಗುವಿನ ಹೆಸರು ಗೀತಿಕಾ ಎಂದು ಹೇಳಿದಳು. ದೀರ್ಘ ಸಮಯದಿಂದ ಒಬ್ಬರನ್ನೊಬ್ಬರು ನೋಡಿರದ, ಮಾತನಾಡಿಸಿರದ ಆಪ್ತ ಗೆಳೆಯರು ಕೂಡಿರುವ ಈ ಘಳಿಗೆಗೆ ಗೀತಿಕಾಳೆ ಸಂವಹನದ ವೇದಿಕೆಯಾದಳು. ಮೂವರು ಗೀತಿಕಾಳ ಬಗ್ಗೆ ಮಾತನಾಡುತ್ತಾ, ಅವಳೊಂದಿಗೆ ಆಡುತ್ತಾ ಕೂತುಬಿಟ್ಟರು. ಸಮಯ ಮೀರಿ ಹೊಟ್ಟೆಗಳು ಚುರುಗುಟ್ಟಿದಾಗ ಧಾರವಾಡದಿಂದ ತಂದಿದ್ದ ರೊಟ್ಟಿ ಹಾಗೂ ಸಜ್ಜಕದ ಹೋಳಿಗೆಗಳ ಗಂಟನ್ನು ಬಿಚ್ಚಿ ಊಟ ಪ್ರಾರಂಭವಾಯಿತು.

ತಡರಾತ್ರಿಯವರೆಗೆ ಗೌರಿಯ ಸಂಸಾರ, ಅತ್ತೆಮನೆ, ಕಾಕಿನಾಡ, ಪತಿಯ ನೌಕರಿ,

ಕ್ರಿಯಾರಂಗ ಹಾಗೂ ಧಾರವಾಡ ಇವೆಲ್ಲಗಳ ಕುರಿತು ಮಾತನಾಡುತ್ತಾ ಕುಳಿತುಬಿಟ್ಟರು. ಮದುವೆಯಾದ ವರುಷದೊಳಗೆ ಗೀತಿಕಾಳ ಜನ್ಮವಾಯಿತು. ಪತಿ ಗಿರೀಶ್ ಮೆಕ್ಯಾನಿಕ್ ವಿಭಾಗದಲ್ಲಿ ಕಿರಿಯ ಇಂಜಿನಿಯರ. ಸಂಪ್ರದಾಯಸ್ಥ ಗಿರೀಶ್, ಕೌಟುಂಬಿಕ ವಿಷಯಗಳಲ್ಲಿ ಗೌರಿಗೆ ಯಾವುದೇ ಹಿಂಸೆ ಮಾಡದೆಯಿದ್ದರೂ ಕಲೆ, ಸಂಗೀತ, ನೃತ್ಯ, ನಾಟಕಗಳ ಕುರಿತು ತುಂಬಾ ಅಸಹನೀಯತೆಯನ್ನು ಹೊಂದಿದ್ದ. ಗೌರಿಗೆ ಇದು ತಿಳಿಯಲು ಬಹಳ ದಿನಗಳೇನು ಬೇಕಾಗಲಿಲ್ಲ. ಮನೆಯ ಪಕ್ಕದಲ್ಲಿಯೇ ಓ.ಎನ್.ಜಿ.ಸಿ ವಸತಿ ಕಾಲೊನಿಯ ಸಾಂಸ್ಕೃತಿಕ ಭವನವಿತ್ತು. ಅಲ್ಲಿ ಅನೇಕ ಕಾರ್ಯಕ್ರಮಗಳು ಜರುಗುತ್ತಿದ್ದವು. ಇವಳು ಭವನದ ಚಟುವಟಿಕೆಗಳನ್ನು ಕಿಡಕಿಯಿಂದಲೇ ನೋಡಬೇಕಿತ್ತು. ಪಕ್ಕದ ಮನೆಯ ಬಂಗಾಳಿ, ತಮಿಳು, ತೆಲಗು, ಪಂಜಾಬಿ ಕುಟುಂಬದವರು ಅಲ್ಲಿ ಸದಸ್ಯರಾಗಿದ್ದರು. ಹೊಸತರದಲ್ಲಿ ನೆರೆಹೊರೆಯವರ ಒತ್ತಾಸೆಗೆ ಮಣಿದು ಗೌರಿ ಅವರೊಂದಿಗೆ ಬಂಗಾಳಿ ನಾಟಕವೊಂದನ್ನು ನೋಡಲು ಹೋಗಿ ಅವಳಿಗೆ ಸಾಕುಬೇಕಾಯಿತು. ಈ ವಿಷಯದಲ್ಲಿ ಪತಿರಾಯ ಗಿರೀಶ್ ಮಾಡಿದ ರಂಪಾಟದಿಂದ ಅವಳು ಮತ್ತೆ ಅತ್ತ ಸುಳಿಯುವ ಧೈರ್ಯ ತೋರಿಸಿರಲಿಲ್ಲ. ಖಿನ್ನತೆಗೊಳಗಾಗಿದ್ದ ಗೌರಿಯ ಬಾಳಿನಿಂದ ನೃತ್ಯ ಹಾಗೂ ಸಂಗೀತಗಳು ಮರೆಯಾಗಿ ಹೋಗಿದ್ದವು. ಮುಂದೆ ಗೀತಿಕಾ ಬಾಳಿನಲ್ಲಿ ಬಂದ ನಂತರ ಅವಳೊಂದಿಗೆ ಆಡುತ್ತಾ ತುಸು ಗೆಲುವನ್ನು ಪಡೆದು ಜೀವನ ಸಾಗಿಸಿದ್ದಳು. ಕಲಾಭಿಮಾನ, ರಸಿಕತನ, ಸಂಗೀತ, ಸಾಹಿತ್ಯ ಹಾಗು ಜೀವನ ಸೌಂದರ್ಯಗಳು ಗೊತ್ತಿರದ ಗಿರೀಶ್ ಬರೀ ತನ್ನ ಭಡ್ತಿಗಾಗಿ ಹಲಬುತ್ತಾ ಜಾತಕ ಫಲಗಳಂತಹ ಮೌಢ್ಯಕ್ಕೂ ಬಲಿಯಾಗಿದ್ದ. ದೇಶದ ನವರತ್ನ ಕಂಪನಿ ಎಂಬ ಬಿರುದು ಗಳಿಸಿರುವ ಕಂಪನಿಯಲ್ಲಿ ವೈಜ್ಞಾನಿಕ ಸಂಸ್ಥೆಯಲ್ಲಿ ನೌಕರಿಯಲ್ಲಿದ್ದರೂ ಗಿರೀಶನ ರಸಿಕತೆಯಿಲ್ಲದ ಅರ್ಥಹೀನ ವ್ಯಕ್ತಿತ್ವ ಗೌರಿಗೆ ನುಂಗಲಾರದ ತುತ್ತಾಗಿತ್ತು. ಆದರೂ ಹೊಂದಿಕೊಂಡು ಸಂಸಾರ ನಡೆಸಿದ್ದಳು. ಇದ್ದಕ್ಕಿದ್ದಂತೆ ಒಂದು ದಿನ ಗಿರೀಶ್ ಕ್ರೇನನಿಂದ ಬಿದ್ದು ಅಸುನೀಗಿದ್ದರಿಂದ ಅವಳ ಬಾಳಿನಲ್ಲಿ ಹೊಸ ಸಂಕಟ ಶುರುವಾಯಿತು. ಪತಿಯನ್ನು ಕಳೆದುಕೊಂಡಿರುವ ಶೋಕ ಒಂದು ಕಡೆಯಾದರೆ ಮುಂದೆ ಏನು ಎಂಬುದು ತಿಳಿಯದಾಯಿತು. ಅತ್ತೆ ಮನೆಯವರು ಮಗನ ಅಕಾಲಿಕ ಸಾವಿನ ಕಾರಣವನ್ನು ಸೊಸೆಯ ಕಾಲ್ಗುಣದ ಪರಿಣಾಮದಿಂದಲೇ ಆಯ್ತೆನ್ನುವ ಚುಚ್ಚು ಮಾತುಗಳಿಂದ ಜರಿಯಲು ಶುರುಮಾಡಿದರು. ಗೌರಿ ಇತ್ತ ತವರುಮನೆಗೆ ಹೋಗಬೇಕೋ ಅತ್ತ ಅತ್ತೆಮನೆಗೆ ಹೋಗಬೇಕೆನ್ನುವ ತೊಳಲಾಟದಲ್ಲಿದ್ದಳು. ಈಗಾಗಲೇ ಗಿರೀಶ್ ಸತ್ತು ಐದು ತಿಂಗಳುಗಳಾಗಿದ್ದವು. ಓ.ಎನ್.ಜಿ.ಸಿ ಸಂಸ್ಥೆಯ ನಿಯಮಾನುಸಾರ ಕ್ವಾರ್ಟರ್ಸ್‌ನಲ್ಲಿ ಇನ್ನೂ ಒಂದು ತಿಂಗಳು ಮಾತ್ರ ವಾಸಿಸಬಹುದಿತ್ತು. ಈ ನಡುವೆ ಕಂಪನಿಯಿಂದ ಪತ್ರ ಬಂದು ಪತಿಯ ಸಾವಿನ ಅನುಕಂಪದ ಆಧಾರದ ಮೇಲೆ ನೌಕರಿಯ ಆಫರ್ ನೀಡಿದ್ದರು. ಆದರೆ, ನೌಕರಿ ಸೇರುವ ಬಗ್ಗೆ ಮುಂದಿನ ಶನಿವಾರದೊಳಗಾಗಿಯೇ ತಿಳಿಸಬೇಕಿತ್ತು.

ಹೀಗೆ ಗೆಳೆಯರ ನಾಲ್ಕಾರು ದಿನಗಳು ಮಾತುಗಳಲ್ಲೇ ಸಾಗಿತು. ಪುಟ್ಟ ಪೋರಿ ಗೀತಿಕಾ ತೇಜಸನನ್ನ ಹಚ್ಚಿಕೊಂಡು “ಮಾಮಾಃ ಮಾಮಾಃ” ಎನ್ನುತ್ತಾ ಅವನೊಂದಿಗೇ ಆಡುತ್ತಿದ್ದಳು. ಅವಳನ್ನು ಆಡಿಸಲು ತೇಜಸ್ ವಸತಿ ಕಾಲೋನಿಯ ಪಾರ್ಕು ಹಾಗೂ ಉದ್ಯಾನವನಗಳಿಗೆ ಕರೆದುಕೊಂಡು ಹೋಗುತ್ತಿದ್ದನು. ಆಪ್ತರ ಇರುವಿಕೆಯಿಂದ ಗೌರಿಯ ಹೃನ್ಮನಗಳಲ್ಲಿ ತುಸು ಗೆಲುವು ಚಿಗುರಿತು. ಮುಂದಿನ ದಿನಗಳಲ್ಲಿ ನಾಲ್ವರೂ ಸಮೀಪದ ಶಿವದೇವಾಲಯ, ಸಮುದ್ರತೀರ ಹಾಗೂ ಇತರ ಸ್ಥಳಗಳಿಗೆ ಓಡಾಡಿ ಬಂದರು. ನೆರೆಹೊರೆಯವರು ಭಾರತಿ ಹಾಗೂ ತೇಜಸ್‌ರನ್ನು ಪರಿಚಯಿಸಿಕೊಂಡು; ಕ್ರಿಯಾರಂಗದ ಯಶೋಗಾಥೆಗಳನ್ನು ಕೇಳಿ ಅಚ್ಚರಿ ಪಟ್ಟರು. ಭಾರತಿಯು ಗೌರಿಯನ್ನು ನೌಕರಿ ಸೇರಲು ಒತ್ತಾಯಿಸುತ್ತಾ, ನೀನಿಲ್ಲಿ ಚೆನ್ನಾಗಿರಬಹುದು ಹಾಗೂ ಸಂಗೀತ, ನೃತ್ಯಗಳ ತರಗತಿಗಳನ್ನು ನಡೆಸುತ್ತಾ, ಸೃಜನಶೀಲ ಚಟುವಟಿಕೆಗಳಲ್ಲೂ ಭಾಗವಹಿಸುತ್ತಾ ಜೀವನಕ್ಕೊಂದು ಅರ್ಥವನ್ನು ತಂದುಕೊಳ್ಳಬಹುದೆಂದು ಹುರಿದುಂಬಿಸಲು ಯತ್ನಿಸಿದಳು.

******

ಇನ್ನೇನೂ ಭಾರತಿ ಹಾಗೂ ತೇಜಸ್ ಧಾರವಾಡಕ್ಕೆ ವಾಪಾಸಾಗುವ ಸಮಯ ಹತ್ತಿರವಾಗುತ್ತಿದಂತೆ ಶುಕ್ರವಾರದ ಬೆಳಿಗ್ಗೆ ಇದ್ದಕ್ಕಿದ್ದಂತೆ ಇಳಕಲ್ ಸೀರೆಯನ್ನುಟ್ಟ ಗೌರಿ ಗೆಲುವಿನಿಂದ ತೇಜಸನಿಗೆ ಹೊರಹೋಗಲು ತಯಾರಾಗಲು ಹೇಳಿದಳು.

ಭಾರತಿ ಆಶ್ಚರ್ಯದಿಂದ “ಎಲ್ಲಿ” ಎಂದು ಕೇಳಿದಾಗ

“ನೌಕರಿ ಸೇರಾಕಃ. ನಾಳೆ ಕಡೀ ದಿನ ಐತಿ ಜೊಯಿನ್ ಆಗಿ ಬರ್ತೆನಿ”

ಇದನ್ನು ಕೇಳಿದ ಭಾರತಿ ಖುಷಿಯಿಂದ ಗೀತಿಕಾಳನ್ನು ಎತ್ತಿ ಮುದ್ದಾಡಿದಳು.

ಗೀತಿಕಾ “ಅಮ್ಮ ಎಲ್ಲಿ ಹೋಗ್ತಿ ನೀನು...ನಾನೂ ಬರ್ತಿನಿ” ಅಂತ ಹಟ ಮಾಡತೊಡಗಿದಳು.

“ಇಲ್ಲ ಪುಟ್ಟಿ ನೀನು ಭಾರತಿ ಆಂಟಿ ಜೊತೆ ಚೂರೂ ಇರು ಬೇಗ ಬಂದು ಬಿಡ್ತಿನಿ” ಅಂತ ಮಗಳನ್ನು ರಮಿಸಿ, ಗಿರೀಶನ ಸ್ಕೂಟರ ಕೀಲಿಕೈಯನ್ನು ತೇಜಸನ ಕೈಗೆ ಕೊಟ್ಟಾಗ ಸ್ಕೂಟರ್ ಒಂದೇ ಕಿಕ್‌ಗೆ ಶುರುವಾಯಿತು. ಇಬ್ಬರೂ ಕಚೇರಿಯತ್ತ ತೆರಳುವುದನ್ನು ನೆರೆಹೊರೆಯವರು ವೀಕ್ಷಿಸುತ್ತಾ ಅಚ್ಚರಿಯೊಂದಿಗೆ ಸಂತೋಷವನ್ನೂ ಪಟ್ಟರು.

ಬೆಳಿಗ್ಗೆ ಆಫೀಸ್‌ಗೆ ಹೋದ ಗೌರಿ, ತೇಜಸ್ ಸಂಜೆ ನಾಲ್ಕಾದರೂ ಮನೆಗೆ ಬರಲಿಲ್ಲ. ಗೀತಿಕಾ ಹಾಗೂ ಭಾರತಿಯರ ದೃಷ್ಟಿಗಳು ತೆರೆದ ಬಾಗಿಲಿನ ಮೇಲೆಯೇ ಇತ್ತು. ನಾಲ್ಕೂವರೆ ಹೊತ್ತಿಗೆ ಸ್ಕೂಟರ್ ಸದ್ದು ಕೇಳುತ್ತಿದ್ದಂತೆ ಗೀತಿಕಾ “ಅಮ್ಮಾಃ” ಎಂದು ಓಡಿ ಅವಳನ್ನು ತಬ್ಬಿಕೊಂಡಳು. ಭಾರತಿ ಒಳ ಬಂದ ಇಬ್ಬರಿಗೂ ಹೋದ ಕೆಲಸ ಸುಸೂತ್ರವಾಗಿ ಆಯಿತಾ ಎಂದು ಕೇಳಿದಾಗ ಗೌರಿ, ಮುಂದಿನ ತಿಂಗಳಿನ ಒಂದನೆಯ ತಾರೀಕಿನಿಂದಲೇ ನೌಕರಿಗೆ ಹೋಗಬೇಕು ಎಂದು ಹರುಷದಿಂದ ಹೇಳಿದಳು. ಮುಂದುವರೆದು ಒಂದು ಅನಿರೀಕ್ಷಿತ; ಆದರೆ ಭಾರಿ ಶುಭ ಸುದ್ದಿಯನ್ನು ಸ್ಫೋಟಿಸಿದಳು: “ನಿನಗ್ ಮತ್ತೊಂದು ಸುದ್ದಿ ನಾ ಹೇಳಾಕ್ಕಿದ್ದಿನಿ. ಅದೇನಂದ್ರಃ ತೇಜಸ್ ಮತ್ತು ನಾನು ಮದ್ವಿ ಆಗಬೇಕಂತ ಮನಸ್ಸ ಮಾಡೀವಿ” ಅಂದಳು.

ಮದುವೆಯ ಮಾತುಗಳನ್ನು ಕೇಳಿ ಒಂದು ಕ್ಷಣ ದಿಗ್ಮೂಢಳಾದ ಭಾರತಿಗೆ ಅವಳಿಗರಿವಿಲ್ಲದೆ ಕಣ್ಣಾಲಿಗಳಿಂದ ಆನಂದ ಭಾಷ್ಪಗಳು ಉದುರಿದವು. ಕ್ಷಣಾರ್ಧದಲ್ಲಿ ಸಾವರಿಸಿಕೊಂಡು “ಓ ಗೌರಿ, ಬೆಸ್ಟ್ ಮಾಡಿದಿ ಲೇ ನೀನೂ. ನನ್ನ ಮಾತ ಆ ದಿನ ಮನಿಂದ್ ಓಡಿ ಬಾ ಅಂದಾಗ ಕೇಳಿಲ್ಲಂದ್ರೂ ಇವತ್ತಃ ಧೈರ್ಯ ತೊಗೊಂಡ್ ನೀ ಈ ನಿರ್ಧಾರ್ ತೊಗೊಂಡಿ ಬಾಳಃ ಛಲೋ ಆತ್ ಬಿಡೂ. ತಲೆದಂಡ ನಾಟಕದಾಗಿನ ಮಧುವರಸನ ಮಗಳು ಕಲಾವತಿ ಪಾತ್ರ ಮಾಡಿದ್ದಃ ಸಾರ್ಥಕ ಆತ ನೋಡು”.

ಭಾರತಿ ತೇಜಸನೆಡೆಗೆ ನೋಡುತ್ತಾಳೆ. ಆತ ತನ್ನದೂ ಸಮ್ಮತಿ ಇದೆ ಎನ್ನುವ ಭಾವನೆಗಳನ್ನು ಮೌನದಿಂದ ವ್ಯಕ್ತಪಡಿಸಿದ. ನಾಡಿದ್ದು ನೀನು ವಾಪಾಸ ಹೋಗುವ ಮುಂಚಿನ ದಿನ ರವಿವಾರವೇ ಮದುವೆ, ಅವ್ವನಿಗೆ ಪೋನ ಮಾಡಿದ್ದೆ, ಸುಮುಹೂರ್ತ ಗಿಮುಹೂರ್ತ ಅಂತ ನೋಡಬೇಡಿ, ತಾನೂ ಮದುವೆಗೆ ಬರಲಾರೆ ವಿಡಿಯೋದಲ್ಲಿಯೆ ಆಶೀರ್ವದಿಸುತ್ತೇನೆ ಎಂದು ಉಮಾ ಆಂಟಿ ಹೇಳಿದ್ದನ್ನು ಗೌರಿ ತಿಳಿಸಿದಳು.

ಭಾನುವಾರದಂದು ಶಿವದೇವಾಲಯದಲ್ಲಿ ಅಕ್ಕಪಕ್ಕದ ಕುಟುಂಬಗಳು, ಗೆಳತಿ ಭಾರತಿ ಹಾಗೂ ಮಗಳು ಗೀತಿಕಾ ತಮ್ಮ ತಮ್ಮ ಸಂಸ್ಕೃತಿಗೆ ಅನುಸಾರ ಉಡುಗೆತೊಡುಗೆಗಳನ್ನು ಧರಿಸಿಕೊಂಡು ಗೌರಿ ಹಾಗೂ ತೇಜಸರ ಹೊಸಜೀವನದ ಪ್ರಾರಂಭದ ಅಮೃತ ಘಳಿಗೆಗೆ ಸಾಕ್ಷಿಯಾದರು. ಮರುದಿನ ಕಾಕಿನಾಡ ರೇಲ್ವೆ ನಿಲ್ದಾಣದಲ್ಲಿ ಬೀಳ್ಕೊಡಲು ಬಂದ ತಂದೆತಾಯಿ, ಧಾರವಾಡಕ್ಕೆ ಹೊರಟ ಭಾರತಿ ಆಂಟಿಯೊಂದಿಗೆ ಪುಟ್ಟ ಗೀತಿಕಾ ಸೆಲ್ಫಿ ತೆಗೆದುಕೊಳ್ಳುತ್ತಿದ್ದಂತೆ ರೇಲ್ವೆ ಹೊರಡಲು ಸೀಟಿ ಹೊಡೆಯಿತು. ಲಗುಬಗೆಯಿಂದ ಭಾರತಿ ಹತ್ತಿದಳು. ರೈಲುಗಾಡಿ ಪಟ್ಟಣದ ಸರಹದ್ದನ್ನು ದಾಟಿ ಹೊರಬರುವಷ್ಟರಲ್ಲಿ ಪೋನು “ಟನ್..” ಅಂದು ವಾಟ್ಸಾಪ್ ಪುಟದಲ್ಲಿ ನಿಲ್ದಾಣದಲ್ಲಿ ತೆಗೆದುಕೊಂಡ ಸೆಲ್ಫಿ ಪೋಟೊ ರಾರಾಜಿಸಿತು. ಅದರ ಹಿಂದೆಯೇ ವಾಯ್ಸ್ ಕರೆಯಲ್ಲಿ ಗೀತಿಕಾಳ ಪುಟಾಣಿ ಧ್ವನಿಯು “ಆಂಟೀಃ ಮತ್ತೆ ಯಾವಾಗ ಬರ್ತಿರೀಃ ಬೇಗ ಬನ್ನಿ. ಬಾಯ್ ಬಾಯ್” ಎಂದು ಮೊಳಗಿತು. “ಬರ್ತಿನಿ ಪುಟ್ಟಿ” ಅಂತ ಪೋಟೊ ನೋಡುತ್ತಾ ತೇವಗೊಂಡ ಕಣ್ಣುಗಳನ್ನು ಒರೆಸಿಕೊಂಡು ದೀರ್ಘವಾಗಿ ಉಸಿರೆಳೆದು ಪೋನನ್ನು ತನ್ನ ಎದೆಗೆ ಒತ್ತಿಕೊಂಡು ರೆಪ್ಪೆಗಳನ್ನು ಮುಚ್ಚಿದಳು.


ಒಂದೆರೆಡು ಘಂಟೆಯ ನಂತರ “ಟಿಕೆಟ್.... ಟಿಕೆಟ್” ಎಂಬ ಶಬ್ಧಗಳು ಕಿವಿಗೆ ಬಿದ್ದಾಗ ಭಾರತಿ ಕಣ್ಣದೆರೆದು ಪೋನಿನಲ್ಲಿರುವ ಟಿಕೆಟನ್ನು ಟಿ.ಸಿ ಮುಖಕ್ಕೆ ಹಿಡಿದಳು. ಆತನು ಅದನ್ನು ನೋಡಿ “ಮರಿವಕರು ಏರಿ?” (ಮತ್ತೊಬ್ಬರು ಎಲ್ಲಿ) ಎಂದು ತೆಲುಗು ಭಾಷೆಯಲ್ಲಿ ಪ್ರಶ್ನಿಸಿದಾಗ,

“ಅವನು ಯಾರ್ ಜೊತಿ ಇರಬೇಕಿತ್ತು ಅಲ್ಲೇಃ ಅದಾನಾ”

ಅಂದಾಗ ಕನ್ನಡ ತಿಳಿಯದೆ ಟಿ.ಸಿ “ಓಕೆ...ಓಕೆ” ಎಂದು ಮುಂದೆ ಸಾಗಿದನು.

ಅಷ್ಟರಲ್ಲಿ ಪೋನಿನ ಕರೆಗಂಟೆ ಸದ್ದು ಮಾಡಿತು. ಅತ್ತಕಡೆಯಿಂದ ಸುಹಾಸ “ನನ್ನ ಕರೀದಃ ಮದ್ವಿ ಮಾಡಕೊಂಡ್ನಃ ತೇಜಸ್ ಬದ್ಮಾಸ ಓದೊಂದ್” ಇವಳು ಉತ್ತರಿಸುವಷ್ಟರಲ್ಲೇ “ನ್ಯಾಷನಲ್ ಡ್ರಾಮಾ ಸ್ಕೂಲ್ ಇಮೇಲ್ ಬಂದೇತಿ, ನಾವಿಬ್ಬರೂ ಸಿಲೆಕ್ಟ್ ಆಗೇವಿ ನಾಳೀ ಒಳಗಃ ನಮ್ಮ ಮರ್ಜಿ ತಿಳಸಬೇಕಂತ, ನೀ ಹೂಂ ಅಂದ್ರ ನಾ ಹೋಗಾವ, ತೇಜಸ್ ಅಂತೂ ಅಲ್ಲೆ ಸೆಟ್ಲ ಆದಾ ಇನ್ನಃ ಧಾರವಾಡದಾಗ ಇರೋದ ನಾವೀಬ್ರ ನಿನಗ ಮತ್ತಃ ಬ್ಯಾರೆ ಯಾರ ಅದಾರೂ” ಎಂದು ಭಾರತಿಯನ್ನು ಛೇಡಿಸಿದ.

“ಬಾಡ್ಯಾ ಸುಹಾಸ್ ನನ್ನಃ ಕಾಡಸಬ್ಯಾಡೋಃ. ಇಮೇಲ್ ಪಾಸವರ್ಡ ಕಳಸ್ತೆನಿ ನನ್ನ ಕಡಿಯಿಂದ ನೀನಃ ಒಪ್ಪಿಗಿ ಕಳಿಸಬಿಡ ಆತಾಃ” ಎಂದು ಉತ್ತರಿಸಿ ಪೋನ ಇಟ್ಟಳು. ಹೊರಗಡೆ ಗೋಧೂಳಿ ಮುಹೂರ್ತದಲ್ಲಿ ಬೆಟ್ಟಗಳ ಹಿಂದೆ ವಿರಮಿಸಹೊರಟ ಸೂರ್ಯನ ಕಿರಣಗಳು ಭತ್ತದ ತೆನೆಗಳ ಮೇಲೆ ಬಿದ್ದು ಬಂಗಾರದ ಬಣ್ಣಕ್ಕೆ ತಿರುಗಿದ್ದವು. ತಣ್ಣಗೆ ಹರಿಯುತ್ತಿದ್ದ ಗೋದಾವರಿ ದಂಡೆಯಲ್ಲಿ ಮೀಯುತ್ತಿದ್ದ ರಾಜಹಂಸಗಳ ಜೋಡಿಯೊಂದು ಇಳಿಸಂಜೆಯ ರಂಗಿನಲ್ಲಿ ರೆಕ್ಕೆಗಳನ್ನು ಲಯವಾಗಿ ಬಡಿಯುತ್ತಾ ಮುಗಿಲಿಗೆ ಹಾರಿ ಸಾಗಿದಾಗ, ಅಲ್ಲಿ ನೆಲೆ ನಿಂತ ಮನಮೋಹಕ ವಾತಾವರಣವು ಭಾರತಿಯ ಮೊಗದಲ್ಲಿ ಹೊನ್ನಿನ ಕಳೆ ತಂದಿತ್ತು. ಅವಳ ಕಣ್ಣುಗಳ ಬಿಂಬಗಳಲ್ಲಿ ಜೋಡಿ ಹಕ್ಕಿಗಳು ಒಂದಕ್ಕೊಂದು ರೆಕ್ಕೆಗಳನ್ನು ಬಿಗಿದು ಹಾರುತ್ತಿರುವ ದೃಶ್ಯ ಮೂಡಿತ್ತು.



(ಕೈಗಾ ಅಣುವಿದ್ಯುತ್ ಕೇಂದ್ರದ ಉದ್ಯೋಗಿಯಾಗಿರುವ ಲೇಖಕರು ಹವ್ಯಾಸಿ ಪತ್ರಕರ್ತ, ಕ್ರೀಡಾ ಸಂಘಟಕ ಮತ್ತು ಕಥೆಗಾರ)

ನವಿಲುಗರಿ

(ಕೇಶವ ಮಳಗಿಯವರು ಅನುವಾದಿಸಿರುವ
ದೈವಿಕ ಹೂವಿನ ಸುಗಂಧ ಕವನ ಸಂಕಲನದಿಂದ)

ವೆಂಕಟದ ಚೆಲುವ

ಆಕಾಶದುದ್ದಕ್ಕೂ ನೀಲಿ ಬಟ್ಟೆಯಂತೆ
ದಟ್ಟೈಸಿವೆ ಮೋಡಗಳು.
ತಿರುಮಲದ ಚೆಲುವ ವೆಂಕಟನೆ,
ತಣ್ಣಗಿನ ಹೊಳೆ ಹರಿದು
ನಿನ್ನ ಬಳಿ ಬಂದಿತೇನು?
ತುಂಬಿದ ಕಣ್ಣೀರು ಹರಿಯುತಿದೆ
ನನ್ನೆದೆ ನಡುವೆ ಜಲಪಾತದಂತೆ.
ಅವನಿಂದ ಮೂರಾಬಟ್ಟೆ ನನ್ನ ಹೆಣ್ತನ,
ಅದೇನು ಹೆಚ್ಚಿಸದು ಅವನ ಘನತೆ.

*

ಬಿಳಿಯ ಮುತ್ತುಗಳ ಚೆಲ್ಲುವ ಮೋಡಗಳೆ,
ಕಪ್ಪು ಚೆಲುವ ವೆಂಕಟನು
ನಿಮ್ಮೊಂದಿಗೆ ಯಾವ
ಸಂದೇಶವನು ಕಳಿಸಿರುವನು?
ಬಯಕೆಯ ಬೆಂಕಿ ದೇಹವನು
ಸುಡುತಿದೆ, ಬೇಯುತ್ತಿರುವೆ ನಾನು.
ದಟ್ಟಿರುಳಲಿ ಕುಳಿತಿರುವೆ ಎಚ್ಚರಾಗಿ
ದಕ್ಷಿಣದ ಥಂಡಿಗಾಳಿಗೆ ಅಹುತಿಯಾಗಿ.

*

ಎಷ್ಟು ಸುಲಭದಲಿ ಎಲ್ಲ ಬಿಟ್ಟುಹೋದರು ನನ್ನ,
ನನ್ನ ಮೆರುಗು, ಬಳೆ, ವಿಚಾರ, ನಿದ್ರೆ ಎಲ್ಲ
ನಾನು ಮುಳುಗಿ ಹೋದೆ!
ಸಹಾನುಭೂತಿ ತೋರಿ ಮೋಡಗಳೇ,
ಜಲಪಾತ ಹರಿವ ವೆಂಕಟದ ಗೋವಿಂದನ
ಮಹಿಮೆಗಳ ಹಾಡುವೆ.
ಆದರೆಷ್ಟು ದಿನ ಹಾಡು ನನ್ನ ಸಲುಹುದು?

*

ಮಿಂಚುಗುಡುಗಿಂದ ಹೊಳಪುತ್ತಿರುವ ಮೋಡಗಳೆ,
ಸಿರಿ ಲಕುಮಿಯ ಎದೆಯ ಮೇಲೆ ಪವಡಿಸಿಹ
ಬೆಟ್ಟದ ವೆಂಕಟಿಗನಿಗೆ ಹೇಳಿ:
'ನನ್ನ ಕೋಮಲ ಮೊಲೆ ತೊಟ್ಟುಗಳು
ಮೆದುವಾದ ಆತನೆದೆಯನು
ತಬ್ಬಿಕೊಳ್ಳಲು ಪ್ರತಿನಿತ್ಯ ಹಾತೊರೆಯುತಿವೆ.'

*

ಮಹಾ ಮೋಡಗಳೆ, ಏರಿ ಆಕಾಶದೆತ್ತರಕೆ
ಸುರಿಸಿ ಭಾರಿಮಳೆಯನು, ಪರಿಮಳ ತುಂಬಿದ
ಹೂಗಳನು ಹರಿಸಿ ವೆಂಕಟದ ಮೇಲೆ.
ಹಿರಣ್ಯಕಶಿಪುವನು ತನ್ನ ಉಗುರಿಂದ
ಬಗೆದು ಕೊಂದವನಿಗೆ ಹೇಳಿ:
'ಹೊತ್ತೊಯ್ದು ಕಿವಿಯ ಬೆಂಡೋಲೆಗಳ
ಮರಳಿಸು', ಎಂದು.

–ಆಂಡಾಳ್
(೭ನೆಯ ಶತಮಾನದ ತಮಿಳು ಭಕ್ತಿ ಕವಯತ್ರಿ)

ಎಂಥಾ ಬೆರಗು!


ಬೆಂಕಿಯ ನಡುವೆ ಹೂತೋಟ!
ಎಂಥ ರೂಪವನೂ ಧರಿಸಬಲ್ಲುದು
ನನ್ನ ಮನಸು:
ಜಿಂಕೆಗಳಿಗೆ ಹುಲ್ಲುಗಾವಲು
ಸನ್ಯಾಸಿಗಳಿಗೆ ಮಠ
ಮೂರ್ತಿಗಳಿಗೆ ಪೂಜಾಭೂಮಿ
ಪ್ರದಕ್ಷಿಣಾ ಯಾತ್ರೆಗೆ ಕಾಬಾ







(ಚಿತ್ರಗಳು: ಹಜರತ್ ಅಲಿ)



ತೋರಾದ ಕೋಷ್ಟಕ
ಕುರಾನಿನ ಓಲೆಗರಿ.

ಪ್ರೀತಿಧರ್ಮವೇ ನನ್ನ ಸಿದ್ಧಾಂತ.
ಈ ಪಯಣದ ಕಾರವಾನ್ ಎಲ್ಲೆಲ್ಲಿ ಸುತ್ತುವುದೋ
ಆ ನಂಬಿಕೆ
ಆ ಶ್ರದ್ಧೆಯ
ನಾನುಳಿಸಿಕೊಳುವೆ.

–ಮೊಹಿನುದ್ದೀನ್ ಇಬ್ನೆ. ಅರಬಿಶೇಕ್ ಅಲ್ ಅಕ್ಬರ್
(೧೨ನೇ ಶತಮಾನದ ಸೂಫಿ ಕವಿ)

ಮಧುಪಾತ್ರೆಯ ಪುನರಾವರ್ತನೆ

ಸಾಕಿ ತಂದ ಮದಿರೆಯನ್ನು ನಾವೆಲ್ಲ ಸವಿದೆವು,
ಮಧುಶಾಲೆಯೂ ಅವನದೆ, ಸಗ್ಗಕ್ಕಿಂತ ಮಿಗಿಲು.

ಸಾಕಿಯನ್ನ ಸೇವಿಸುವ ಮದಿರಾಸಕ್ತರು ನಾವು,
ನಮ್ಮ ಆತ್ಮಗಳೆಲ್ಲ ಅವನ ಮದಿರೆಯ ಬಟ್ಟಲು.

ಆ ಬೆಂಕಿಗೂ ಈ ಬೇಗೆಗೂ ಹೋಲಿಕೆಯು ಇಲ್ಲ,
ಉರಿವ ಅಲೆಗಳು ಹೊರಗಂತೂ ಕಾಣುವುದಿಲ್ಲ

ಮಧುಶಾಲೆಯ ಕುಡುಕರು ಹಾಡುವುದೊಂದೆ:
'ನಾನೇ ಸತ್ಯ'!
ಇಲ್ಲಿರುವವರು ನೂರಾರು 'ಹಲ್ಲಾಜ'ರು,
ಕರೆವುದವರನು–ಹುಚ್ಚ!

ಮಧುಶಾಲೆಯ ಜನರ ಹೃದಯವೆಲ್ಲ ಕಬಾಬು,
ಒಳಗಿದೆ ಉರಿವ ದೀಪ, ಸೂರ್ಯಚಂದ್ರ ಚಿಟ್ಟೆಗಳು.

ಬಂದು ನೋಡು ಪ್ರೀತಿಯ ಮದಿರೆಯ ಕುಡಿದವರನ್ನು
ಕಳೆದವೆಷ್ಟೋ ವರ್ಷ, ಮಧುಪಾತ್ರೆ ನಿಲ್ಲಿಸಿಲ್ಲ
ಪುನರಾವರ್ತನೆಯನ್ನು.

–ಯೂನಸ್ ಎಮರೆ, ಸೂಫಿ ಕವಿ.

ಏಕಾಂಗಿ ಹಂಸ

ಹಾರಿಹೋಹುದು ಹಂಸ ಏಕಾಂಗಿ,
ಈ ಜಗವು ತೋರಿಕೆಯ ಸಂತೆ.

ಮರದಿಂದ ಎಲೆಯೊಂದು ಉದುರಿದಾಗ,
ಮತ್ತೊಮ್ಮೆ ಮಿಲನವು ಸುಲಭವಲ್ಲ,
ಬೀಳವುದು ಎಲ್ಲೆಂಬ ಅರಿವಿಲ್ಲ,
ಗಾಳಿ ಬೀಸುತಿದೆಯಲ್ಲ!

ದೂತ ಬರುವನು ಮುಗಿದಾಗ ನಿನ್ನ ಅವಧಿ
ನೀನು ಸೆಣೆಸಲೆ ಬೇಕು ಸಾವಿನೊಂದಿಗೆ ಆಗ.

ಹಾಡುವನು ಕಬೀರದಾಸ, ಹರನ ಗುಣಗಳನು
ಆತನ ಗಡಿಗಳನು ನಾವು ಕಂಡವರಲ್ಲ.
ಗುರುವಿನ ಕರಮವ ಗುರುವೇ ಬಲ್ಲ
ಶಿಷ್ಯನ ಕರ್ಮವನು ಅವನೇ ಬಲ್ಲ.

ಹಾರಿಹೋಹುದು
ಹಂಸ ಏಕಾಂಗಿ,
ಈ ಜಗವು ತೋರಿಕೆಯ ಸಂತೆ

–ಕಬೀರ

ಕನ್ನಡ, ಕನ್ನಡಿಗ, ಕನ್ನಡ ಮಾಧ್ಯಮ, 'ಕನ್ನಡ ಮೀಡಿಯಂ' ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

ಕನ್ನಡ ಕಷ್ಟವೆಂದು ಹೇಳಿದವರನ್ನು ಕಳೆದ ಇಪ್ಪತ್ತು ವರ್ಷಗಳ ಹಿಂದಿನವರೆಗೆ ನಾನು ಎಂದೂ ಕಂಡಿರಲಿಲ್ಲ. ಒಮ್ಮೆ ಬೆಂಗಳೂರು ಕೇಂದ್ರಿತ ಸಾಹಿತಿ–ಬುದ್ಧಿಜೀವಿಗಳ ಸಣ್ಣ ಗುಂಪೊಂದು ತಲೆಕೆಳಗಾದ 'ಪ್ರಗತಿಪರತೆ'ಯ ಕಿರೀಟ ಹೊತ್ತು ಜಾತಿ ಕಣ್ಣುಗಳಿಂದ ಭಾಷೆಯನ್ನು ನೋಡತೊಡಗಿ ಕನ್ನಡ ಶಾಲೆಗಳು ಹಿಂದುಳಿದವರ ಮತ್ತು ದಲಿತರ ಮಕ್ಕಳ ಲೌಕಿಕ ಏಳಿಗೆಗೆ ಕಂಟಕಪ್ರಾಯವಾಗಿವೆ ಎಂಬ ಹೊಸ ಶೈಕ್ಷಣಿಕ ಪ್ರಮೇಯವನ್ನು ಮಂಡಿಸತೊಡಗಿದಾಗ ಇದ್ದಕ್ಕಿದ್ದಂತೆ ಹಲವರ ಕಣ್ಣಿಗೆ ಕನ್ನಡ ಕಲಿಕೆ ಕಷ್ಟವಾಗಿ ಕಾಣತೊಡಗಿತು. ಮಹಾಪ್ರಾಣ, ಶ–ಷಕಾರಗಳು, ಅರ್ಕಾವತ್ತು ವಟರಸುಳಿಗಳೂ ನಮ್ಮವಲ್ಲ ಎಂಬ ಸಂಶೋಧನೆಗಳು ಪ್ರಚಾರಕ್ಕೆ ಬರತೊಡಗಿದವು. ಶಂಕರ ಬಟ್ ಅವರ ಬಾಶಾ ಪ್ರಕಾಶನದ (ಬಾಶಾ ಎಂದೊಡನೆ ದಯವಿಟ್ಟು ಇದು ಯಾರೋ ಮುಸಲ್ಮಾನರ ಕರಾಮತ್ತು ಎಂದು ಭಾವಿಸಬೇಡಿ!) ಕನ್ನಡಕ್ಕೆ ಕನ್ನಡದ್ದೇ ಆದ ವ್ಯಾಕರಣ ಬೇಕು' ಇತ್ಯಾದಿ ಅಪ್ಪಟ ಶುದ್ಧ ತುಪ್ಪ ಮಾರುವ ವ್ಯಾಪಾರಿ ಘೋಷಣೆಯ ರೀತಿಯ ಅಪ್ಪಟ ಶುದ್ಧ ಕನ್ನಡದ ಹೆಸರಿನಲ್ಲಿ ಸಿದ್ಧಾಂತಗಳು ಪ್ರಚಾರಕ್ಕೆ ಬಂದವು. ಭಾಷೆಯೊಂದರ ಪರಿಶುದ್ಧತೆ ಎಂದರೆ ಏನು ಎಂಬ ಕಲ್ಪನೆಯೇ ಇಲ್ಲದ ಈ ನುಡಿ ಪ್ರವೀಣರು ಅಂತೂ ಜಾಗತೀಕರಣದ ವ್ಯಾಪಾರಿ ಬುದ್ಧಿಗೆ ಶರಣಾದ ನಮ್ಮ ಜನರ ದೌರ್ಬಲ್ಯವನ್ನು ಬಳಸಿಕೊಂಡು ಕನ್ನಡವನ್ನು ಕನ್ನಡಿಗರಿಗೇ ಕಷ್ಟವೆಂದು ಮನಗಾಣಿಸಿ ಶಿಕ್ಷಣದಲ್ಲಿ ಕನ್ನಡದ ಸ್ಥಾನ ಮತ್ತು ಮಾನವನ್ನು ಹರಾಜು ಹಾಕುವಲ್ಲಿ ಯಶಸ್ವಿಯಾದರು. ಇಂಥ ವಿಕ್ಷಿಪ್ತ ಪ್ರಯತ್ನ ಇಷ್ಟು ಯಶಸ್ವಿಯಾಗಿ ಜಗತ್ತಿನ ಯಾವ ಭಾಷಾ ವಲಯದಲ್ಲೂ ನಡೆದಿರಲಾರದು.

ಸಕಲೆಂಟು ಜಾತಿಗಳೂ ಇದ್ದ ನನ್ನ ಶಾಲಾ ದಿನಗಳ ಸಹಪಾಠಿ ಸಮೂಹದಲ್ಲಿ ಯಾರೂ ಎಂದೂ ಕನ್ನಡ ಕಷ್ಟ ಎಂದು ಹೇಳಿದ್ದೇ ನೆನಪಿಲ್ಲ. ಹೌದು ಇವರಲ್ಲಿ ಕೆಲವರು ಒಮ್ಮೊಮ್ಮೆ ಮಹಾಪ್ರಾಣ ಮತ್ತು ಶ–ಷಕಾರಗಳನ್ನು ಉಚ್ಚರಿಸುವಲ್ಲಿ ಎಡವುತ್ತಿದ್ದರು. ಆದರೆ ಇದು ಹಲವು ಮೇಲ್ಜಾತಿ ಗೆಳೆಯರಲ್ಲಿ ಮಾತ್ರವಲ್ಲ ಒಮ್ಮೊಮ್ಮೆ ನಮ್ಮ ಕನ್ನಡ ಪಂಡಿತ ಮೇಷ್ಟ್ರಲ್ಲೂ ಕಂಡುಬರುತ್ತಿತ್ತು! ಹಾಗಾಗಿ ನಾವು ಉಚ್ಚಾರ ದೋಷಗಳನು–ಅವು ಕೆಲವೊಮ್ಮೆ ಎಡೆ ಕೊಡುತ್ತಿದ್ದ ತಮಾಷೆಯ ಪ್ರಸಂಗಗಳನ್ನು ಬಿಟ್ಟರೆ–ವಿಶಿಷ್ಟ ಉಚ್ಚಾರ ಶೈಲಿಗಳೆಂದೇ ಪರಿಗಣಿಸಿ ಕನ್ನಡ ಕಲಿತಿದ್ದೆವು. (ಹೊಲೇರ) ವೆಂಕಟರಮಣ 'ಸತ್ಯ ಹರಿಶ್ಚಂದ್ರ' ಸಿನಿಮಾದ ಸಂಸ್ಕೃತ ಭೂಯಿಷ್ಠ ಹಾಡುಗಳನ್ನೂ, ದೊಡ್ಡಬೆಲೆಯ ಷರೀಫ ಸೋಮೇಶ್ವರರ ಶತಕದ ಪದ್ಯಗಳನ್ನು ಹಾಡುತ್ತಿದ್ದಾಗ ನಮ್ಮ ಶಾಲೆಯ ಸಂಸ್ಕೃತ ಪಂಡಿತರಾಗಿದ್ದ ಮಧ್ವೇಶಾಚಾರ್ಯರೂ ಒಮ್ಮೆ ನಿಂತು ಕೇಳಿ ತಲೆದೂಗಿ ಮುಂದುವರೆಯುತ್ತಿದ್ದರು. ಈ ಸಂಬಂಧ ನಾನು ಯಾವಾಗಲೂ ಹೇಳುವ ಮಾತೊಂದಿದೆ: ಕಾಳಿದಾಸನ 'ಮಾಣಿಕ್ಯವೀಣಾ...' ಶ್ಲೋಕವನ್ನು ರಾಜ್‌ಕುಮಾರ್ ಹಾಗೆ ಹಾಡಿದ ಮೇಲೆ ಭಾಷೆಗೆ ಜಾತಿ ಎಲ್ಲಿ ಬಂತು? ಹಾಗೆ ನೋಡಿದರೆ, ನಮ್ಮ ಕಾಲದಲ್ಲಿ ಪದೇ ಪದೇ ಕೇಳಿ ಬರುತ್ತಿದ್ದ ಕೂಗೆಂದರೆ ಇಂಗ್ಲಿಷ್ ಕಡ್ಡಾಯ ಬೇಡ ಎಂಬುದು!

ರಾಮಕೃಷ್ಣ ರಾಮಕುಷ್ಣನಾದಾಗ...

ಇದೆಲ್ಲವನ್ನೂ ಈಗ ಇಲ್ಲಿ ನೆನಪಿಸಿಕೊಳ್ಳಲು ಕಾರಣವಾದದ್ದು ಮೊನ್ನೆ ಶಂಕರ ಬಟ್‌ರ ಅನುಯಾಯಿಯೊಬ್ಬರಿಂದ ನನಗೆ ಬಂದ ಪುಸ್ತಕದಲ್ಲಿ ರಾಮಕುಷ್ಣ ಎಂಬ ಪದವನ್ನು ಕಂಡಾಗ ಆ ಪದ ಮಾತ್ರವಲ್ಲ, ಆ ಹೆಸರಿನ ವ್ಯಕ್ತಿಯೇ ಅಂಗವಿಕಲನಂತೆ ನನಗೆ ಕಂಡಾಗ. ಪ್ರಾಮಾಣಿಕವಾಗಿ ಹೇಳುತ್ತೇನೆ–ದಯವಿಟ್ಟು ನೀವು ಕೂಡ ಅಷ್ಟೇ ಪ್ರಾಮಾಣಿಕವಾಗಿ ಯೋಚಿಸಿ ಹೇಳಿ: ರಾಮಕೃಷ್ಣ ಮತ್ತು ರಾಮಕುಷ್ಣ ಇವುಗಳ ನಡುವಣ ಸಾಮಾನ್ಯ ಜನರ ಉಚ್ಚಾರಗಳ ಮಧ್ಯೆ ನೀವು ಎಷ್ಟು ವ್ಯತ್ಯಾಸ ಗುರುತಿಸಬಲ್ಲಿರಿ? ಗುರುತಿಸಿದರೂ ಅದರಿಂದ ಯಾವ ಉಪಯೋಗ? ಇನ್ನು ರಾಮಕೃಷ್ಣ ಬರೆಯುವುದು ಸುಲಭವೋ, ರಾಮಕುಷ್ಣ ಎಂದು ಬರೆಯುವುದು ಸುಲಭವೋ? ವಿರೂಪಾಕ್ಷ ಇರಪಕ್ಸಿ ಆಗುವುದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಅದು ಜನರ ಉತ್ಪತ್ತಿ, ಆದರೆ ಅದನ್ನು ವಿರೂಪಾಕ್ಸ ಮಾಡುವುದು ವಿಕೃತಿಯೇ ಸರಿ. ಷ ನಿಮಗೆ ಏನು ತೊಂದರೆ ಕೊಡುತ್ತಿದೆ? ಅಕ್ಷರ ಮಾಲೆ ಮಧ್ಯದ ಆಭರಣದಂತೆ ಅದರ ಪಾಡಿಗೆ ಅದು ಇರಲಿ ಬಿಡಿ, ಹಾಗೇ ಅರ್ಕಾವತ್ತು ಕೂಡ. ಮಹಾಪ್ರಾಣಗಳಿಲ್ಲದೆ ಕನ್ನಡವನ್ನೊಮ್ಮೆ ಬರೆದು ನೋಡಿ, ಕನ್ನಡದ ಅರ್ಥ ಸೊಬಗೇ (ಬಹುಶಃ ಅರ್ಥಕೋಶವೂ) ಅಸ್ತವ್ಯಸ್ತಗೊಳುತ್ತದೆ.

ಹಾಗಾದರೆ ಕನ್ನಡವನ್ನು ಹಣಿಯುವ ಈ ಕಾರ್ಯಕ್ರಮದ ಉದ್ದೇಶವಾದರೂ ಏನು? ಉಚ್ಚಾರ ಮತ್ತು ಕಾಗುಣಿತದ ಕಷ್ಟಗಳಿಂದ ಸಾಮಾಜಿಕವಾಗಿ ಹಿಂದುಳಿದವರನ್ನು ಪಾರು ಮಾಡುವುದೇ ಇವರ ಉದ್ದೇಶವಾಗಿದ್ದರೆ ಇವರು ಇಂತಹವರ ಮನೆಗಳಿಗೆ ಹೋಗಿ ಅವರು ತಮ್ಮ ಮಕ್ಕಳನ್ನೋ, ಮೊಮ್ಮಕ್ಕಳನ್ನೋ ಅಬಿಸೇಕಾ, ರೇಸ್ಮಾ, ಸಿಕಾ ಮುಂತಾಗಿ ಕೂಗುವುದನ್ನು ಕಿವಿ ತುಂಬಿಕೊಂಡು ಮತ್ತು ಆ ಮಕ್ಕಳಿಂದ 'ಕೃಪಾಕಟಾಕ್ಷ'ವನ್ನು 'ಕುಪಾಕಟಾಕ್ಸ' ಎಂದು ಬರೆಸಲು ಯತ್ನಿಸಿ ಸುಸ್ತಾಗಿ ಬರಬಹುದು. ಬಹುಶಃ ಇಂತಹ ವಿಕ್ಷಿಪ್ತ ವಾತಾವರಣದಿಂದಾಗಿಯೇ ಕರ್ನಾಟಕದಲ್ಲಿ ಶಿಕ್ಷಣದ ಯಾವ ಹಂತದಲ್ಲೂ ಕನ್ನಡ ಬೇಡವೆಂಬ ಅರ್ಜಿಗಳು ಇಂದು ನಮ್ಮ ನ್ಯಾಯಾಲಯಗಳಲ್ಲಿ ಹೆಚ್ಚೆಚ್ಚು ದಾಖಲಾಗುತ್ತಿವೆ. ಮೊಲೆಹಾಲು ನಂಜಾಗುವ ಕಾಲ ಎಂದರೆ ಇದೇ ಇರಬಹುದು.

ಕನ್ನಡವನ್ನು ಸಂಸ್ಕೃತದ ಪ್ರಭಾವದಿಂದ ಪಾರು ಮಾಡಬಯಸುವ ಈ ಸಾಮಾಜಿಕ ನ್ಯಾಯವಾದಿಗಳು ಅದನ್ನು ಇಂಗ್ಲಿಷ್ ದೇವಿಯ ಆಲಿಂಗನಕ್ಕೆ ತಳ್ಳತೊಡಗಿರುವುದನ್ನು ನಾವು ನೋಡಬಹುದು. ಜನ ಬಳಸುವ ನಮ್ಮದೇ ಶಬ್ದಗಳಿದ್ದರೂ, ಬರವಣಿಗೆಯಲ್ಲಿ ಡಿಸ್ಟರ್ಬ್, ಕಾಂಪ್ಲಿಕೇಟ್, ಫೋಕಸ್, ಕ್ಲಿಯರ್ ಹೀಗೆ ಯಾವುದೇ ಎಗ್ಗಿಲ್ಲದೆ ಕನ್ನಡ ಜಾಯಮಾನಕ್ಕೆ ಹೊಂದದ ಶಬ್ದಗಳನ್ನು ಪುಂಖಾನುಪುಂಖವಾಗಿ ಬಳಸುವುದನ್ನು ನೋಡಿದರೆ ಇವರಿಗೆ ಕನ್ನಡದ ಜನಕ್ಕೆ ಕನ್ನಡವನ್ನು ಸುಲಭ ಮಾಡುವುದಕ್ಕಿಂತ ಅದನ್ನು ವಿಕ್ಷಿಪ್ತಗೊಳಿಸಿ ನಾಶ ಮಾಡುವುದೇ ಉದ್ದೇಶವಾಗಿರುವಂತೆ ತೋರುತ್ತದೆ. ಜಾಗತೀಕರಣ ರಾಜಕಾರಣದ ಅತ್ಯಂತ ಅಪಾಯಕಾರಿ ಮತ್ತು ಹೇಯ ಆಟವಾದ ದೇಶೀಯರು ತಮ್ಮ ಬಗ್ಗೆ ತಾವೇ ಅಸಹ್ಯಪಟ್ಟುಕೊಂಡು ಅನ್ಯರಾಗುವ ಬಯಕೆಯ ರೋಗಕ್ಕೆ ಕನ್ನಡಿಗರನ್ನು ಬಲಿಗೊಡಲು ಇವರು ಹೊರಟಂತಿದೆ.

ಕನ್ನಡ ಮೀಡಿಯಂ'ನಲ್ಲಿ 'ಗಾಂಧಿ ಕಥನ'



ಪತ್ರಕರ್ತ ಮತ್ತು ರಂಗಕರ್ಮಿ ಗೆಳೆಯ ಹೊನ್ನಾಳಿ ಚಂದ್ರಶೇಖರ್ ಈಗ ಶಿವಮೊಗ್ಗದಿಂದ 'ಕನ್ನಡ ಮೀಡಿಯಂ ೨೪ X ೭' ಎಂಬ ಸ್ಥಳೀಯ ಟಿವಿ ವಾಹಿನಿಯೊಂದನ್ನು ಆರಂಭಿಸಿದ್ದಾರೆ. ಇದರಲ್ಲಿ ಸದ್ಯಕ್ಕೆ ಮುಖ್ಯವಾಗಿ ಸುದ್ದಿ, ಸಂದರ್ಶನ, ಚರ್ಚೆ, ಸುಗಮ ಮತ್ತು ಚಿತ್ರ ಸಂಗೀತ ಬಿತ್ತರವಾಗುತ್ತಿದ್ದು ಇದನ್ನು ಸದ್ಯಕ್ಕೆ ಕೇಬಲ್ ಟಿವಿ ಸಂಪರ್ಕವಿರುವ ಶಿವಮೊಗ್ಗದ ಜನತೆ ನೋಡಬಹುದು. ಕೆಲ ಮುಖ್ಯ ಕಾರ್ಯಕ್ರಮಗಳು ಯೂ–ಟ್ಯೂಬ್‌ನಲ್ಲೂ ಲಭ್ಯ. ವಾಹಿನಿಯ ವೀಕ್ಷಣೆ ಮತ್ತು ವಾಣಿಜ್ಯ ಹೆಚ್ಚಿದಂತೆ ಇದರ ಕಾರ್ಯಕ್ರಮ ವೈವಿಧ್ಯ ಪ್ರಸಾರ ವ್ಯಾಪ್ತಿಯೂ ಹೆಚ್ಚಲಿದೆಯಂತೆ. ಮಧ್ಯಮವರ್ಗಕ್ಕೆ ಸೇರಿದ ಈ ಗೆಳೆಯನ ಈ ಸಾಹಸವನ್ನು ನಾನು ದುಸ್ಸಾಹಸವೆಂದೇ ಕರೆದಿದ್ದೇನಾದರೂ, ನನ್ನ ಶುಭ ಹಾರೈಕೆಗಳೂ ಅವರ ಜೊತೆಗಿದೆ.

ಈ ವಾಹಿನಿಯ ಇನ್ನೊಂದು ವಿಶೇಷವೆಂದರೆ, ಇದರಲ್ಲಿ ನನ್ನ 'ಗಾಂಧಿ ಕಥನ' ಕೃತಿ ಧಾರಾವಾಹಿಯಾಗಿ ಪ್ರಸಾರವಾಗುತ್ತಿದೆ. 'ಹೊಸ ಮನುಷ್ಯ' ಪತ್ರಿಕೆ ಓದುಗರಿಗೆ ಪರಿಚಯವಿರುವ ಟಿ.ಎಲ್.ರೇಖಾಂಬ ಇದನ್ನು ಬಹು ಭಾವಪೂರ್ಣವಾಗಿ ಪ್ರಸ್ತುತಪಡಿಸುತ್ತಿದ್ದಾರೆ. ಇದು ಪ್ರತಿ ರಾತ್ರಿ ೮.ಕ್ಕೆ ಮತ್ತು ಮಾರನೆಯ ಬೆಳಿಗ್ಗೆ ೮ಕ್ಕೆ ಮರುಪ್ರಸಾರವಾಗುತ್ತದೆ. ಆಸಕ್ತರು ಯೂ–ಟ್ಯೂಬ್‌ನಲ್ಲೂ ಇದನ್ನು ವೀಕ್ಷಿಸಬಹುದು.

ಅಪೂರ್ಣತೆ ಎದುರಿಸುವ 'ಬುದ್ಧನ ಕಥೆಗಳು'




ಕೆ.ಎಂ. ಶಂಕರಪ್ಪ ನಮ್ಮ ಕಾಲದ ಮತ್ತು ನಮ್ಮ ಗೆಳೆಯರ ಬುದ್ಧಗುರುವೆಂದೇ ಹೆಸರಾದವರು. ಅವರ ಧ್ಯಾನ ಕಾಲದ 'ಅಪ್ಪಣೆ'ಯಂತೆ ಅವರ ಪ್ರಿಯ ಶಿಷ್ಯರಲ್ಲೊಬ್ಬರಾದ ಜಿ.ವಿ. ಆನಂದಮೂರ್ತಿಯವರು 'ಬುದ್ಧನ ಕಥೆಗಳು' ಎಂಬ ಕಿರು ಪುಸ್ತಕ ಬರೆದಿದ್ದಾರೆ. (ಪ್ರೀತಿ ಪುಸ್ತಕ ಪ್ರಕಾಶನ: ೯೮೪೫೨೦೦೭೪೭) ಬುದ್ಧ ಹೇಳಿದ, ನಮಗೆ ಸುಪರಿಚಿತವೇ ಆಗಿರುವ ಸರಳ ಸತ್ಯಗಳನ್ನು ಇಲ್ಲಿ ಕಥಾ ಆವರಣಗಳೊಂದಿಗೆ ಪ್ರಸ್ತುತಪಡಿಸಲಾಗಿದ್ದು, ಪುಸ್ತಕ ಸುಂದರವಾಗಿ ವಿನ್ಯಾಸಗೊಂಡು ಹೊರಬಂದಿದೆ. ಲೇಖಕರು ಬುದ್ಧನ ಸತ್ಯಗಳ ಸರಳತೆಗೆ ಅನುಗುಣವಾದ ಭಾಷೆಯ ಸರಳತೆಯನ್ನೂ, ತಂಗಾಳಿಯ ತಂಪನ್ನು ಸಾಧಿಸಿರುವುದು ಈ ಪುಸ್ತಕದ ಹೆಗ್ಗಳಿಕೆಯಾಗಿದ್ದು, ಇದರ ಓದು ಒಂದು ಪ್ರಸನ್ನತೆಯ ಅನುಭವ ಕೊಡುವುದಾರೂ ಈ ಕಾಲಕ್ಕೆ ಅವುಗಳು ಉಪಪ್ರಶ್ನೆಗಳನ್ನು ಉಳಿಸುವ ಅಪೂರ್ಣತೆಗಳಿಗೆ ಸಿಕ್ಕಿವೆ ಎಂದೇ ಹೇಳಬೇಕು. ಉದಾ: ಜಾತಿ ಪದ್ಧತಿ ಕುರಿತ ಬುದ್ಧನ 'ಎಲ್ಲ ಮನುಷ್ಯರೂ ಹುಟ್ಟುವುದು ಒಂದೇ ರೀತಿ' ಎಂಬ ಸತ್ಯ ಎಲ್ಲರಿಗೂ ಗೊತ್ತಿದ್ದರೂ ಜಾತಿ ಪದ್ಧತಿ ಏಕೆ ಇನ್ನೂ ಅಸ್ತಿತ್ವದಲ್ಲಿದೆ? ಈ ಪುಸ್ತಕದ ಇನ್ನೊಂದು ದೌರ್ಬಲ್ಯವೆಂದರೆ ಕಥೆಗಳ ಮಧ್ಯೆ ಬುದ್ಧನ ಕುರಿತ ಶಿಫಾರ್ಸುಗಳಂತೆ ಕಾಣುವ, ಶಾಂತಿಯ ಕಡಲು, ಕರುಣಾಮೂರ್ತಿ ಇತ್ಯಾದಿ ವರ್ಣನೆಗಳು ಮತ್ತು ಇಂತಹ ಆವಾಹಿತ ಉಪಸಂಹಾರಗಳು: 'ಬುದ್ಧದೇವನ ಮಾತುಗಳು ಸಂಜೆಯ ದೀಪದಂತೆ ಅಲ್ಲಿ ನೆರೆದಿದ್ದ ಎಲ್ಲರಲ್ಲಿಯೂ ಅರಿವಿನ ಬೆಳಕನ್ನು ಹರಡಿತು.' ತಾವು ಬರೆಯುತ್ತಿರುವುದು ಸಂದೇಹವಾದಿ ಆಧುನಿಕ ಓದುಗರಿಗಾಗಿ ಎಂಬುದನ್ನು ಲೇಖಕರು ಮರೆತಂತಿದೆ.

–ಡಿಎಸ್ಸೆನ್

ಪುಸ್ತಕಾವಲೋಕನ

ಪು: ಓದೋರಂಗ! ಲೇ:ತುಂಬಾಡಿ ರಾಮಯ್ಯ ಪ್ರ: ಭೂಮಿ–ದಿ ಸೆಂಟರ್ ಫಾರ್ ಆರ್ಟ್ ಸ್ಟಡೀಸ್, ಬೆಂಗಳೂರು.(೯೮೪೪೧೫೭೯೮೨) ಪು:೧೭೨ ಬೆ:ರೂ.೧೮೦/–

ಅತ್ಯುತ್ತಮದೊಂದಿಗೆ ಹಸಿ ಸೇರಿದಾಗ



ಈ ಕೃತಿಯ ಮುವ್ವರು(!) ಮುನ್ನುಡಿಕಾರರ ಪೈಕಿ ಇಬ್ಬರು ಇದನ್ನು ಕಾದಂಬರಿ ಎಂದು ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಇದು ಒಂದು ಕೇಂದ್ರ ವಸ್ತುವಿನ ಬೆಳವಣಿಗೆಯ ಕಥನವನ್ನಾಗಲೀ ಅಥವಾ ಅದರ ಸುತ್ತ ಹರಡಿಕೊಳ್ಳುವ ಕಥನವನ್ನಾಗಲೀ ಒಳಗೊಂಡಿರದೆ ಲೇಖಕನ ಅನುಭವಗಳ ಅಸ್ತವ್ಯಸ್ತ ಜೋಡಣೆಯಾಗಿರುವುದರಿಂದ ಇದನ್ನು ಯಾವುದೇ ನಿರ್ದಿಷ್ಟ ಸಾಹಿತ್ಯ ಪ್ರಕಾರದೊಂದಿಗೆ ಗುರುತಿಸುವ ಗೋಜಿಗೆ ಹೋಗದೆ ಸುಮ್ಮನೆ ಓದಿಕೊಂಡು ಹೋಗಬಹುದಾಗಿದೆ. ಕೊನೆಯ ಅಧ್ಯಾಯದಲ್ಲಿ ಲೇಖಕರು ಇದನ್ನೊಂದು ಸಮಗ್ರ ಕೃತಿಯಾಗಿ ಮಾಡಲು ಮಾಡಿರುವ ಹೆಣಗಾಟ ಅನಗತ್ಯವಾಗಿತ್ತು ಎನಿಸುವಷ್ಟು ಅವರ ಈ ಅನುಭವಗಳ ಗುಚ್ಛ ಅವು ಬಿಡಿಬಿಡಿಯಾಗಿರುತ್ತಲೇ ಸಾರ್ಥಕ ಓದಿನ ತೃಪ್ತಿ ಕೊಡುವಂತಿವೆ.

ಮಧುಗಿರಿ ಸೀಮೆಯ ಮಣೆಗಾರ(ಚಮ್ಮಾರಿಕೆ ಕುಲವೃತ್ತಿಯ ಮಾದಿಗರು) ಹಟ್ಟಿಯ ಹಲವು ರಂಗರ ಮಧ್ಯೆ ಓದು ಬರಹ ಕಲಿಯ ಹೊರಟ ಮಲೆರಂಗ ಇಲ್ಲಿ ಓದೋರಂಗನೆಂಬ ಹೆಸರು ಪಡೆದು ಈ ಕೃತಿಯ ಹಿನ್ನೆಲೆಯಲ್ಲಿ ವಿವಿಧ ರೂಪಗಳಲ್ಲಿ ಕ್ರಿಯಾಶೀಲನಾಗಿದ್ದಾನೆ. ವಪ್ಪಾರದ ತುಂಬ ಇಟ್ಟಾಡುವ ಕೋಳಿಗಳು ಇಡುವ ಮೊಟ್ಟೆಗಳು ಮರಿಯಾಗುವ 'ಸೃಷ್ಟಿಕಾರ್ಯ'ದ ಕೌತುಕದ ಅನುಭವ, ಬರಗಾಲದಲ್ಲಿ ಎರಗುವ ದಾರುಣ ಹಸಿವನ್ನು ನೀಗಿಸಲು ಅಪ್ಪ–ಅಮ್ಮ ಪಡುವ ಬವಣೆಯ ಚಿತ್ರಗಳು ಎಲ್ಲೂ ಸ್ವಯಂಮರುಕದ ಮಸಿ ತುಂಬಿಕೊಂಡು ಜುಗುಪ್ಸೆ ಹುಟ್ಟಿಸದೆ ಒಂದು ಹದದ ಭಾವುಕತೆಯ ಬರವಣಿಗೆಯ ಮೂಲಕ ನಮಗೆ ಆಪ್ತವಾಗುತ್ತಾ ಹೋಗುವ ಈ ಕೃತಿ, ಒಮ್ಮೆ ಓದೋರಂಗ ಓದು ಮುಗಿಸಿ ಸರ್ಕಾರಿ ಚಾಕರಿಗೆ ಸೇರಿ (ಬೆಂಗಳೂರೆಂಬ) ಮಾಯಾನಗರಿಯ ಕತೆ ಹೇಳತೊಡಗಿದೊಡನೆ ಹದ ತಪ್ಪಿ (ಲೇಖಕ ಕಾರ್ಮಿಕ ಅಧಿಕಾರಿಯಾಗಿ ಕಂಡ, ಎದೆ ಬಿರಿಯುವ ಹೀರಾಲಾಲ, ಚೆನ್ನಿಕೃಷ್ಣ, ಕಲ್ಲಮ್ಮರ ಪ್ರಸಂಗಗಳೂ ಸೇರಿದಂತೆ) ಸಾಮಾಜಿಕ ವಿಮರ್ಶೆ ಎಂಬ ಸವೆದ ಜಾಡಿಗೆ ಬಿದ್ದು ನಿರಾಶೆ ಹುಟ್ಟಿಸುತ್ತದೆ. ಆದರೆ ಕಥನ ಮತ್ತೆ ಕೆಂಚಮ್ಮನ ಕಥೆಯ ಮೂಲಕ ಗ್ರಾಮ ಮೂಲಕ್ಕೆ ಮರಳಿ ಮುಂದೆ ಕಥೆ ಹೇಳುವ ಸಿರಿಯಮ್ಮ(ಜ್ಜಿ) ಪಾತ್ರದ ಮೂಲಕ ನಗರ ಮತ್ತು ಗ್ರಾಮ ಕಥನಗಳ ಮಧ್ಯೆ ತುಯ್ದಾಡುತ್ತಾ, ಎರಡೂ ಕಡೆಯ ಮನುಷ್ಯ ಬದುಕಿನ ಆಳ–ಎತ್ತರಗಳನ್ನು ಮುಟ್ಟುತ್ತಾ ಕೊನೆಗೆ ಲೇಖಕರ ಅತ್ಯಭಿಮಾನದ ಗುರುವರ್ಯರಾದ (ಮತ್ತು ನಮ್ಮ ಕಾಲದ ಕನ್ನಡ ಸಾಂಸ್ಕೃತಿಕ ಲೋಕದ ದುರಂತ ನಾಯಕನಂತೆ ಕಾಣುವ) ದಿವಂಗತ ಕೆ.ಎಂ. ಶಂಕರಪ್ಪ ಎಂಬ ಅನಾತ್ಮದ ಸನ್ನಿಧಾನವನ್ನು ಸೇರಿ (ಏಕೋ ದೇವನೂರ ಮಹಾದೇವ ಅವರನ್ನುಳಿದು ಇನ್ನೆಲ್ಲ) ಅವರ (ಪರ ಮತ್ತು ಇಹಲೋಕವಾಸಿಗಳಿಬ್ಬರನ್ನೂ ಒಳಗೊಂಡ) ಇಡೀ ಪಟಾಲಂನ ಸಭೆಯಲ್ಲಿ ಹೊಸ ತಲೆಮಾರಿನ ಆಸೆಯಂತಿರುವ ಮಂಗಳೆಯು ಸಭೆಯ "ಓಂ ಮಣೊ ಪದ್ಮೇಹಂ' ಮಂತ್ರಘೋಷದ ಮಧ್ಯೆ ಐಕ್ಯತೆಯ ಸಂದೇಶದೊಂದಿಗೆ ಅಕ್ಷರ ಬೀಜ ಬಿತ್ತನೆ ಮಾಡುವುದರೊಂದಿಗೆ ಶುಭಂ ಹೇಳುತ್ತದೆ.


ನಮ್ಮ ಕಾಲದ ಒಂದು ಪುರಾಣ ಸೃಷ್ಟಿಸಲೆಳಸುವ ಈ ಕಥೆಗಾರಿಕೆಯ ಕಸರತ್ತಿನಲ್ಲಿ ತುಂಬಾಡಿಯವರ ಬರವಣಿಗೆ ಅಲ್ಲಲ್ಲಿ ಕನ್ನಡದ ಅತ್ಯುತ್ತಮ ಬರವಣಿಗೆಯ ಶೃಂಗಗಳನ್ನು ಮುಟ್ಟುವ ಬೆರಗನ್ನೂ ನಾವು ಕಾಣಬಹುದು. ಉದಾ: 'ಕಪಿಲೆಬಾನಿ' ಎಂಬ ಅಧ್ಯಾಯ ಅತ್ಯಂತ ಕೀಳಾದುದೆಂದು ಪರಿಗಣಿಸಲ್ಪಟ್ಟ ಚರ್ಮದ ಕಾಯಕ ಜಗತ್ತಿಗೆ ಜೀವಾಧಾರವಾದ ಅನ್ನಚಕ್ರವನ್ನೇ ತಿರುಗಿಸುತ್ತಿರುವ ಮಹಾನ್ ದರ್ಶನದ ಕಾವ್ಯವಾಗಿ ತನ್ನ ಸಕಲ ಸೌಂದರ್ಯಗಳೊಂದಿಗೆ ಬೆಳೆದು ನಿಂತು ನಿಮ್ಮ ಸಂವೇದನಾ ಲೋಕವನ್ನೇ ಒಮ್ಮೆ ನವೀಕರಿಸಿಬಿಡುತ್ತದೆ. 'ಒಂದಾನೊಂದು ಕಾಲದಲ್ಲಿ', 'ಕದಿರಿಗನ್ನುಣ್ಣಿಮೆ' ಮತ್ತು 'ಹೆಣ್ಣುಮುನಿ' ಅಧ್ಯಾಯಗಳು ಕೂಡ ಅಪರೂಪದ ಕಲೆಗಾರಿಕೆಯ ಉದಾಹರಣೆಗಳು. ಈ ಕಲೆಗಾರಿಕೆಯೇ, ಇಲ್ಲಿನ ನಿರೂಪಣೆಗಳು ತಳವರ್ಗದ ತಾಜಾ ಅನುಭವಗಳೇ ಆದರೂ, ಎಲ್ಲಿಯೂ ಇಂತಹ ನಿರೂಪಣೆಗಳಲ್ಲಿ ಸಾಮಾನ್ಯವಾಗಿ ಕಾಣುವ ಸಾಮಾಜಿಕ ಕಹಿ ಇಲ್ಲ. ದೊಡ್ಡ ಮಟ್ಟದ ಕಲೆಗಾರಿಕೆಗೆ ಮಾತ್ರ ಇದು ಸಾಧ್ಯವಾಗುವ ಹದ. ಇನ್ನು 'ಬೆಳ್ಳಿಲಿ ಬೇಟೆ' ಎಂಬ ಅಧ್ಯಾಯ ತುಂಬಾಡಿಯವರ ಅನುಭವ ವೈವಿಧ್ಯ ಮಾತ್ರ ಸೃಷ್ಟಿಸಬಲ್ಲ ವಿಶಿಷ್ಟ ಹದದ ಲಘುಶೈಲಿಯ ಬರವಣಿಗೆ. ಇವುಗಳ ಜೊತೆಗೆ 'ಗಜಲಕ್ಷ್ಮಿ', 'ನೀಲವ್ವೆ', 'ಗೌಡರಾಳು ಗುಂಡ' ಎಂಬ 'ಹಸಿ' ಬರಹಗಳೂ ಇವೆ ಎಂಬುದನ್ನೂ ಇಲ್ಲಿ ಹೇಳಬೇಕು. ಇಂತಹ ಹಸಿತನವನ್ನು ಕುರಿತ ದೌರ್ಬಲ್ಯವೇ ತುಂಬಾಡಿಯವರು ಈ ಕೃತಿಯಲ್ಲಿ ನಡಿಗೆಯನ್ನು ಬಿಟ್ಟು ಅಲ್ಲಲ್ಲಿ ನೆಗೆದಾಡಿ, ಬರವಣಿಗೆಯ ಅವಿಭಾಜ್ಯತೆಯಿಂದ ವಂಚಿತರಾಗುವಂತೆ ಮಾಡಿರುವುದು.

ಪುಸ್ತಕದ ಪ್ರತಿ ಪುಟದಲ್ಲೂ ತಪ್ಪು ಕಾಗುಣಿತಗಳ ಪದಗಳಿವೆ. ಲೇಖಕರು ಆಡುಮಾತಿನ ಕ್ಲಿಷ್ಟ ಸಂಭಾಷಣೆಯನ್ನೂ ಸರಿಯಾಗಿ ಬರೆಯುವ ಸಾಮರ್ಥ್ಯವನ್ನು ಇಲ್ಲಿ ತೋರಿರುವುದರಿಂದ, ಇದು ಕನ್ನಡ ಶಬ್ದಕೋಶವನ್ನು ಸರಿಯಾಗಿ ಗಮನಿಸದ ಲೇಖಕರ ಔದಾಸೀನ್ಯದ ದ್ಯೋತಕವೇ ಇರಬಹುದೆನ್ನಿಸುತ್ತದೆ.

–ಡಿ.ಎಸ್. ನಾಗಭೂಷಣ

ಪು: **ಅಂಗುಲ ಹುಳುವಿನ ಇಂಚುಪಟ್ಟಿ**(ವಿಮರ್ಶೆ) ಲೇ: **ಆರ್.ತಾರಿಣಿ ಶುಭದಾಯಿನಿ** ಪ್ರ: **ಬಂಡಾರ ಪ್ರಕಾಶನ,** ಮಸ್ಕಿ(೯೮೮೬೪೦೭೦೧೧) ಪು:೧೬೮ ಬೆ:ರೂ.೧೫೦/–

ಮಂದ್ರ ಸ್ವರದ ಮೀಮಾಂಸೆ



ಸಾಹಿತ್ಯ ಪರಂಪರೆಯ ಸೂಕ್ಷ್ಮ ಓದಿನ ಮೂಲಕವೇ ಹೊಮ್ಮಿಸಬಹುದಾದ ಒಳನೋಟಗಳಿಗೆ ತಾರಿಣಿ ಶುಭದಾಯಿನಿಯವರ 'ಅಂಗುಲ ಹುಳುವಿನ ಇಂಚುಪಟ್ಟಿ' ಕನ್ನಡಿ ಹಿಡಿದಿದೆ. ಸಾಹಿತ್ಯದ ಸಂವೇದನೆಯನ್ನು ಅದರ ಬೀಸು ಹಾಗೂ ವಿಸ್ತಾರಗಳಿಂದ ನೋಡುವುದು ಒಂದು ಕ್ರಮವಾದರೆ, ಅದನ್ನು ನಿರ್ಮಿಸುವ ಚಿಕ್ಕಚಿಕ್ಕ ಸಂಗತಿಗಳ ಮೂಲಕ ನೋಡುವುದು ಇನ್ನೊಂದು ಕ್ರಮ. ಇವೆರಡೂ ಪ್ರಕ್ರಿಯೆಗಳು ಸಂಧಿಸುವ ಬಿಂದುವಿನಲ್ಲಿ 'ಅಂಗುಲ ಹುಳುವಿನ ಇಂಚುಪಟ್ಟಿ'ಯಿದೆ.

ಎ.ಕೆ ರಾಮಾನುಜನ್ ಸಾಹಿತ್ಯ ಮತ್ತು ಹೆಣ್ಣೋಟ ಎಂಬ ಆರಂಭದ ಲೇಖನದಲ್ಲಿಯೇ ತಾರಿಣಿಯವರು ಕಟ್ಟಲು ಹೊರಟಿರುವ ತಾತ್ವಿಕತೆಯ ಸುಳಿವು ಸಿಗುತ್ತದೆ. ದೊಡ್ಡ ದನಿಯಲ್ಲಿ ಬಿಚ್ಚಿ ಮಾತಾಡದ ರಾಮಾನುಜನ್ ಅವರ ಕಾವ್ಯವನ್ನು ವಿಮರ್ಶೆಯು ಮೈನರ್ ಕವಿಗಳ ಸಾಲಿಗೆ ಸೇರಿಸುತ್ತದೆ ಎಂಬಲ್ಲಿಯೇ ವಿಮರ್ಶೆಯ ಮಿತಿಯನ್ನು ಅವರು ಕಾಣಿಸುತ್ತಾರೆ. ಅಂಚು–ಕೇಂದ್ರಗಳನ್ನು ಪಲ್ಲಟಿಸುವ ಮೂಲಕ ಈ ದ್ವಂದ್ವಗಳನ್ನು ನಿರಚನಗೊಳಿಸುವ ದಾರಿಯೊಂದನ್ನು ಇಂದಿನ ವಿಮರ್ಶೆಯು ಸೃಷ್ಟಿಸಿಕೊಳ್ಳಬೇಕಾಗಿದೆಯೆಂಬ ಸೂಚನೆ ಇಲ್ಲಿ ಸುಪ್ತವಾಗಿದೆಯೆನಿಸುತ್ತದೆ. ಇನ್ನೂ ಮುಂದುವರೆದು ಮೈನರ್ ಮೂಲಕವೇ ಮೇಜರ್ ಅನ್ನು ನಿರಚನಗೊಳಿಸುವ ಸನ್ನೆಗೋಲುಗಳನ್ನು ರಾಮಾನುಜನ್ ಅವರು ಹುಡುಕುತ್ತಿದ್ದರೇನೋ ಎಂಬ ಸಾಧ್ಯತೆಯೆಡೆಗೂ ಇಲ್ಲಿ ಸೂಚನೆಯಿದೆ. ಏರುದನಿಯ ಅಹಮಿಕೆಯ ಗುಣವನ್ನು ಬಿಟ್ಟು ಸ್ತ್ರೀತ್ವದ ಸೃಜನಶೀಲ ಗುಣವನ್ನು ಆತುಕೊಂಡ ರಾಮಾನುಜನ್ ಕಾವ್ಯವು ಅಳತೆಯ ಸಾಮರ್ಥ್ಯವನ್ನೇ ನಿರಚನಗೊಳಿಸುವ ಶಕ್ತಿಯನ್ನು ಪಡೆದುಕೊಂಡ ಬಗೆ ಇಲ್ಲಿ ಗೋಚರಿಸುತ್ತದೆ. ಅಡಗಿಸಿದ ಮೌನವನ್ನು ಮೀಟುವಂತಿರುವ ಈ ಸಣ್ಣ ಕೀಚಲು ಧ್ವನಿಗೆ ಇರುವ ಒಳಬಂಡಾಯದ ಸಾಧ್ಯತೆಯನ್ನು ಈ ಲೇಖನವು ತೋರಿಸುತ್ತದೆ.

ಹೆಣ್ಣಾಗುವ ಮೂಲಕ ಲೋಕವನ್ನು ನೋಡುವ ಇನ್ನೊಂದು ಸ್ಥಳವನ್ನು ನಿರ್ಮಿಸಿಕೊಳ್ಳುವ ಸಾಧ್ಯತೆಯನ್ನು ಈ ಸಂಕಲನದ ಬಹುತೇಕ ಲೇಖನಗಳು ಒಳಗೊಂಡಿವೆ. ವೈದೇಹಿಯಿಂದ ಷೇಕ್ಸಪಿಯರ್‌ವರೆಗೂ ಈ ನೋಟದ ವಿಸ್ತಾರವಿದೆ. ಸ್ತ್ರೀಲೋಕದ ವಿದ್ರೋಹಾತ್ಮಕ ಪ್ರತಿರೋಧದ ಮಾದರಿಗಳನ್ನು ಈ ಇಬ್ಬರೂ ಲೇಖಕರು ರೂಪಿಸಿದ ಪಾತ್ರಗಳ ಮೂಲಕ ತಾರಿಣಿಯವರು ತೋರಿಸುತ್ತಾರೆ. ಹೆಣ್ಣು ಜಗತ್ತಿನ ಮೇಲೆ ಎರಗುವ ನಾಜೂಕು ಕ್ರೌರ್ಯವನ್ನು ಎದುರಿಸಲು ಬೇಕಾದ ಪ್ರತಿತಂತ್ರಗಳ ಹೆಣಿಗೆ ಸ್ತ್ರೀವಿಶಿಷ್ಟವಾದ ಜ್ಞಾನವೂ ಹೌದು. ವೈದೇಹಿಯವರ ಕಥಾನಾಯಕಿ ಅಕ್ಕು ತನ್ನ 'ಪಿರ್ಕಿತನ'ದ ಮೂಲಕವೇ ಕಾಣಿಸುವ ಲೋಕಸತ್ಯಗಳು, ತಮ್ಮ ಅನೂಹ್ಯ ವರ್ತನೆಗಳಿಂದ ಗಂಡಸರ ಅಧಿಕಾರವನ್ನೇ ನಿರಚನಗೊಳಿಸುವ ಅವರ ಹಲವು ಕಥೆಗಳ ನಾಯಕಿಯರ ತಂತ್ರಗಳು ನಮ್ಮ ನೋಟದಿಂದ ತಪ್ಪಿಸಿಕೊಂಡಿದ್ದ ಶಕ್ತಿಶಾಲೀ ಸ್ಥಳಗಳನ್ನೇ ದರ್ಶನ ಮಾಡಿಸುತ್ತವೆ. ತೀವ್ರವಾಗಿ ಬದುಕುವ ಮೂಲಕವೇ ವಿರೋಧಿ ನೆಲೆಗಳನ್ನು ಧ್ವಂಸಗೊಳಿಸುವ ರೀತಿಯನ್ನು ಶಿವರಾಮ ಕಾರಂತರ ಸ್ತ್ರೀಪಾತ್ರಗಳಲ್ಲೂ ಲೇಖಕಿ ಕಾಣುತ್ತಾರೆ. ಷೇಕ್ಸಪಿಯರನ ಸಾಹಿತ್ಯದಲ್ಲಿಯೂ ಇಂಥ ಹೆಣ್ಣುಪಾತ್ರಗಳಿವೆ. 'ಹೆಣ್ಣಿನ ವಿದ್ರೋಹಾತ್ಮಕ ಚೈತನ್ಯವನ್ನು ಆತ ಜಾಣ್ಮೆಯಿಂದ ನಿರ್ವಹಿಸುತ್ತಾನೆ' ಎಂದು ಗ್ರಹಿಸುವ ಮೂಲಕ ತಾರಿಣಿಯವರು ದೇಶ ಕಾಲಾತೀತವಾಗಿ ಹರಡಿರುವ ಈ ಬಿಂಬವನ್ನು ಏಕತ್ರಗೊಳಿಸುತ್ತಾರೆ.

ಸ್ತ್ರೀವಿಶಿಷ್ಟ ನೋಟಕ್ರಮಗಳಲ್ಲಿ ಮೂಡುವ ಹೊಸ ಮೀಮಾಂಸೆಯನ್ನು ಕಟ್ಟಿಕೊಳ್ಳುವ ಪ್ರಯತ್ನ ಇಲ್ಲಿ ಸಫಲವಾಗಿದೆ. ವೈದೇಹಿಯವರ 'ತಿಳಿಸಾರು', 'ನೋಡಬಾರದು ಚೀಲದೊಳಗನು' ಮುಂತಾದ ಕವಿತೆಗಳಲ್ಲೂ ಈ ಮೀಮಾಂಸೆಯ ಎಳೆಗಳಿವೆ. ಹೆಣ್ಣು ಅನುಭವದ ಈ ಒಳಕೋಣೆಗಳು ನಿರ್ಮಿಸುವ ವಿಮರ್ಶಾ ಮಾನದಂಡಗಳು ಸ್ಥೂಲದಿಂದ ಸೂಕ್ಷ್ಮಕ್ಕೆ ಚಲಿಸುವ ಸೂಚನೆಗಳಾಗಿವೆ. ತಮ್ಮ ಕಾಲವನ್ನು ಸದಾ ನಿರಚನೆ ಮಾಡಿಕೊಳ್ಳಬಲ್ಲ ಲೇಖಕರಷ್ಟೇ ಈ ನೋಟಗಳಿಗೆ ಬೆಳಕಾಗಬಲ್ಲರು. ಕಾಲವು ನಿರ್ಮಿಸುವ ಸ್ಥೂಲ ಅಭಿಪ್ರಾಯಗಳು ಹಾಗೂ ವ್ಯಕ್ತಿಗತ ಸಂಕೀರ್ಣತೆ ಎರಡನ್ನೂ ಗ್ರಹಿಸುವ ಮೂಲಕವೇ ವಿಮರ್ಶೆಯು ಸಮಗ್ರಗೊಳ್ಳುವುದು ಸಾಧ್ಯ. ಲೇಖಕಿಯ ಇಂಚುಪಟ್ಟಿ ಅಂಥ ಹುಡುಕಾಟವನ್ನು ನಡೆಸಿದೆ.


ಮೀಮಾಂಸೆಯನ್ನು ಶೋಧಿಸಿಕೊಡುವ ಸವಾಲನ್ನು ಕನ್ನಡ ವಿಮರ್ಶೆ ಎತ್ತಿಕೊಂಡಿಲ್ಲ

ಎಂಬ ಮಾತಿಗುತ್ತರವಾಗಿ ಇಂದು ಸಂಸ್ಕೃತಿಯೊಳಗಿನ ಬಹುಧ್ವನಿಗಳನ್ನು, ಅಂಚಿನಲ್ಲಿದ್ದ ಸ್ವರಗಳನ್ನು ಆಲಿಸುವ ಮೂಲಕ ಕಟ್ಟಿಕೊಳ್ಳಲಾಗುತ್ತಿರುವ ಹೊಸ ಮೀಮಾಂಸೆಗಳೊಂದಿಗೆ ಸಹಮತ ವ್ಯಕ್ತಪಡಿಸುತ್ತಲೇ ತಾರಿಣಿಯವರು ತಮ್ಮದೇ ಧ್ವನಿಯೊಂದನ್ನು ಇಲ್ಲಿ ದಾಖಲಿಸುತ್ತಿದ್ದಾರೆ.

–ಗೀತಾ ವಸಂತ

ಪು: **ನೆಲದಾಸೆಯ ನಕ್ಷತ್ರಗಳು (ವಿಸ್ಮೃತಿ ಸಮಯದ ರೂಪಕ)**ಲೇ: ಎಂ.ಅರ್. ಕಮಲ
ಪ್ರ: **ಕಥನ ಪ್ರಕಾಶನ**, ಬೆಂಗಳೂರು.(೯೪೪೮೩೩೪೬೨೨) ಪು:೭೨ ಬೆ:ರೂ.೭೦/-

ತೀವ್ರ ಓದಿನ ಸುಖವನ್ನು ನೀಡುವ ಸಂಕಲನ



ಇದು ಕವಿಯಾಗಿ, ಅನುವಾದಕಿಯಾಗಿ ಹೆಸರು ಮಾಡಿರುವ ಎಂ.ಆರ್.ಕಮಲ ಅವರ 'ವಿಸ್ಮೃತಿ ಸಮಯದ ರೂಪಕ' ಎಂಬ ಅಡಿಬರಹವನ್ನು ಹೊತ್ತು ಬಂದಿರುವ ವಿಶಿಷ್ಟ ಸಂಕಲನ. ಈ ಸಂಕಲನದಲ್ಲಿ ನಾವು ಸಾಹಿತ್ಯವನ್ನು ಗದ್ಯ ಪದ್ಯಗಳೆಂದು ವಿಂಗಡಿಸಿ ನೋಡುವ ರೂಢಿಯ ಚೌಕಟ್ಟಿನಾಚೆಗೆ ನಿಂತು ತನ್ನ ಅನುಭವವನ್ನು ದಾಖಲಿಸುವ ಪ್ರಯತ್ನ ಕಾಣುತ್ತದೆ. ಈ ಪ್ರಯೋಗಶೀಲತೆ ಕನ್ನಡಕ್ಕೆ ಹೊಸದಲ್ಲವಾದರೂ ಸೂಕ್ಷ್ಮಚಿಂತನೆ ಮತ್ತು ಉತ್ಕಟವಾದ ಸಂವೇದನಾಶೀಲತೆಯಿಂದ ಸಂಕಲನ ಗಮನಸೆಳೆಯುತ್ತದೆ.

ಹೆಣ್ಣಿನ ಮನೋಲೋಕ, ಅವಳ ಅಸ್ಮಿತೆಯಿಂದ ಹಿಡಿದು ಇಂದಿನ ರಾಜಕೀಯ, ಸಾಮಾಜಿಕತೆಯ ವಿಷಮತೆಯವರೆಗೆ ವ್ಯಾಪಿಸಿರುವ ಸಂಕಲನದ ಬರಹಗಳಲ್ಲಿ ರೂಪಕಗಳ ಮೂಲಕ ಬದುಕಿನ ಸಮಗ್ರವಾದ ಚಿಂತನೆಯೊಂದನ್ನು ಕಟ್ಟಿಕೊಡಲು ಸಾಧ್ಯವಾಗಿದೆ. ಹಾಗಾಗಿ ಇವು ತೀವ್ರ ಓದಿನ ಸುಖವನ್ನಂತೂ ನೀಡುತ್ತವೆ. ಒಂದು ರೀತಿಯಲ್ಲಿ ಇವು ಪದ್ಯದ ಓದಿನ ಅನುಭವ ನೀಡುವ ಗದ್ಯಾತ್ಮಕ ಬರಹಗಳು. ಒಂದು ಚಿಂತನೆಯ ವಿಸ್ತರಣೆಯಂತೆ ಬೆಳೆಯುವ ಅಷ್ಟೂ ಬರಹಗಳು ಒಂದು ಮರದ ಬೇರು, ಕಾಂಡ, ಹೂವು, ಹಣ್ಣೆಂಬಂತೆ ಹೊಳೆಯುತ್ತ ಒಂದು ಕಾಲದ ಬದುಕಿನ ಹಲವು ಪಲ್ಲಟಗಳ ದಾಖಲೆಯಂತೆ ಕಂಡುಬರುತ್ತವೆ.

ಇಲ್ಲಿ ಕಾಲ ಹಿಂದಕ್ಕೂ, ಮುಂದಕ್ಕೂ ಚಲಿಸುತ್ತ ತೆರೆದಿಡುವ ಅನುಭವ ರೋಚಕ, ಅಷ್ಟೇ ಬೀಕರ. ಅದು ಉಳಿಸುವುದು ಕ್ರೂರ ವಾಸ್ತವಗಳನ್ನು, ತಣ್ಣಗಿನ ವಿಷಾದವನ್ನು, 'ನಿಮ್ಮನ್ನು ಪ್ರೀತಿಸಲಾರೆ, ಪ್ರೀತಿಸದಿರಲಾರೆ', 'ಎದೆಯೊಳಗೆ ಅಗ್ಗಿಟಿಕೆಗಳು ಉರಿಯುತ್ತಿವೆ', 'ಮನೆ ಮತ್ತಷ್ಟು ಚಿಕ್ಕದಾಗಿತ್ತು' ಮೊದಲಾದ ಕವಿತೆಗಳು ಈ ಬಗೆಯ ಅನುಭವವನ್ನು ನೀಡುವಂತವು. 'ಭಾವಲೋಕವೊಂದು ಮರೀಚಿಕೆಯೂ ಇರದ ಮರುಭೂಮಿ' (ಪು.೩೮) ಎಂದು ಕವಿ ಹೇಳುವಷ್ಟರ ಮಟ್ಟಿಗೆ ಸಂಕೀರ್ಣ ಸನ್ನಿವೇಶವನ್ನು ನಾವು ಎದುರಿಸುತ್ತಿದ್ದೇವೆ. 'ಷಡ್ರಸಗಳ ಅಡುಗೆ ಪಾತ್ರೆಗಳು ಈಗ ಬರಿದಾಗಿವೆ' (ಪು.೧೫) ಎಂಬ ಸಾಲು ಕೇವಲ ಕಳೆದುಹೋದ ಒಂದು ಸಂಗತಿಯಷ್ಟನ್ನೆ ದಾಖಲಿಸದೆ ಅಪೂರ್ವವಾದ ಬದುಕಿನ ದುರಂತ ಅಂತ್ಯದ ಕಠೋರ ಅಧ್ಯಾಯದಂತೆ ಗೋಚರಿಸುತ್ತದೆ.


ಮುಖ್ಯವಾಗಿ ಕವಿಯ ಕಟು ಟೀಕೆ, ವ್ಯಂಗ್ಯ ಅದನ್ನು ಹೇಳುವ ಅಪೂರ್ವ ರೂಪಕಶಕ್ತಿ ಮೆರೆಯುವುದು ತಮ್ಮನ್ನು ವಿಹ್ವಲಗೊಳಿಸಿರುವ ವರ್ತಮಾನದ ಸಂದಿಗ್ಧತೆಗಳನ್ನು ಹಿಡಿಯುವಲ್ಲಿ, 'ಅವರಿಗೀಗ ಅರ್ಥವಾಗಿ ಹೋಗಿದೆ, ಬದುಕಷ್ಟು ಸಾವು ಭಯಪಡಿಸುವುದಿಲ್ಲವೆಂದು' (ಪು.೨೮) ಎಂಬ ಸಾಲು ಈಗ ಎದುರಿಸುತ್ತಿರುವ ಸನ್ನಿವೇಶದ ಭೀಕರತೆಯನ್ನು ಅರಿವಿಗೆ ತರುತ್ತದೆ. ಕೇಳಿದ ಸಂಗತಿಗಳು, ನೋಡಿದ ಘಟನೆಗಳು, ಹೇಳುತ್ತಿದ್ದ ಕತೆಗಳು, ಬದುಕಿದ ವಸ್ತುಗಳು ಎಲ್ಲವೂ ವರ್ತಮಾನದ ಹಲವು ಪ್ರಹಸನಕ್ಕೆ ರೂಪಕಗಳಾಗುವ ಬಗೆಯೆ ಬೆರಗುಗೊಳಿಸುವಂಥದ್ದು. 'ಅಪ್ಪೇರುಪ್ಪಿನಕಾಯಿ', 'ಮತ್ತೆ ಮತ್ತೆ ಕರಡಿ ನರಿಯ ಕಥೆ', 'ಟೋಪಿ ಮಾರುವವನೂ ಮತ್ತು ಧರಿಸಿ ಕೂತ ಮಂಗಗಳೂ' ಮೊದಲಾದ ಕವಿತೆಗಳು ವರ್ತಮಾನದ ವಿಲಕ್ಷಣ ಸನ್ನಿವೇಶದ ಕಥನವನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತವೆ. 'ದುರ್ಯೋಧನ ಸುಯೋಧನನಾಗುವುದು ಕಾವ್ಯದಲ್ಲೆ ಎನ್ನುವುದನ್ನು ಮರೆತು ಕವಿಯನ್ನು ಕಟಕಟೆಯಲ್ಲಿ ನಿಲ್ಲಿಸುತ್ತಾರೆ' (ಪು.೩೬) ಎಂಬ ಸಾಲು ಕವಿಯೂ ಅಪರಾಧಿಯಾಗಬಲ್ಲ ಭೀಕರ ಸನ್ನಿವೇಶವನ್ನು ಹೇಳುತ್ತದೆ. ಈ ಮಧ್ಯೆಯೂ ಹೆಣ್ಣಿನ ದಿಟ್ಟತನ, ಆಕೆಯ ಕ್ರಿಯಾಶೀಲತೆ, ಮನೋಸ್ಥೈರ್ಯ ಈ ಗುಣಗಳನ್ನು ಹೇಳುವ 'ಹುಲಿನೆಕ್ಕಿ ಬದುಕಿದವರೆ', 'ಅವಳು ಹೊಲಿಯುತ್ತಲೆ ಇದ್ದಾಳೆ', 'ನಮ್ಮನ್ನು ನೀವು ನಿರ್ದೇಶಿಸಬೇಡಿ', ಕವಿತೆಗಳು ಭಿನ್ನವಾದ ಅನುಭವವನ್ನು ನೀಡುವಂತವು.

ಸಂಕಲನದ ಸಫಲತೆಯ ನಡುವೆಯೂ ಕೆಲವೊಮ್ಮೆ ಕಳೆದುಹೋದ ಕಾಲದ ಬಗೆಗಿನ ನೆನಪುಗಳು ಹಳಹಳಿಕೆಯಂತೆ ಭಾಸವಾಗುವ, ಆಧುನಿಕ ಬದುಕು ಭವಿಷ್ಯದ ಬೆಳಕಿಂಡಿಯನ್ನು ನೀಡದಷ್ಟು ಕಠೋರವಾಗಿದೆಯೆ ಎಂಬ ಪ್ರಶ್ನೆಗಳನ್ನು ಉಳಿಸುವ ಕೊರತೆಯೊಂದು ಇಡಿ ಸಂಕಲನ ಓದಿದಾಗ ಉಳಿದೇ ಉಳಿಯುತ್ತದೆ.

–ಸಂತೋಷ ಚೊಕ್ಕಾಡಿ

ಪು: **ದೇಸಾಯಿ ಕಥನ**(ಶಾಂತಿನಾಥ ದೇಸಾಯಿ ಸಾಹಿತ್ಯ ಅಧ್ಯಯನ) ಲೇ:**ಟಿ.ಪಿ.ಅಶೋಕ**
ಪ್ರ: **ಅಭಿನವ**, ಬೆಂಗಳೂರು(೯೪೪೮೮೦೪೯೦೫) ಪು:೧೨೪ ಬೆ:ರೂ.೧೨೫/-

ಸಮಗ್ರ ಮತ್ತು ತುಲನಾತ್ಮಕ ನೋಟ



ಟಿ.ಪಿ. ಆಶೋಕರವರ 'ಕಥನ' ಸರಣಿಯ 'ದೇಸಾಯಿ ಕಥನ', ದೇಸಾಯಿಯವರ ಸಾಹಿತ್ಯಕ್ಕೆ ಪ್ರವೇಶಿಕೆಯನ್ನು ನೀಡಿ, ಅವರ ಬರಹಗಳ ವಿನ್ಯಾಸಗಳನ್ನು ಹಾಗೂ ಕನ್ನಡ ಸಾಹಿತ್ಯದ ಇತರ ಕೃತಿಗಳ ಜೊತೆಗೆ ದೇಸಾಯಿ ಸಾಹಿತ್ಯ ಸಾಧಿಸುವ ಸಾತತ್ಯವನ್ನು ತೋರಿಸುವ ಪ್ರಯತ್ನವನ್ನು ಮಾಡುತ್ತದೆ.

ದೇಸಾಯಿಯವರ ಸಣ್ಣಕತೆಗಳು ನವೋದಯ ಪ್ರಜ್ಞೆಯಿಂದ ನವ್ಯ ಪ್ರಜ್ಞೆಗೆ ಬದಲಾದ ಮನಸ್ಥಿತಿ ಹಾಗೂ ಅದರ ಹಿಂದಿನ ಚಾರಿತ್ರಿಕ ಪ್ರೇರಣೆಗಳನ್ನು ದಾಖಲಿಸುತ್ತವೆ ಅನ್ನುವುದನ್ನು ಅನೇಕ ಉದಾಹರಣೆಗಳ ಮೂಲಕ ಅಶೋಕರವರು ತೋರಿಸುತ್ತಾರೆ. ಮಕ್ಕಳ ಪ್ರಜ್ಞೆಯ ಮೂಲಕ ಬದುಕನ್ನು ಕಾಣಿಸುವ ಕನ್ನಡ ನವ್ಯ ಕತೆ ಕಾದಂಬರಿಗಳ ಸರಮಾಲೆಯ ಮೂಲ 'ಚಂದೂ' ಕತೆಯಲ್ಲಿದೆ ಮತ್ತು 'ಕ್ಷಿತಿಜ' ಕತೆಯ ಆಶಯಗಳು ವೈದೇಹಿ, ವೀಣಾ ಶಾಂತೇಶ್ವರ, ಅವರ ಕತೆಗಳಲ್ಲಿ ಬೆಳಸಲ್ಪಟ್ಟಿವೆ ಅನ್ನುತ್ತಾರೆ. ಕತೆಯೊಳಗೇ ಕಥಾಮೀಮಾಂಸೆಯನ್ನೂ ಮಾಡುವುದು, ವ್ಯಕ್ತಿಯ ಜೀವನದ ಸಾರ್ಥಕತೆಯ ಹುಡುಕಾಟ, ನೀತಿ–ಅನೀತಿಗಳ ಬಗೆಗೆ ಸರಳವಲ್ಲದ ಜೀವನದೃಷ್ಟಿ, ಇವು ದೇಸಾಯಿ ಕಥಾಸಾಹಿತ್ಯದ ವಿನ್ಯಾಸ ಎಂದು ಗಮನಿಸುತ್ತಾರೆ. ದೇಸಾಯಿಯವರ ಕತೆಗಳು 'ಮಧ್ಯಮ ವರ್ಗದ ಲೈಂಗಿಕ ಜೀವನದ ಮೇಲಿನ ಭಾಷ್ಯ' ಅನ್ನುವ ಅಶೋಕ, ದೇಸಾಯಿ ಅವರ ಕತೆಗಳ ಪ್ರಪಂಚವೇ ತುಂಬಾ ಸೀಮಿತವಾಗಿದ್ದು ಅನ್ನುವುದನ್ನೂ ಗಮನಿಸುತ್ತಾರೆ.

ದೇಸಾಯಿಯವರ ಕಾದಂಬರಿ ಲೋಕದ 'ಭೂತಕಾಲದ ಭೂತದಿಂದ ಒಮ್ಮೆ ಮುಕ್ತ'ನಾಗುವ ಹಂಬಲದಿಂದ 'ಭೂತಕಾಲದ ಅರಿವು ಇರಲೇಬೇಕು' ಅನ್ನುವವರೆಗಿನ ಪಯಣವನ್ನು ಅಶೋಕರವರು ತೋರಿಸಿಕೊಟ್ಟಿದ್ದಾರೆ. ಬರೆಯುವುದರ ಮೂಲಕವೇ ಸ್ಪಷ್ಟತೆ ಪಡೆಯುವ ಪ್ರಯತ್ನ, ಸ್ವಗತ, ಆತ್ಮಭರ್ತ್ಸನೆ, ತಪ್ಪೊಪ್ಪಿಕೆ, ಇವು ದೇಸಾಯಿಯವರಿಂದ ಪ್ರಾರಂಭವಾಗಿ ಕನ್ನಡದ ನವ್ಯ ಕತೆ ಕಾದಂಬರಿಗಳ ವಿನ್ಯಾಸವನ್ನು ರೂಪಿಸಿವೆ ಅನ್ನುತ್ತಾರೆ. ಈ ಸಂದರ್ಭದಲ್ಲಿ ಅಶೋಕರವರು ಹೇಳುವ 'ಕಾಲಾನುಕ್ರಮಣಿಕೆಯ ಜಾಗವನ್ನು ಪ್ರಜ್ಞಾಪ್ರವಾಹ ಆಕ್ರಮಿಸಿಕೊಳ್ಳುತ್ತದೆ' ಅನ್ನುವುದು ಸ್ವಲ್ಪ ಅನುಮಾನಾಸ್ಪದ. ದೇಸಾಯಿಯವರ ಕಾದಂಬರಿಗಳಲ್ಲಿ ಕೆಲವೊಮ್ಮೆ ಪ್ರಜ್ಞಾಪ್ರವಾಹದ ನಿರೂಪಣೆ ಇದ್ದರೂ, ಕಾಲಾನುಕ್ರಮಣಿಕೆಯನ್ನು ಬಿಟ್ಟಿರುವುದು ಬಹಳ ಕಡಿಮೆ ಅನ್ನಬಹುದು. ಅವರ ಕಾದಂಬರಿಗಳ ಎರಡನೇ ಘಟ್ಟದಲ್ಲಿ ಇತಿಹಾಸ, ಸಮಾಜ ಪ್ರವೇಶ ಪಡೆದರೂ ಕೇಂದ್ರ ಪಾತ್ರಗಳ ಆತ್ಮವಿಮರ್ಶೆಯೇ ಅಲ್ಲೂ ಮುಖ್ಯವಾಗಿದೆ. ಹಾಗಾಗೇ 'ಓಂ ಣಮೋ' ಜೈನಧರ್ಮದ ಕೈಪಿಡಿಯಾಗುವ ಧಾರ್ಮಿಕ ಕಾದಂಬರಿಯಲ್ಲ ಅನ್ನುತ್ತಾರೆ. ಎರಡನೇ ಹಂತದ ಕಾದಂಬರಿಗಳಲ್ಲಿ ವ್ಯಕ್ತಿ ಪರಿಧಿಯನ್ನು ಮೀರುವ ಪ್ರಯತ್ನಗಳಿವೆ ಅನ್ನುವಾಗ ಇದನ್ನು ಲಂಕೇಶ್, ತೇಜಸ್ವಿಯವರ ಬರವಣಿಗೆಗಳಲ್ಲಾದ ಬದಲಾವಣೆಗಳಿಗೆ ಹೋಲಿಸುವುದು ಸ್ವಲ್ಪ ಉತ್ಪ್ರೇಕ್ಷೆಯಾಯಿತು ಅನಿಸುತ್ತದೆ.


ದೇಸಾಯಿಯುವರು ಇಂಗ್ಲಿಷ್ ಅಧ್ಯಾಪಕರಾಗಿದ್ದಾಗ ಚಾಲ್ತಿಯಲ್ಲಿದ್ದ 'ಮಾಡರ್ನಿಸಮ್', ಶೈಲಿಶಾಸ್ತ್ರ, ಐ.ಎ. ರಿಚರ್ಡ್ಸ್ ಬಗ್ಗೆ ಹಾಗೂ ಕನ್ನಡದ ನವ್ಯ ಸಾಹಿತ್ಯದ ಬಗ್ಗೆ ಸಹಜವಾಗಿ ವಿಮರ್ಶೆ ಬರೆದಿದ್ದಾರೆ. ಕನ್ನಡದ ಬಹಳಷ್ಟು ನವ್ಯ ಕೃತಿಗಳಿಗೆ ಅವು ಪ್ರಕಟವಾದ ಕೂಡಲೇ, ಕೆಲವೊಮ್ಮೆ ಮೊದಲಿಗರಾಗಿ ಪ್ರತಿಕ್ರಿಯಿಸಿ, ಕನ್ನಡ ನವ್ಯ ಸಾಹಿತ್ಯವನ್ನು ನಿರೂಪಿಸಿದವರೂ ಆಗಿದ್ದಾರೆ. ಅವರ 'ಕನ್ನಡ ಕಾದಂಬರಿ ನಡೆದು ಬಂದ ರೀತಿ' ಮಹತ್ವದ ಕೃತಿಯಾಗಿದೆ ಎಂದು ಅಶೋಕರವರು ತೋರಿಸಿಕೊಡುತ್ತಾರೆ. ದೇಸಾಯಿಯವರ ವಿಮರ್ಶೆಯ ಮಿತಿ ಅಂದರೆ ಅವರು ಕನ್ನಡ ಸಾಹಿತ್ಯದ ಸಂದರ್ಭವನ್ನು ಇಡಿಯಾಗಿ ಗ್ರಹಿಸಲಿಲ್ಲ ಹಾಗೂ ಕನ್ನಡ ಕಾದಂಬರಿ ಪರಂಪರೆಗೆ ಸಾತತ್ಯ ಇದೆಯೇ ಅನ್ನುವ ಪ್ರಶ್ನೆಯನ್ನು ದೇಸಾಯಿಯವರು ಎತ್ತಿಕೊಳ್ಳುವುದಿಲ್ಲ ಎಂದು ಆಶೋಕರವರು ಗುರುತಿಸುತ್ತಾರೆ.

ಅಶೋಕರವರ ಹೆಗ್ಗಳಿಕೆಯೆಂದರೆ ಅವರು ದೇಸಾಯಿಯವರ ಬಗ್ಗೆ ಮಾತಾಡುವಾಗಲೇ ಇಡೀ ಕನ್ನಡ ಕಥನ ಪರಂಪರೆಯ ಬಗ್ಗೆ ಹೇಳುವುದು. 'ಬೇಸರ' ಕತೆಯನ್ನು ವೈದೇಹಿಯವರ 'ಗೂಡಿನೊಳಗೆ ಒಂದು ಹಕ್ಕಿ'ಯ ಜೊತೆ, 'ಇದೂ ಒಂದು ರೀತಿ'ಯನ್ನು ಶ್ರೀಕಾಂತರ 'ಭೂಮಿ ಕಂಪಿಸಲಿಲ್ಲ' ಜೊತೆ, (ದೇಸಾಯಿ ವಿಮರ್ಶೆಯನ್ನು ಗಿರಡ್ಡಿಯವರ ವಿಮರ್ಶೆಯ ಜೊತೆ ಹೋಲಿಸಿ ದೇಸಾಯಿಯವರ ಮಿತಿಯನ್ನು ತೋರಿಸಿರುವುದು) ಇವುಗಳನ್ನು ಗಮನಿಸಬಹುದು. ಹಾಗೆಯೇ ದೇಸಾಯಿ ಸಾಹಿತ್ಯದ, ವಿಮರ್ಶೆಯ ಮಿತಿಗಳನ್ನು ಹೇಳುವಾಗ ಕಂಡುಬರುವ ವಿಮರ್ಶೆಯ ವಿನಯ ಮತ್ತು ಸಂಯಮ ಗಮನಾರ್ಹವಾದದ್ದು. ಕೆಲವೊಮ್ಮೆ ಈ ಸಂಯಮ ಸ್ಪಷ್ಟವಾದ ಅಭಿಪ್ರಾಯ ಹೇಳುವುದಕ್ಕೆ ಅಡ್ಡಿ ಮಾಡಿದೆಯೇನೋ ಅನಿಸುವುದುಂಟು.

–ಬಿ.ವಿ. ರಾಮಪ್ರಸಾದ್

ಪು: ಅಪರಿಚಿತ ಲೇ:ಆಲ್ಬರ್ಟ್ ಕಮೂ ಕನ್ನಡಕ್ಕೆ: ಪ್ರಕಾಶ ನಾಯಕ್ ಪ್ರ: ಮಣಿಪಾಲ್ ಯೂನಿವರ್ಸಲ್ ಪ್ರೆಸ್, ಮಣಿಪಾಲ(೮೨೦-೯೨೯೫೪) ಪು:೧೧೨ ಬೆ:ರೂ.೧೭೦/-

'ಅನ್ಯ'ನೋ, 'ಅಪರಿಚಿತ'ನೋ



ಕರೋನಾ ಯುಗದ ನಂತರದ ದಿನಗಳಲ್ಲಿ ಅಲ್ಬರ್ಟ್ ಕಮೂನ ಕೃತಿಗಳ ಅನುವಾದ-ಚರ್ಚೆಗಳು ವಿಶ್ವಾದ್ಯಂತ ಮತ್ತೊಮ್ಮೆ ಶುರುವಾಗಿವೆ. ಮುಖ್ಯವಾಗಿ 'ದಿ ಪ್ಲೇಗ್' ಕೃತಿಯನ್ನು ಮನುಕುಲದ ರೋಗಗ್ರಸ್ತ ಸ್ಥಿತಿಯ ಸ್ವ-ಪ್ರತಿಫಲನವೆಂಬಂತೆ ಪ್ರಪಂಚವೇ ಮತ್ತೊಮ್ಮೆ ಓದಿಕೊಂಡಿತು. ಈಗ ಈ ಹಿಂದೆ (೧೯೭೦) ಡಿ.ಎ. ಶಂಕರ್ 'ಅನ್ಯ' ಎಂದು ಅನುವಾದಿಸಿದ್ದ ಇದೇ ಲೇಖಕನ 'ದಿ ಸ್ಟ್ರೇಂಜರ್'(೧೯೪೨) ಅಥವಾ 'ದಿ ಔಟ್‌ಸೈಡರ್' ಎಂಬ ವಿಶ್ವಪ್ರಸಿದ್ಧ ಕಾದಂಬರಿಯನ್ನು ಅಮೇರಿಕಾದ ಪ್ರಕಾಶ್ ನಾಯಕ್ 'ಅಪರಿಚಿತ'(೨೦೨೧) ಹೆಸರಿನಲ್ಲಿ ಅನುವಾದಿಸಿದ್ದಾರೆ.

ಅಲ್ಜೀರ್ಸ್ ನಗರದಲ್ಲಿ ಮಾಮೂಲಿ ಗುಮಾಸ್ತನಾಗಿರುವ ಮರ್ಸೂನ ವಿಕ್ಷಿಪ್ತ ಕತೆಯನ್ನು ಒಣ ನಿರ್ಭಾವುಕತೆ, ನಗ್ನ-ನಿರಾಡಂಬರವಾದ ಗದ್ಯದಲ್ಲಿ ಕಾದಂಬರಿ ನಿರೂಪಿಸುತ್ತದೆ. ಮರ್ಸೂನ ತಾಯಿ ವೃದ್ಧಾಶ್ರಮದಲ್ಲಿ ತೀರಿಕೊಂಡ ಸುದ್ದಿಯೊಂದಿಗೆ ಕಾದಂಬರಿ ಶುರುವಾದರೂ, ಮರ್ಸೂಗೆ ಅವಳು ಯಾವಾಗ ತೀರಿಕೊಂಡಳೆಂದು ಗೊತ್ತಿಲ್ಲ. ಸತ್ತವಳ ವಯಸ್ಸೆಷ್ಟೆಂದು ತಿಳಿದಿಲ್ಲ. ಹೆತ್ತವಳ ಮುಖವನ್ನು ಕೊನೆಯದಾಗಿ ನೋಡಲೂ ಆಸ್ಥೆಯಿಲ್ಲ. ಆಯಾಸ-ಆಘಾತಗಳಿಂದ ಬಸವಳಿದಿರುವ ಅವನು ಅಂತ್ಯಕ್ರಿಯೆಯ ಸಿದ್ಧತೆಗಳು ನಡೆಯುವಾಗ ಸಿಗರೇಟು ಸೇದಿ ನಿಸೂರಾಗುತ್ತಾನೆ. ಮರುದಿನ ಗೆಳತಿ ಮರಿಯಾಳೊಂದಿಗೆ ಸಮುದ್ರದಲ್ಲಿ ಈಜಿ, ಕಾಮಿಡಿ ಸಿನೆಮಾವೊಂದನ್ನು ನೋಡಿ ರಾತ್ರಿ ಅವಳೊಂದಿಗೆ ಮಲಗುತ್ತಾನೆ. ತಾಯಿಯ ಸಾವಿನ ಕರಾಳ ಗಳಿಗೆಗಳಲ್ಲೂ ನಿರ್ಲಿಪ್ತವಾಗಿರುವ ಅವನಿಗೆ ಮರಿಯಾಳೊಂದಿಗೆ ಮದುವೆಯಾಗುವುದೂ ಆಗದೇ ಇರುವುದು ಹೆಚ್ಚಿನ ವ್ಯತ್ಯಾಸದ ಸಂಗತಿಗಳೇನಲ್ಲ. ಹಾಗೇ ಮೇಲಧಿಕಾರಿಯ ಸೂಚನೆಯಂತೆ ಪ್ಯಾರಿಸಿನಲ್ಲಿ ಹೊಸಹುದ್ದೆಯನ್ನು ಪಡೆದು ಬದುಕನ್ನು ಬದಲಾಯಿಸಿಕೊಳ್ಳುವ ಉಮೇದಿಲ್ಲ. ಹೇಗಿದ್ದರೂ ಒಂದು ಬದುಕು ಇನ್ನೊಂದರಂತೆ ಚೆನ್ನಾಗಿರುತ್ತದೆ ಮತ್ತು ಯಾವುದರ ಬಗ್ಗೆಯೂ ಅತೃಪ್ತಿ-ದುಃಖಗಳಿಲ್ಲ. ತಾಯಿಯ ಬಗ್ಗೆ ಅಮಾನುಷವಾಗಿ-ತನ್ನ ಭವಿಷ್ಯದ ಬಗ್ಗೆ ಅಸಂಗತವಾಗಿ ವರ್ತಿಸಿದರೂ ಮರ್ಸೂ ನೆರೆಮನೆಯ ಸಾಲಮಾನೋ ಕಜ್ಜಿ ನಾಯಿಯೊಂದನ್ನು ಕಳೆದುಕೊಂಡು ಪರಿತಪಿಸುವುದನ್ನು ಕೇಳಿಸಿಕೊಳ್ಳುತ್ತಾನೆ. ರೇಮೋ ಎಂಬ ತಲೆಹಿಡುಕ ತನ್ನ ಅರಬ್ ಗೆಳತಿ ಮೋಸ ಮಾಡಿದಳೆಂದು ಅವಳೊಂದಿಗೆ ಜಗಳವಾಡುತ್ತಾನೆ. ಜಗಳದಲ್ಲಿ ರೇಮೋನ ಪರ ವಹಿಸುವ ಮರ್ಸೂ ಅರಬ್ ಹೆಂಗಸಿನ ಅಣ್ಣ ಜಗಳವಾಡಲು ಬಂದಾಗ ಸಮುದ್ರದ ದಂಡೆಯ ಉರಿಬಿಸಿಲಿಗೆ ರೋಸಿ ಅನಾಯಾಸವಾಗಿ ಗುಂಡು ಹಾರಿಸಿ ಜೈಲು ಸೇರುತ್ತಾನೆ. ತಾಯಿಯ ಸಾವಿನ ಬಗ್ಗೆ ನಿರ್ಭಾವುಕವಾಗಿರುವ ಮರ್ಸೂಗೆ ತಾನು ಮಾಡಿರುವ ಕೊಲೆಗೆ ಗಲ್ಲುಶಿಕ್ಷೆಯಾದರೂ ಪಶ್ಚಾತ್ತಾಪವಿಲ್ಲ.

ಮರ್ಸೂ ನೈತಿಕವಾಗಿ, ಸಾಮಾಜಿಕವಾಗಿ ಸ್ವ-ಪ್ರಜ್ಞೆಗೆ ಅಂಟಿಕೊಂಡ, ಸಾಮಾಜಿಕ ಬದುಕಿನಲ್ಲಿ ಅಸಂಗತವಾಗಿ ಕಾಣುವ ತೀವ್ರ ವ್ಯಕ್ತಿವಾದಿ ಮೌಲ್ಯಗಳ ಪ್ರತಿನಿಧಿಯಾಗಿದ್ದಾನೆ. ಸಮಾಜದ ರೂಢಿಗತ ಆಚಾರ-ಮೌಲ್ಯ ವ್ಯವಸ್ಥೆಗಳಿಗೆ ಹೊರತಾಗಿರುವ ಅವನು ಒಳ್ಳೆಯವನೂ ಅಲ್ಲ ಕೆಟ್ಟವನೂ ಅಲ್ಲ. ಅವನು ಕಂಗೆಡುವುದು ಉರಿಬಿಸಿಲಿಗೆ, ಕಾತರಿಸುವುದು ಸಮುದ್ರದ ಏಕಾಂತಕ್ಕೆ, ಮಾರಿಯಾಳ ಮೋಹಕತೆಗೆ ಮಾತ್ರ. ಯಾವ ನಿಯತಿಗೂ ಒಳಪಟ್ಟು ಇಲ್ಲಿ ಬದುಕು ಸಾಗದಿರುವುದರಿಂದ ದೇವರು- ಧರ್ಮ, ಸಮಾಜದ ಕಟ್ಟುಪಾಡುಗಳಿಗೆ ಅರ್ಥವಿಲ್ಲ. ಪುರಾಣದ ಸಿಸಿಫಸ್‌ನಂತೆ ಜಾರುವ ಕಲ್ಲುಗಳನ್ನು ಗುಡ್ಡಕ್ಕೆ ಹೊರುತ್ತ ನಿಶ್ಫಲವಾಗಿ-ಯಾಂತ್ರಿಕವಾಗಿ ಬದುಕುತ್ತಿದ್ದರೂ ಅದರ ನಡುವೆಯೇ ಜೀವನದ ಕ್ಷಣಿಕ ಸುಖಗಳಷ್ಟನ್ನೇ ನೆಮ್ಮಿ ಬದುಕುವ ಮನುಷ್ಯನ ಅದಮ್ಯ ಹಂಬಲಕ್ಕೆ ಪ್ರಕೃತಿಯೂ ನಿರ್ದಯ ಉದಾಸೀನತೆಯನ್ನು ತೋರುತ್ತದೆ. ಬದುಕಿಗೊಂದು ಅರ್ಥವಿಲ್ಲ-ನಿಯಮವಿಲ್ಲದಿರುವ ಕಾರಣದಿಂದಲೇ ತನಗೆ ಅನಿಸಿದಂತೆ ತೀವ್ರವಾಗಿ ಬದುಕಬೇಕು ಎನ್ನುತ್ತಾ ಸಮಾಜದ ತೋರಿಕೆಯ ರಿವಾಜುಗಳಿಗೆ ವಿರುದ್ಧವಾಗಿ ಸಾಗುವ ಮರ್ಸೂ ಅನ್ಯನಾಗಿ/ಅಪರಿಚಿತನಾಗಿ ಕಾಣುತ್ತಾನೆ. ಮರ್ಸೂ ಎಷ್ಟೇ ನಿರ್ಲಿಪ್ತ-ನಿರ್ಭಾವುಕ ವ್ಯಕ್ತಿವಾದಿಯಾಗಿದ್ದರೂ ತನಗೆ ಅರಿವಿಲ್ಲದೆಯೇ ರೇಮೋನ ಸಂಬಂಧಗಳ ಗೋಜಲುಗಳಿಗೆ ಸಿಕ್ಕಿಬೀಳುವ-ಸಾಲಮಾನೋನ ಕ್ಷುಲ್ಲಕ ಪ್ರಲಾಪಗಳಿಗೆ ಸಾಕ್ಷಿಯಾಗುವ ಅಸಂಗತ ವ್ಯಂಗ್ಯವನ್ನು ಕಾದಂಬರಿ ತನ್ನ ಒಳವಿವರಗಳಲ್ಲಿ ಕಾಣಿಸುತ್ತದೆ.

ಎಲ್ಲರ ಸುಖದುಃಖಗಳಿಗೆ ಪರಕೀಯನಾಗಿರುವ ಮನುಷ್ಯನೊಬ್ಬನನ್ನು ಇಪ್ಪತ್ತೊಂದನೇ ಶತಮಾನದಲ್ಲಿ ಹೇಗೆ ಗ್ರಹಿಸಬೇಕು? ಪ್ರಕಾಶ್ ನಾಯಕರ ಸಹಜ ಗದ್ಯಾನುವಾದ ಹಲವು ತಲೆಮಾರುಗಳನ್ನು ಪ್ರಭಾವಿಸಿದ್ದ ಕಮೂನ ಕೃತಿಯನ್ನು 'ಅನ್ಯ'ನೆನ್ನಬೇಕೋ 'ಅಪರಿಚಿತ'ನಾಗಿ ಕಾಣಬೇಕೋ ಎಂಬ ಪ್ರಶ್ನೆಯನ್ನು ಕೇಳುವಂತಿದೆ.

–ಎಸ್. ಸಿರಾಜ್ ಅಹಮದ್

ಪು:೨೧ನೇ ಶತಮಾನದ ಭಾರತೀಯ ಮುಸ್ಲಿಮರ ಅನಾಥ ಪ್ರಜ್ಞೆ ಲೇ:ಎನ್.ಕೆ.ಮೋಹನರಾಂ ಪ್ರ:ಚಾರುಮತಿ ಪ್ರಕಾಶನ, ಬೆಂಗಳೂರು (೯೪೪೮೨೬೫೫೫೬) ಪು: ೨೮೦ ಬೆ: ರೂ.೨೫೦/-

ಇತಿಹಾಸದ ಒಂದು ಸಕಾಲಿಕ ಹಿನ್ನೋಟ



ಇತಿಹಾಸವನ್ನು ಪಠ್ಯಪುಸ್ತಕಗಳಲ್ಲಿ ಬದಲಾಯಿಸುವ ಮತ್ತು ಪುನರ್‌ನಿರೂಪಿಸುವ ಪ್ರಯತ್ನ ಈಗ ನಡೆದಿದೆ. ದಾರ್ಶನಿಕ ಜಾರ್ಜ್ ಸಂತಾಯನ ಹೇಳಿದಂತೆ "ಇತಿಹಾಸದಿಂದ ಪಾಠ ಕಲಿಯದವರು ಅದನ್ನು ಪುನರಾವರ್ತನೆ ಮಾಡುವಂತಹ ತಪ್ಪು ಮಾಡುತ್ತಾರೆ." ಚರಿತ್ರೆಯ ತಪ್ಪುಗಳ ಅರಿವಿನಿಂದ ನಮ್ಮ ವರ್ತಮಾನ ಮತ್ತು ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಬಹುದೆಂಬುದನ್ನು ಅವರು ಹೇಳುತ್ತಾರೆ. ಇತಿಹಾಸವನ್ನು ತಮಗೆ ಬೇಕಾದಂತೆ ತಿರುಚಿ ಸಾಮಾಜಿಕ ಜಾಲತಾಣಗಳಲ್ಲಿ ಪಸರಿಸುವುದು ಮತ್ತು ಉತ್ಪ್ರೇಕ್ಷಿತ ಕಥನಗಳನ್ನು ತಮಗೆ ಬೇಕಾದಂತೆ ಅರ್ಥೈಸಿಕೊಂಡು, ವಿವೇಚನೆಯಿಲ್ಲದೇ ಪರಸ್ಪರ ದ್ವೇಷ ಸಾಧಿಸುವಂತಹ ಈ ಕಾಲದಲ್ಲಿ ಆಧಾರಸಹಿತವಾಗಿ ಮತ್ತು ಸಮಚಿತ್ತದಿಂದ ಚರಿತ್ರೆಯನ್ನು ಹಿನ್ನೋಡುವ ಪ್ರಸ್ತುತ ಪುಸ್ತಕ ಒಂದು ಸಕಾಲಿಕ ಪ್ರಯತ್ನವೇ ಸರಿ.

ಅಬ್ರಹಾಂ ಇರಾಲೆಯವರ 'ದಿ ಲಾಸ್ಟ್ ಸ್ಪ್ರಿಂಗ್: ದಿ ಲೈಫ್ ಅಂಡ್ ಟೈಮ್ಸ್ ಆಫ್ ಮುಘಲ್ಸ್' ಎಂಬ ಪುಸ್ತಕ, ರಫೀಕ್ ಜಕಾರಿಯಾ, ಇರ್ಫಾನ್ ಹಬೀಬ್ ಮತ್ತು ಆಸ್ಗರ್ ಅಲಿ ಇಂಜಿನಿಯರ್ ಅವರ ಬರಹಗಳನ್ನು ಅಧ್ಯಯನ ಮಾಡಿ, ಅಬ್ದುರ್ ರೆಹಮಾನ್ ಅವರ ಮಾತುಗಳನ್ನು ಉಲ್ಲೇಖಿಸಿ ಮುಸ್ಲಿಮರು ಭಾರತದಲ್ಲಿ ನೆಲೆಸಿದ ೧೨೦೦ ವರ್ಷಗಳ ಚರಿತ್ರೆಯ ಅವಲೋಕನವನ್ನು ಮಾಡಿರುವ ೩೩ ಅಧ್ಯಾಯಗಳ ಪುಸ್ತಕವಿದು. ಈ ಪುಸ್ತಕದ ಮೊದಲ ಹದಿನೈದು ಅಧ್ಯಾಯಗಳಲ್ಲಿ ಮುಸ್ಲಿಮರು ಭಾರತಕ್ಕೆ ಬಂದು, ಯುದ್ಧಗಳನ್ನು ನಡೆಸಿ, ಅಂತಿಮವಾಗಿ ಸ್ಥಳೀಯರೇ ಆಗಿ ಇಲ್ಲಿನ ರಾಜಕೀಯ ಆಡಳಿತ ಮತ್ತು ಸಂಸ್ಕೃತಿಗಳಿಗೆ ತಮ್ಮದೇ ವಿಶಿಷ್ಟ ಕೊಡುಗೆಗಳನ್ನು ನೀಡಿದ ಒಂದು ಸಾವಿರ ವರ್ಷಗಳ ಚರಿತ್ರೆಯನ್ನು ನಿರೂಪಿಸಲಾಗಿದೆ. ಮುಂದಿನ ಅಧ್ಯಾಯಗಳಲ್ಲಿ ಮುಸ್ಲಿಮರ ಅನಾಥಪ್ರಜ್ಞೆಯ ವಿವಿಧ ಆಯಾಮಗಳನ್ನು ವಿಶದವಾಗಿ ಚರ್ಚಿಸಲಾಗಿದೆ.

ಒಡೆದು ಆಳುವ ತಂತ್ರವನ್ನು ಬ್ರಿಟಿಷರು ಬಳಸಿದರು. ಸಿಪಾಯಿ ದಂಗೆ/ಪ್ರಥಮ ಸ್ವಾತಂತ್ರ್ಯ ಹೋರಾಟದ ನಂತರ ಅದರಲ್ಲಿ ಪಾಲ್ಗೊಂಡವರು, ನಾಯಕತ್ವ ವಹಿಸಿದವರು ಮುಸ್ಲಿಮರಾದ್ದರಿಂದ ಅವರಿಗೆ ಪೆಟ್ಟು ಬಿದ್ದಿತ್ತು. ಅಲ್ಲಿಂದಲೇ ಮುಸ್ಲಿಮರ ಅನಾಥಪ್ರಜ್ಞೆಯ ಬೀಜ ಮೊಳೆಯಲಾರಂಭಿಸಿತು. ಪರ್ಷಿಯನ್, ಅರೇಬಿಕ್ ಭಾಷೆಯ ಸ್ಥಾನದಲ್ಲಿ ಇಂಗ್ಲಿಷ್ ಬಂತು. ಮುಸ್ಲಿಮರು ಹಿಂದುಗಳಂತೆ ಇಂಗ್ಲಿಷ್ ಕಲಿಯಲಾಗದೇ ಹೋದರು. ಹಿಂದುಸ್ತಾನ ಇಂಡಿಯಾ ಆಯಿತು. ಅಧಿಕಾರಸ್ಥಾನದಲ್ಲಿದ್ದ ಮುಸ್ಲಿಮರನ್ನು ಕಿತ್ತುಹಾಕಲಾಯಿತು. ಮುಸ್ಲಿಮರ ಆಡಳಿತದಲ್ಲಿ ಶರಿಯತ್ ಕಾನೂನಿದ್ದು, ಹೀಗಾಗಿ ಮುಸ್ಲಿಂ ಪುರೋಹಿತಶಾಹಿ ಹೇಳಿದ್ದೇ, ವ್ಯಾಖ್ಯಾನಿಸಿದ್ದೇ ನ್ಯಾಯವಾಗಿತ್ತು. ಬದಲಾಗುತ್ತಿದ್ದ ಕಾಲಮಾನದ ಅರಿವೇ ಇರಲಿಲ್ಲ. ಬ್ರಿಟಿಷರು ತಂದ ಆಧುನಿಕ ನ್ಯಾಯಪದ್ಧತಿಯಲ್ಲಿ ಅಹವಾಲು ಸಲ್ಲಿಸಲು ಅವಕಾಶವಿತ್ತು. ಯಥಾಸ್ಥಿತಿ ಬದಲಾದಾಗಲೇ ಜನರಿಗೆ ಹಿಂದಿನ ಆಡಳಿತದ ತಪ್ಪುಗಳ ಅರಿವಾಗುವುದು. ಆದರೆ ಮುಂದೆ ಬ್ರಿಟಿಷರು ಸ್ಥಳೀಯವಾದ ಎಲ್ಲವನ್ನೂ ನಾಶ ಮಾಡಿ ಇಲ್ಲಿನ ಸಂಪತ್ತನ್ನೆಲ್ಲಾ ತಮ್ಮ ದೇಶಕ್ಕೆ ಸಾಗಿಸಿ ಅನ್ಯಾಯ ಮಾಡಿದ್ದು ಇತಿಹಾಸದ ಇನ್ನೊಂದು ಮುಖ. ಸ್ವಾತಂತ್ರ್ಯ ಬಂದ ನಂತರದ ದೇಶವಿಭಜನೆಯಿಂದ ಭಾರತದಲ್ಲಿ ಉಳಿದವರು ಬಡಮುಸ್ಲಿಮರು, ಅದರಲ್ಲೂ ದಕ್ಷಿಣ ಭಾರತದ ಮುಸ್ಲಿಮರಿಗೆ ಪಾಕಿಸ್ತಾನಕ್ಕೆ ಹೋಗುವುದು ಅವರು ಕಲ್ಪಿಸಿಕೊಳ್ಳಲೂ ಆಗದ ಸಂಗತಿಯಾಗಿತ್ತು. ಆನಂತರ ನಡೆದ ಶಾಬಾನು ಪ್ರಕರಣದಲ್ಲಿ ಕಾಂಗ್ರೆಸ್‌ನವರು ಮುಸ್ಲಿಮರ ಮತಬ್ಯಾಂಕ್‌ಗಾಗಿ ಅವರನ್ನು ಓಲೈಸುವ ರಾಜಕೀಯ ಮಾಡಿದ್ದು, ಇದರಿಂದಾಗಿ ನಡೆದ ಕೋಮುಗಲಭೆಗಳು, ಮುಸ್ಲಿಮರು ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳದೇ ಪ್ರತ್ಯೇಕವಾಗಿಯೇ ಇದ್ದುದು, ಈಗಿನ ಬಿಜೆಪಿ ಸರ್ಕಾರದಲ್ಲಿ ಮುಸ್ಲಿಮರನ್ನು ಬಹಿರಂಗವಾಗಿಯೇ ಭಯೋತ್ಪಾದಕರೆಂದು ಬಿಂಬಿಸುತ್ತಿರುವುದು, ಇವೆಲ್ಲಾ ಮುಸ್ಲಿಮರ ಅನಾಥಪ್ರಜ್ಞೆಗೆ ಕಾರಣವಾಗಿದೆ ಎಂಬುದನ್ನು ವಿವರವಾಗಿ ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ.

ಮುಸ್ಲಿಂ ಉಗ್ರವಾದಿಗಳಿಂದ ಅವರು ಉಗ್ರವಾದಿಗಳಾಗಲು ಕಾರಣಗಳೇನು, ತಾಲಿಬಾನಿಗಳಿಂದ ಭಾರತೀಯ ಮುಸ್ಲಿಮರ ಮೇಲೆ ಏನು ಪರಿಣಾಮವಾಗಿದೆ ಎಂಬುದರ ಬಗ್ಗೆ ಹೆಚ್ಚಿನ ಚರ್ಚೆಯಾಗಿಲ್ಲ. ಈ ಚರಿತ್ರೆ ನಮಗೆ ತಿಳಿದುದೇ ಆದರೂ ಮುಸ್ಲಿಮರಿಂದ ಹಿಂದೂಗಳಿಗೆ ಅನ್ಯಾಯವಾಗಿದೆಯೆಂದು ಈಗ ಅದಕ್ಕೆ ಪ್ರತೀಕಾರದ ಕ್ರಮ ತೆಗೆದುಕೊಳ್ಳುವತ್ತ ಸಾಗುತ್ತಿದೆ ನಮ್ಮ ಈಗಿನ ಭಾರತ. ಸಾಮಾಜಿಕ-ಧಾರ್ಮಿಕ-ರಾಜಕೀಯ ಧ್ರುವೀಕರಣವಾಗುತ್ತಿರುವುದಕ್ಕೆ ಎರಡೂ ಧರ್ಮ/ಕೋಮಿನವರು ಕಾರಣರಾಗಿರುವುದರಿಂದ ಈ ಪುಸ್ತಕ ಜನರ ಕಣ್ಣು ತೆರೆಸುವಲ್ಲಿ ನೆರವಾಗಬಹುದೇನೋ ಎಂಬ ಆಶಯವಿಟ್ಟುಕೊಳ್ಳಬಹುದೇನೋ?


–ಕೆ. ಪದ್ಮಾಕ್ಷಿ

'ಹೊಸ ಮನುಷ್ಯ'ದ ಎಲ್ಲ ಓದುಗರಿಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು



ಎಸ್.ಎ. ದ್ಯಾವಲಾಪುರ
ಮತ್ತು ಕುಟುಂಬ
ಧಾರವಾಡ

'ಹೊಸ ಮನುಷ್ಯ'ದ ಎಲ್ಲ ಓದುಗರಿಗೂ
ದೀಪಾವಳಿಯ ಹಾರ್ದಿಕ ಶುಭಾಶಯಗಳು




ಸಿ. ಚನ್ನಬಸವಣ್ಣ
ಮತ್ತು ಕುಟುಂಬ
ಬಳ್ಳಾರಿ

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಕನ್ನಡ ರಾಜ್ಯೋತ್ಸವದ ಶುಭಾಶಯಗಳು



ರಾಷ್ಟ್ರಕವಿ ಕುವೆಂಪು ವಿಚಾರ ವೇದಿಕೆ
೭೨, 'ಸರ್ವೋದಯ', ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ
ಬಸವನಗುಡಿ, ಬೆಂಗಳೂರು-೫೬೦ ೦೦೪

ತಿಂಗಳ ಕೊನೆಯ ಸಾಲುಗಳು



ನರಕಕ್ಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲಿಸಾಕಿದ್ರೂನೆ-
ಮೂಗ್ನಲ್ ಕನ್ನಡ್ ಪದವಾಡ್ತೀನಿ!
ನನ್ ಮನಸನ್ನ್ ನೀ ಕಾಣೆ!
ಯೆಂಡ ಹೋಗ್ಲಿ ! ಯೆಡ್ತಿ ಹೋಗ್ಲಿ !
ಎಲ್ಲಾ ಕೊಚ್ಕೊಂಡ್ ಹೋಗ್ಲಿ !
ಪರ್ಪಂಚ್ ಇರೋ ತನಕ ಮುಂದೆ
ಕನ್ನಡ್ ಪದಗೊಳ್ ನುಗ್ಲಿ!

–ಜಿ.ಪಿ.ರಾಜರತ್ನಂ (ಕನ್ನಡ್ ಪದಗೊಳು)

ಶುಭಾಶಯಗಳೊಂದಿಗೆ,

ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್
ಲೆಕ್ಕ ಪರಿಶೋಧಕರು, ಮೈಸೂರು
ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204(Karnataka)